ಕರ್ನಾಟಕ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1236

02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ. ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)

03. ಉತ್ತರಿಸುವ ದಿನಾಂಕ : 23-12-2021

04. ಉತ್ತರಿಸುವ ಸಚಿವರು. : ಮಾನ್ಯ ಗೃಹ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪೊಲೀಸ್ ಹುದ್ದೆ ಸೇರಿದಂತೆ ಸರ್ಕಾರಿ ಹುದ್ದೆ ಕೊಡಿಸುವುದಾಗಿ ಸುಳ್ಳು ಹೇಳಿ ಅಮಾಯಕರಿಂದ ಹಣ ವಸೂಲಿ ಮಾಡಿ ವಂಚಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಒಟ್ಟು ಎಷ್ಟು ಪ್ರಕರಣಗಳು ರಾಜ್ಯಾದ್ಯಾಂತ ದಾಖಲಾಗಿವೆ; (ಜಿಲ್ಲಾವಾರು ದಾಖಲಾದ ಪ್ರಕರಣಗಳು/ದೂರುಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; ಈ ಪ್ರಕರಣಗಳು ಯಾವ ಹಂತದಲ್ಲಿವೆ;	ಹೌದು. ರಾಜ್ಯದಲ್ಲಿ ಪೊಲೀಸ್ ಹುದ್ದೆ ಸೇರಿದಂತೆ ಸರ್ಕಾರಿ ಹುದ್ದೆ ಕೊಡಿಸುವುದಾಗಿ ಸುಳ್ಳು ಹೇಳಿ ಅಮಾಯಕರಿಂದ ಹಣ ವಸೂಲಿ ಮಾಡಿ ವಂಚಿಸಿರುವ ಜಿಲ್ಲಾವಾರು ದಾಖಲಾಗಿರುವ ಪ್ರಕರಣಗಳ ಮಾಹಿತಿಯನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ. ದಾಖಲಾದ ಪ್ರಕರಣಗಳ ಪ್ರಸ್ತುತ ಹಂತದ ಮಾಹಿತಿ ಹಾಗೂ ವಂಚನೆಗೊಳಗಾದವರಿಗೆ ಹಿಂದಿರುಗಿಸಿದ ಹಣದ ಜಿಲ್ಲಾವಾರು/ಪ್ರಕರಣವಾರು ವಿವರ ಹಾಗೂ ಪ್ರಕರಣದ ಪ್ರಸ್ತುತ ಹಂತದ ಮಾಹಿತಿಯನ್ನು **ಅನುಬಂಧ-1** ಮತ್ತು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಆ	ಇದುವರೆಗೂ ವಂಚನೆಗೊಳಗಾದ ಎಷ್ಟು ಅಮಾಯಕರಿಗೆ ನ್ಯಾಯ ಒದಗಿಸಿ ಅವರ ಹಣವನ್ನು ಹಿಂದಿರುಗಿಸಲಾಗಿದೆ;	
ಇ	ಕಾಟಾಚಾರವೆಂಬಂತೆ ಪ್ರಕರಣಗಳು ದಾಖಲಿಸಿ ವರ್ಷಾನುಗಟ್ಟಲೆ ಇತ್ಯರ್ಥ ಗೊಳ್ಳದೆ ವಿಳಂಬ ಗೊಳ್ಳುತ್ತಿರುವುದು ಇನ್ನಷ್ಟು ಪ್ರಕರಣಗಳು ಹೆಚ್ಚಾಗಲು ಎಡೆ ಮಾಡಿಕೊಡುತ್ತಿರುವುದು ಇಲಾಖೆಯ ವೈಫಲ್ಯವಲ್ಲವೇ: ಈ ಬಗ್ಗೆ ಸರ್ಕಾರದ ನಿಲುವೇನು;(ಸ್ಪಷ್ಟವಾದ ವಿವರ ನೀಡುವುದು)	ವಂಚನೆಗೊಳಗಾದ ಬಗ್ಗೆ ದೂರುಗಳು ಬಂದ ತಕ್ಷಣ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು, ಆರೋಪಿಗಳನ್ನು ಬಂಧಿಸಿ, ತನಿಖೆಯನ್ನು ಕ್ರಮಬದ್ಧವಾಗಿ ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಲಾಗುತ್ತಿದೆ. ಸದರಿ ಪ್ರಕರಣಗಳಲ್ಲಿ ವಿಳಂಬ ನೀತಿಯನ್ನು ತೋರಿಸದೇ ತ್ವರಿತಗತಿಯಲ್ಲಿ ವಿಲೇವಾರಿ ಆಗಲು ಮಾನ್ಯ ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳಲಾಗಿದೆ ಹಾಗೂ ಪ್ರಕರಣದಲ್ಲಿ ಆರೋಪಿತರಿಗೆ ಶಿಕ್ಷೆಯಾಗುವಂತೆ ಸಾಕ್ಷಾಧಾರಗಳಿಗೆ ಸಾಕ್ಷಿ ನುಡಿಯಲು ಸೂಕ್ತ ತಿಳುವಳಿಕೆಯನ್ನು ನೀಡಲಾಗುತ್ತಿದೆ.

..

ಈ	ದಿನಂಪ್ರತಿ ಇಂತಹ ಅನೇಕ ವಂಚನೆ ಪ್ರಕರಣಗಳು ಬೆಳಕಿಗೆ ಬರುತ್ತಿದ್ದರೂ ಸರ್ಕಾರವು ಯಾವುದೇ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳದೆ ಇರಲು ಕಾರಣಗಳೇನು?	ರಾಜ್ಯದ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಇಂತಹ ಪ್ರಕರಣಗಳು ಜರುಗದಂತೆ ಮುನ್ನೆಚ್ಚರಿಕೆ ದೃಷ್ಟಿಯಿಂದ ಕಟ್ಟು ನಿಟ್ಟಿನ ಕ್ರಮಗಳನ್ನು ಮೇಲಿಂದ ಮೇಲೆ ಕೈಗೊಳ್ಳಲಾಗುತ್ತಿದೆ. ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಜನಸ್ನೇಹಿ ಮತ್ತು ಬೀಟ್ ಸಿಬ್ಬಂದಿಗಳಿಂದ ಹಾಗೂ ಬಾತ್ಮಿದಾರರಿಂದ ಮಾಹಿತಿಯನ್ನು ಪಡೆದುಕೊಂಡು ಪೊಲೀಸ್ ಹುದ್ದೆ ಸೇರಿದಂತೆ ಸರ್ಕಾರಿ ಹುದ್ದೆ ಕೊಡಿಸುವುದಾಗಿ ಸುಳ್ಳು ಹೇಳಿ ಅಮಾಯಕರಿಂದ ಹಣ ವಸೂಲಿ ಮಾಡುವವರ ವಿರುದ್ಧ ಕಾನೂನು ರೀತ್ಯ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ, ವಂಚನೆಗೊಳಗಾದ ಬಗ್ಗೆ ದೂರುಗಳು ಬಂದ ತಕ್ಷಣ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುತ್ತಿದೆ ಹಾಗೂ ವಿವಿಧ ಎಲೆಕ್ಟ್ರಾನಿಕ್ ಮೀಡಿಯಾ ಮತ್ತು ಪ್ರೆಸ್ ಮೀಡಿಯಾ ಮೂಲಕ ಎಚ್ಚರಿಕೆಯಿಂದಿರಲು ಜನರಿಗೆ ಅರಿವು ಮೂಡಿಸಲಾಗುತ್ತಿದೆ.

HD 49PCQ2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

ಜಿಲ್ಲಾವಾರು ದಾಖಲಾಗಿರುವ ಪ್ರಕರಣಗಳು

ಕ್ರಸಂ	ನಗರ/ಜಿಲ್ಲೆ	2018	2019	2020	2021 (ನವಂಬರ್ ವರೆಗೆ)
1.	ಬೆಂಗಳೂರು ನಗರ	20	20	8	29
2.	ಮೈಸೂರು ನಗರ	0	0	1	1
3.	ಹು-ಧಾರವಾಡ ನಗರ	1	2	2	4
4.	ಮಂಗಳೂರು ನಗರ	0	1	0	0
5.	ಬೆಳಗಾವಿ ನಗರ	1	2	3	2
6.	ಕಲಬುರಗಿ ನಗರ	1	0	1	1
7.	ಬೆಂಗಳೂರು ಜಿಲ್ಲೆ	1	1	2	1
8.	ತುಮಕೂರು	4	1	0	3
9.	ಕೋಲಾರ	2	0	0	2
10.	ಕೆ.ಜಿ.ಎಫ್	0	1	0	0
11.	ರಾಮನಗರ	0	0	1	1
12.	ಚಿಕ್ಕಬಳ್ಳಾಪುರ	0	1	0	2
13.	ಮೈಸೂರು ಜಿಲ್ಲೆ	0	2	0	1
14.	ಹಾಸನ	3	1	0	2
15.	ಚಾಮರಾಜನಗರ	1	1	1	0
16.	ಕೊಡಗು	0	0	0	2
17.	ಮಂಡ್ಯ	0	0	2	0
18.	ದಾವಣಗೆರೆ	3	3	5	3
19.	ಹಾವೇರಿ	1	1	1	0
20.	ಶಿವಮೊಗ್ಗ	0	1	2	2
21.	ಚಿತ್ರದುರ್ಗ	0	1	0	1
22.	ದಕ್ಷಿಣ ಕನ್ನಡ	0	0	0	0
23.	ಉತ್ತರ ಕನ್ನಡ	2	3	1	5
24.	ಚಿಕ್ಕಮಗಳೂರು	0	0	2	0
25.	ಉಡುಪಿ	0	0	0	1
26.	ಬೆಳಗಾವಿ ಜಿಲ್ಲೆ	3	2	2	1
27.	ಗದಗ	0	0	1	1
28.	ವಿಜಯಾಪುರ	0	0	0	1
29.	ಧಾರವಾಡ	0	0	1	0
30.	ಬಾಗಲಕೋಟೆ	7	3	1	3
31.	ಕಲ್ಬುರ್ಗಿ ಜಿಲ್ಲೆ	0	0	0	0
32.	ಬೀದರ್	0	1	1	0
33.	ಯಾದಗಿರಿ	0	0	0	0
34.	ಬಳ್ಳಾರಿ	2	1	1	4
35.	ರಾಯಚೂರು	1	2	0	2
36.	ಕೊಪ್ಪಳ	0	0	0	0
37.	ವಿಜಯನಗರ ಜಿಲ್ಲೆ.	0	0	0	0
38.	ರೈಲ್ವೇಸ್	0	4	7	0
ಒಟ್ಟು		**53**	**55**	**46**	**75**

ಅನುಬಂಧ -1

ಬೆಂಗಳೂರು ನಗರ

2018

<table>
<tr><th>ಕ್ರ. ಸಂ</th><th>ಪೊಲೀಸ್ ಠಾಣೆಯ ಹೆಸರು</th><th>ಮೊ.ಸಂ.ಕ ಕಲಂ. ದಿನಾಂಕ</th><th>ಫಿರ್ಯಾದುದಾರರ ಹೆಸರು ಮತ್ತು ವಿಳಾಸ</th><th>ಆರೋಪಿತರ ಹೆಸರು ಮತ್ತು ವಿಳಾಸ</th><th>ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು</th><th>ಪ್ರಕರಣದ ಪ್ರಸ್ತುತ ಹಂತ</th></tr>
<tr><td>1</td><td>ಹಲಸೂರು</td><td>303/2018 ಕಲಂ 406, 420 ಐಪಿಸಿ</td><td>ಶ್ರೀ ಪ್ರಕಾಶ್.ಪಿ. ವಾಸ: ನಂ 34, ಯಲ್ಲಮ್ಮ ಟೆಂಪಲ್ ಸ್ಟ್ರೀಟ್ ಹಲಸೂರು ಬೆಂಗಳೂರು.</td><td>ರವೀಂದ್ರನ್ ಬಿನ್ ಲೇಟ್ ಪದ್ಮನಾಭನ್ 63 ವರ್ಷ ವಾಸ: ನಂ 40, ಫ್ಲಾಟ್ ನಂ 102, ಎಸ್.ಆರ್ .ರೂಬಿ ಅಪಾರ್ಟಮೆಂಟ್ಸ್ ದೂಪನಹಳ್ಳಿ ಹೆಚ್ಎ ಎಲ್ 2ನೇ ಹಂತ ಬೆಂಗಳೂರು.</td><td>ಇಲ್ಲ</td><td>ಸಿಸಿ ನಂಬರ್ 66/2020 ನ್ಯಾಯಲಯದಲ್ಲಿ ವಿಚಾರಣೆಯಲ್ಲಿ ರುತ್ತದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿ ರವೀಂದ್ರನ್ ಎಂಬಾತನು ಪಿರ್ಯಾದುದಾರರ ಮಗನಿಗೆ ಆರ್ಮಿಗೆ ಸೇರಿದ ಎಎಸ್ಸಿ ರೆಕಾರ್ಡ್ ನಲ್ಲಿ ಕೆಲಸ ಕೊಡಿಸುತ್ತೇನೆಂದು ಹೇಳಿ 6,50,000/- ರೂ ಹಣವನ್ನು ತೆಗೆದುಕೊಂಡು ಕೆಲಸವನ್ನು ಕೊಡಿಸದೆ ಹಣವನ್ನು ವಾಪಸ್ಸು ಕೊಡಿಸದೆ ಮೋಸ ಮಾಡಿರುತ್ತಾರೆಂದು ಕೊಟ್ಟ ದೂರು.</td></tr>
<tr><td>2</td><td>ಮಲ್ಲೇಶ್ವರಂ ಪಿಎಸ್</td><td>151/2018 ಕಲಂ 420,468,471,465 ರೆ/ವಿ 34 ಐಪಿಸಿ</td><td>ಅಪಟೆಕ್ ಕಂಪ್ಯೂಟರ್ ಟ್ರೇನರ್ 15ನೇ ಕ್ರಾಸ್ ಮಲ್ಲೇಶ್ವರಂ</td><td>1)ಮಂಜುನಾಥ 2)ಸುಧಾರಾಣಿ</td><td>ಇಲ್ಲ</td><td>ಮಾನ್ಯ 32ನೇ ಎಸಿಎಂಎಂ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಸಿಸಿ ನಂ.3388/2020 ದಿನಾಂಕ:14/03/2022</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಈ ಕೇಸಿನ ಸಾರಾಂಶವೇನೆಂದರೆ ದೂರುದಾರರು ಮಲ್ಲೇಶ್ವರಂ 15 ನೇ ಕ್ರಾಸ್‌ನಲ್ಲಿರುವ ಆಪ್ ಟೆಕ್ ಕಂಪ್ಯೂಟರ್ ಸೆಂಟರ್‌ನಲ್ಲಿ ಟ್ರೈನರ ಆಗಿ ಕೆಲಸ ಮಾಡಿಕೊಂಡಿದ್ದು. ಕಂಪ್ಯೂಟರ್ ತರಬೇತಿಗಾಗಿ ಫಿರ್ಯಾದುದಾರರ ಕ್ಲಾಸ್‌ಗೆ ಸೇರಿದ್ದ ಸುಧಾರಾಣಿ ಎಂಬುವವರು ಫಿರ್ಯಾದುದಾರರನ್ನು ಸ್ನೇಹಿತೆಯಾಗಿ ಪರಿಚಯಿಸಿಕೊಂಡು ದಿನಾಂಕ 10-11-2017 ರಂದು ಫಿರ್ಯಾದುದಾರರಿಗೆ ರೆವಿನ್ಯೂ ಡಿಪಾರ್ಟಮೆಂಟ್ ನಲ್ಲಿ ಉದ್ಯೋಗ ಕೊಡಿಸುವುದಾಗಿ ಮಂಜುನಾಥ ಎಂಬುವವರನ್ನು ಪರಿಚಯಿಸಿದ್ದು ಸುಧಾರಾಣಿ ಹಾಗೂ ಮಂಜುನಾಥರವರು ಹೈಕೋರ್ಟ್‌ನಲ್ಲಿಯೂ ಸಹ ಕೆಲಸ ಕೊಡಿಸುವುದಾಗಿ ನಂಬಿಸಿ12 ಲಕ್ಷ ರೂ ಗಳನ್ನು ನೀಡುವಂತೆ ಒತ್ತಾಯಿಸಿದ್ದು ನನಿಂದ 15,00,000/- ರೂ ಹಣವನ್ನು ಆರ್.ಟಿ.ಜಿ.ಎಸ್ ಮುಖಾಂತರ ಹಾಗೂ ನಗದಾಗಿ ಪಡೆದುಕೊಂಡು ಕೆಲಸ ಕೊಡಿಸದೆ ಉಳಿದ 10,00,000/- ರೂ ಹಣವನ್ನು ಸಹ ವಾಪಸ್ ಕೊಡದೆ ಮೋಸ ಮಾಡಿರುವ ಶ್ರೀಮತಿ ಬಿಂದು ಹಾಗೂ ಅಲ್ಲಾಭಕ್ಷ ರವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ.</td></tr>
<tr><td>3</td><td>ಮಹಾಲಕ್ಷ್ಮೀ ಲೇಔಟ್ ಪಿಎಸ್</td><td>ಮೊ.ಸಂ. 378/2018 ಕಲಂ 420 ಐಪಿಸಿ.</td><td>ಶ್ರೀ ಸುನೀಲ್. ನಂದಿನಿ ಲೇಔಟ್ ಬೆಂ-96.</td><td>ಗೋವಿಂದರಾಜು ಬಿನ್ ಗಂಗವೆಂಕಟಯ್ಯ 31ವರ್ಷ ವಾಸ ನಂ 276, 3ನೇ ಮೈನ್, ಅಂದ್ರಹಳ್ಳಿ ಬೆಂ-91.</td><td>21 ಲಕ್ಷರೂಗಳು.</td><td>ಸಿಸಿ ನಂ.24882/19 ರಲ್ಲಿಸಿಎಂಎಂ ನ್ಯಾಯಾಲಯದಲ್ಲಿವಿಚಾರಣೆ ಯಲ್ಲಿದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಈ ಪ್ರಕರಣದ ಸಾರಾಂಶವೇನೆಂದರೆ ಪಿರ್ಯಾದುದಾರರ ಬಳಿ ಆರೋಪಿಯು ಪಿ.ಎಸ್.ಐ ಕೆಲಸ ಕೊಡಿಸುವುದಾಗಿ ನಂಬಿಸಿ 2015 ಮಾರ್ಚ್ ಮಾಹೆಯಲ್ಲಿಒಟ್ಟು 21 ಲಕ್ಷ ರೂಗಳನ್ನು ಪಡೆದುಕೊಂಡು ಮತ್ತು ತನ್ನ ಸಂಬಂಧಿಯಾದ ಶಿವಕುಮಾರ್ ರವರ ಬಳಿ ಕಾನ್ಸ್ಟೇಬಲ್ ಕೆಲಸ ಕೊಡಿಸುತ್ತೇನೆಂದು ಹೇಳಿ 7 ಲಕ್ಷ ರೂಗಳನ್ನು ಪಡೆದುಕೊಂಡು</td></tr>
</table>

ಕೆಲಸವನ್ನುಕೊಡಿಸದೇಇದುವರೆವಿರು ಹಣವನ್ನು ವಾಪಸ್‌ಕೊಡದೇ ಮತ್ತು ಕೆಲಸವನ್ನು ಸಹ ಕೊಡಿಸದೇ ಮೋಸ ಮಾಡಿರುತ್ತಾನೆಎಂದುಕೊಟ್ಟದೂರು.						
4	ಬಾಗಲಗುಂಟೆ ಪೊಲೀಸ್ ಠಾಣೆ	ಮೊ.ಸಂ 344/2018 ಕಲಂ-406.420.471 ಮತ್ತು 34 ಐಪಿಸಿ	ಮಂಜುನಾಥ ಪಿ ಬಿನ್ ಲೇ.ಪಟ್ಟಸ್ವಾಮಿಗೌಡ 34 ವರ್ಷ ನಂ-54/18 4ನೇ ಅಡ್ಡರಸ್ತೆ ಸಿದ್ದೇಶ್ವರಬಡಾವಣೆ ಬಾಗಲಗುಂಟೆ ಬೆಂ-73 ಮೊ-9731276753	ಎ-1. ಮನು ಕುಮಾರ್ ಬಿನ್ ವೇಧರಾಜ್ 25ವರ್ಷ ವಾಸ ನಂ:73. 1ನೇ ಮುಖ್ಯರಸ್ತೆ. 1ನೇ ಅಡ್ಡರಸ್ತೆ. ಅಗ್ರಹಾರ ದಾಸರಹಳ್ಳಿ ಮಾಗಡಿ ರಸ್ತೆ ಬೆಂಗಳೂರು ನಗರ ಎ-2. ಶ್ರೀಮತಿ ಸುಚಿತ್ರಾ ಕೋಂ ನಾಗರಾಜು ವಾಸ ನಂ: 24. 6ನೇ ಕ್ರಾಸ್ ಸಿಡೇದಹಳ್ಳಿ ಬೆಂಗಳೂರು ನಗರ ಎ-3 ಸಂತೋಷ್ ಕುಮಾರ್ ಬಿನ್ ಮುನಿಯಪ್ಪ 27ವರ್ಷ. ವಾಸ: ಸರ್ಜಾಪುರ ಆನೆಕಲ್ ತಾಲ್ಲೂಕ್ ಬೆಂಗಳೂರು ನಗರ	ಆರೋಪಿಗಳ ವಿರುದ್ಧ ದೋಷರೋಪಣ ಪಟ್ಟಿ ಸಲ್ಲಿಸಿರುತ್ತದೆ	ಸಿಸಿ ನಂ: 2606/2021 ರಲ್ಲಿ ವಿಚಾರಣೆಯಲ್ಲಿದೆ

ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- 10ನೇ ಕ್ರಾಸ್ ಸ್ವಾತಿಸ್ಕೂಲ್ ಹಿಂಭಾಗ ಬಾಗಲಗುಂಟೆ ಎಂಬಲ್ಲಿ ವಾಸವಿದ್ದಾಗ ಅದೇ ಬಿಲ್ಡಿಂಗ್‌ನಲ್ಲಿ ವಾಸವಿದ್ದ ಸುಚಿತ್ರ
ದೂರುದಾರರು ಮೊದಲು ವಾಸವಿದ್ದ ಹಳೆಯ ವಿಳಾಸ ಪರಿಚಯ ಮಾಡಿಕೊಂಡು ಮನುಕುಮಾರ್ ಎಂಬುವವರನ್ನು ತನ್ನ ಅಣ್ಣನೆಂದು ಪರಿಚಯ ಮಾಡಿಕೊಂಡು ಅವನಿಗೆ
ಕೋಂ ನಾಗರಾಜ್ ಎಂಬುವವರು ನನ್ನ ಪತ್ನಿಯನ್ನು ಪರಿಚಯ ಮಾಡಿಕೊಂಡು ಮನುಕುಮಾರ್ ಎಂಬುವವರನ್ನು ತನ್ನ ಅಣ್ಣನೆಂದು ಪರಿಚಯ ಮಾಡಿಕೊಂಡು ಅವನಿಗೆ
ಕೋಂ ನಾಗರಾಜ್ ಎಂಬುವವರು ನನ್ನ ಪತ್ನಿಯನ್ನು ಪರಿಚಯ ಮಾಡಿಕೊಂಡು ಮನುಕುಮಾರ್ ಎಂಬುವವರನ್ನು ತನ್ನ ಅಣ್ಣನೆಂದು ಪರಿಚಯ ಮಾಡಿಕೊಂಡು ಅವನಿಗೆ ಸೇರಿ ನಮ್ಮ ಊರಿನ 11 ಜನರಿಂದ
ಸಾಕಷ್ಟು ಸಂಪರ್ಕಗಳಿವೆ ಎಂದು ಹೇಳಿ ನಿಮ್ಮ ಕಡೆಯ ಹುಡುಗರಿಗೆ ಬೆಸ್ಕಾಂನಲ್ಲಿ ಕೆಲಸ ಕೊಡಿಸುವುದಾಗಿ ತಿಳಿಸಿದರು ಆಗ ನಾವು ನಂಬಿ ನಾನು ಸೇರಿ ನಮ್ಮ ಊರಿನ 11 ಜನರಿಂದ
ಒಟ್ಟು 33.50.000/-(ಮೂವತ್ತಮೂರು ಲಕ್ಷದ ಐವತ್ತು ಸಾವಿರ) ಹಣವನ್ನು ನಗದು ಮತ್ತು ಬ್ಯಾಂಕ್ ಮೂಲಕ ಹಣ ಪಡೆದು ಕೆಲಸ ಕೊಡಿಸದೆ ಮೋಸ ಮಾಡಿರುವ್
ಆರೋಪಿಗಳಾದ ಸುಚಿತ್ರ ನಾಗರಾಜ್ ಮತ್ತು ಮನುಕುಮಾರ್ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ನೀಡಿದ ದೂರು ಇತ್ಯಾದಿ.

5	ಆರ್.ಟಿ.ನಗರ	363/18 ಕಲಂ 419-420-149-120ಬಿ ಐಪಿಸಿ	ಶ್ರೀ ರಾಜೇಶ್. ಎಂ ಬಿನ್ ಭೀಮಣ್ಣ 33 ವರ್ಷ. ನಂ. 35. ಬಾಲಾಜಿ ಲೇಔಟ್. 2ನೇ ಮೈನ್. 2ನೇ ಕ್ರಾಸ್. ಚೋಳನಗರ. ಆರ್.ಟಿ. ನಗರ. ಬೆಂ.	1.ವಿನಯ ರಾಮ್. 2.ಶಿವಪ್ರಕಾಶ್. 3.ಶಾಂತ 4.ವರ್ಷಿಣಿ ರಾಧ. 5.ವಿದ್ಯಾರಾಮ್. 6.ದೀಪಕ್ 7.ರಕ್ಷಾ 8.ಹನುಮಂತರಾವ್ 9.ಸುಬ್ಬಾಚಾರಿ. 10.ಪ್ರದೀಪ್	-	ಸಿಸಿ ನಂ-8683/21 ಹಾಗೂ ಸಿಸಿ ನಂ 15395/19 ರಲ್ಲಿ ವಿಚಾರಣೆಯಲ್ಲಿರುತ್ತದೆ.

ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಕೆಲಸ ಕೊಡಿಸುತ್ತೇನೆಂದು ಹೇಳಿ ಒಳಸಂಚು ನಡೆಸಿ
ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ. ಪ್ರಕರಣದ ಪಿರ್ಯಾದುದಾರರಿಗೆ ಆರೋಪಿತರುಗಳು ಕೆ.ಪಿ.ಎಸ್.ಸಿ ಮೂಲಕ ದಿನಾಂಕಗಳಲ್ಲಿ ಒಟ್ಟು 48,00,000/-
ಪಿರ್ಯಾದುದಾರರಿಗೆ ಹಾಗೂ ಅವರ ಸ್ನೇಹಿತ ರವಿಕುಮಾರ್ ನೀರಲಕೇರಿ ರವರಿಂದ 2016ನೇ ಸಾಲಿ ಮೇ ತಿಂಗಳಿಂದ ವಿವಿಧ ದಿನಾಂಕಗಳಲ್ಲಿ ಒಟ್ಟು 48,00,000/-
ಪಿರ್ಯಾದುದಾರರಿಗೆ ಹಾಗೂ ಅವರ ಸ್ನೇಹಿತ ರವಿಕುಮಾರ್ ನೀರಲಕೇರಿ ರವರಿಂದ ಕೆಲಸವನ್ನು ಕೊಡಿಸದೇ ಹಣವನ್ನು ಸಹ ವಾಪಸ್ ಕೊಡದೇ ಮೋಸಗೊಳಿಸಿ ಹಣವನ್ನು ಕೇಳಲು
ರೂಗಳನ್ನು ಪಡೆದುಕೊಂಡು ಕೆ.ಪಿ.ಎಸ್.ಸಿ ಮೆಂಬರ್‌ಗಳ ಪಿಎ ಎಂದು ನಟಿಸಿ ಕೆಲಸವನ್ನು ಕೊಡಿಸದೇ ಹಣವನ್ನು ಸಹ ವಾಪಸ್ ಕೊಡದೇ ಮೋಸಗೊಳಿಸಿ ಹಣವನ್ನು ಕೇಳಲು
ಹೋದಾಗ ಪ್ರಾಣ ಬೆದರಿಕೆ ಹಾಕಿರುವ ಆರೋಪಿತರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಕೊಟ್ಟ ದೂರು ಇತ್ಯಾದಿ.

6	ಉಪ್ಪಾರಪೇಟೆ	90/2018 ಕಲಂ 420 ಐಪಿಸಿ. ದಿ:11/04/2018	ಶ್ರೀ ಶರಣಯ್ಯ ಬಿನ್ ಈಶ್ವರಯ್ಯ. 35 ವರ್ಷ. ವಾಸ ನಂ.448. ಪಂಚಾಕ್ಷರಿನಗರ. 6ನೇ ಕ್ರಾಸ್. ಬುರುಬುರೆ	ರಾಮಚಂದ್ರಯ್ಯ ಬಿನ್ ರಂಗದಾಸಯ್ಯ. 59 ವರ್ಷ. ವಾಸ ನಂ.39-22. ಚಾಮುಂಡೇಶ್ವರಿದೇವಸ್ಥಾನದ ಹತ್ತಿರ. ಮೇದರ ಬೀದಿ. ಹಾಸನ ಟೌನ್.	ಇಲ್ಲಾ	ಆರೋಪಿ ಮರಣ ಹೊಂದಿದ್ದರಿಂದ ದಿ:17/10/2019 ರಂದು ಪ್ರಕರಣವನ್ನು ಮುಕ್ತಾಯಗೊಳಿಸಿದೆ. (ಅಬೇಟೆಡ್)

			ಫ್ಲಾಟ್, ಗದಗಟೌನ್&ಜಿಲ್ಲೆ.			
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರಿಗೆ ವಿಕಾಸ ಸೌಧದಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ 6.50,000/-ರೂಗಳನ್ನು ಪಡೆದುಕೊಂಡು ಕೆಲಸವನ್ನುಕೊಡಿಸದೇ ಹಣವನ್ನೂ ಹಿಂತಿರುಗಿಸದೇ ಮೋಸ ಮಾಡಿರುತ್ತಾನೆಂದು ಕೊಟ್ಟ ದೂರು						
7	ಉಪ್ಪಾರಪೇಟೆ	110/2018 ಕಲಂ 420 ಐಪಿಸಿ. ದಿ:22/04/2018	ಶ್ರೀ ಕೃಷ್ಣ ಅರಸ್ ಬಿನ್ ನಂಜರಾಜೇಅರಸ್, 56 ವರ್ಷ, ವಾಸ ನಂ.ಇಲ್ಲಾ. ನಿಡಗಲ್ಲುಗ್ರಾಮ, ಟಿ.ಬೇಕುಪ್ಪೆ ಪೋಸ್ಟ್, ಕನಕಪುರತಾ॥ ರಾಮನಗರಜಿಲ್ಲೆ.	ಶ್ರೀನಿವಾಸಗೌಡಎನ್.ಆರ್, ವಿಜಯನಗರ, ಬೆಂಗಳೂರು.	ಇಲ್ಲಾ	ಸದರಿ ಪ್ರಕರಣ ಮಾನ್ಯ3ನೇ ಎಸಿಎಂಎಂ ನ್ಯಾಯಾಲಯದ ಸಿಸಿ ನಂ.16313/2019ರಲ್ಲಿ ವಿಚಾರಣೆಯಲ್ಲಿದ್ದು. ಮುಂದಿನ ವಿಚಾರಣೆ ದಿ:15/12/2021 ಆಗಿರುತ್ತದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರ ಮಕ್ಕಳಿಗೆ ಆರೋಪಿ ಕೆ.ಪಿ.ಎಸ್.ಸಿ ಯಲ್ಲಿ ವಿದ್ಯಾರ್ಹತೆಗನುಗುಣವಾಗಿಕೆಲಸ ಕೊಡಿಸುವುದಾಗಿ 29.20,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.						
8	ಉಪ್ಪಾರಪೇಟೆ	116/2018 ಕಲಂ 420 ಐಪಿಸಿ. ದಿ:01/05/2018	ಶ್ರೀ ರವೀಂದ್ರನಾಥದೇಸಾಯಿ ಬಿನ್ ದೊಡ್ಡಪ್ಪದೇಸಾಯಿ, ಬಬಲೇಶ್ವರಗ್ರಾಮ, ಸಿಂಧಗಿ ತಾ॥ ವಿಜಯಪುರಜಿಲ್ಲೆ.	1) ತಿಮ್ಮೇಶ್. 2) ಉಮೇಶ್‌ಗೌಡ	ಇಲ್ಲಾ	ಸಿಸಿ ನಂ.3990/2019 ರಲ್ಲಿವಿಚಾರಣೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಗಳು ಪಿರ್ಯಾದುದಾರರಸ್ನೇಹಿತನಮಗನಿಗೆ ಕೆಲಸ ಕೊಡಿಸುವುದಾಗಿಹೇಳಿ 25 ಲಕ್ಷರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.						
9	ಉಪ್ಪಾರಪೇಟೆ	130/2018 ಕಲಂ 471, 465, 468, 420 ಐಪಿಸಿ. ದಿ:16/05/2018	ಶ್ರೀ ಪ್ರಮೋದ್ ಬಿ.ಎ ಬಿನ್ ಅಂಕಯ್ಯ ಬಿ.ಎ, 28 ವರ್ಷ, ವಾಸ ನಂ.696, 3ನೇ ಮೇನ್, 8ನೇ ಕ್ರಾಸ್, ದಾಸೇಗೌಡರಸ್ತೆ, ಸ್ವರ್ಣಸಂದ್ರ, ಮಂಡ್ಯಟೌನ್.	ನವೀನ್ ಶರ್ಮ ಹೆಚ್.ಎಸ್	ಇಲ್ಲಾ	ಸಿಸಿನಂ.31473/2018ರಲ್ಲಿವಿಚಾರಣೆಯಲ್ಲಿದ್ದು. ಮುಂದಿನ ವಿಚಾರಣೆ.

ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿ ಫಿರ್ಯಾದುದಾರರಿಗೆ ಬಿ.ಇ.ಎಲ್‌ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ 35.000/-ರೂಗಳನ್ನು ಪಡೆದುನಕಲಿ ಆದೇಶದ ಪ್ರತಿಯನ್ನು ನೀಡಿಮೋಸ ಮಾಡಿರುತ್ತಾನೆ.						
10	ಉಪ್ಪಾರಪೇಟೆ	136/2018 ಕಲಂ 420 ಐಪಿಸಿ. ದಿ:26/05/2018	ಶ್ರೀ ರಕ್ಷಿತ್ ಅಪರ್ಣ ಕುಮಾರಿ ತಂದೆ ಅಜ್ಜಯ್ಯ ಸಾಲಿಮರ್ ನಂ.969/24. 13ನೇ ಮೇನ್. ಭೀಮ ಸೇನಜೋಷಿ ರಸ್ತೆ. ಹನುಮಂತನಗರ. ಬೆಂಗಳೂರು.	ಸಂಜಯ್‌ಕಿರಣ್	ಇಲ್ಲಾ	ಬಿ ಅಂತಿಮ ವರದಿ ಸಲ್ಲಿಸಲಾಗಿದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಫಿರ್ಯಾದಿಯತಮ್ಮನಿಗೆಎಫ್.ಡಿ.ಎ ಹುದ್ದೆಯನ್ನು ಹಾಗೂ ಇವರ ಸ್ನೇಹಿತೆ ಸುನೀತಾರವರಿಗೆಎಸ್.ಡಿ.ಎ ಹುದ್ದೆಕೊಡಿಸುವುದಾಗಿ 6.90.000/-ರೂಗಳನ್ನು ಪಡೆದುಕೊಂಡು ಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.						
11	ಉಪ್ಪಾರಪೇಟೆ	155/2018 ಕಲಂ 406. 420 ಐಪಿಸಿ. ದಿ:18/06/2018	ಶ್ರೀ ಎಂ.ಹೆಚ್ ಮಂಜುನಾಥ್‌ಚೌದರಿ. ಎಸಿಪಿ. (ಎಫ್&ಎಂ). ಸಿಸಿಬಿ. ಎನ್‌ಟಿ ಪೇಟೆ. ಬೆಂಗಳೂರು.	ಭರಮನಾಥ ನಿಂಗಪ್ಪ ಮಾಳಿ. ಪಿಸಿ-2224. ಸಿಎಆರ್ ದಕ್ಷಿಣ. ಬೆಂಗಳೂರು.	ಇಲ್ಲಾ	ನ್ಯಾಯಾಲಯದ ಸಿಸಿ ನಂ.11716/18 ರಲ್ಲಿ ವಿಚಾರಣೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯುತಿಪ್ಪಣ್ಣ ಕೇದಾರಮಾಳಿರವರ ಮಗನಿಗೆ ಸಿವಿಲ್ ಪಿಎಸ್‌ಐ ಹುದ್ದೆಕೊಡಿಸುವುದಾಗಿ ನಂಬಿಸಿ ಅವರಿಂದ 25 ಲಕ್ಷ ರೂಗಳನ್ನು ಪಡೆದುಕೊಂಡು. ಕೆಲಸ ಕೊಡಿಸಲು ಸಾದ್ಯವಾಗದಕಾರಣ 20 ಲಕ್ಷರೂಗಳನ್ನು ವಾಪಸ್‌ಕೊಟ್ಟಿದ್ದು. ಉಳಿದ 5 ಲಕ್ಷರೂಗಳನ್ನು ವಾಪಸ್ ನೀಡದೇ ನಂಬಿಕೆ ದ್ರೋಹ ಮಾಡಿ ಮೋಸ ಮಾಡಿರುತ್ತಾನೆ.						
12	ಉಪ್ಪಾರಪೇಟೆ	158/2018 ಕಲಂ 420 ಐಪಿಸಿ. ದಿನಾಂಕ:29/06/18	ಶ್ರೀ ಎಂ.ಎಸ್ ಮಧು ಬಿನ್ ಶಿವಣ್ಣ. ಎನ್.ಇ.ಎಸ್ ವಸತಿಗೃಹ. ಶಿರಾಗೇಟ್. ತುಮಕೂರು ನಗರ.	ತಿಮ್ಮೇಶ	ಇಲ್ಲಾ	ನ್ಯಾಯಾಲಯದ ಸಿಸಿ ನಂ.3998/2019 ರಲ್ಲಿವಿಚಾರಣೆ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯು ಫಿರ್ಯಾದಿಗೆ ಮೀನುಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕ ಹುದ್ದೆ ಕೊಡಿಸುದಾಗಿ 10 ಲಕ್ಷ ರೂಗಳನ್ನು ಪಡೆದುಕೊಂಡು ಕೆಲಸವನ್ನು ಕೊಡಿಸದೆ ಅಥವಾ ಹಣವನ್ನು ವಾಪಸ್ ಕೊಡದೇ ಮೋಸ ಮಾಡಿರುತ್ತಾನೆ.						
13	ಉಪ್ಪಾರಪೇಟೆ	346/2018 ಕಲಂ 506. 406. 420 ಐಪಿಸಿ. ದಿನಾಂಕ:28/12/18	ಶ್ರೀ ಲಕ್ಷ್ಮಣಎಸ್.ಎಂ ಬಿನ್ ಶ್ರೀಶೈಲ. 33 ವರ್ಷ. ವಾಸ ಮರಗೂರುಗ್ರಾಮ. ಮಣಂಕಲಗಿ ಪೋಸ್ಟ್. ಇಂಡಿತಾ॥ವಿಜಯಪುರ	ಮಂಜುನಾಥ	ಇಲ್ಲಾ	ನ್ಯಾಯಾಲಯದ ಸಿಸಿನಂ.15267/2019 ರಲ್ಲಿವಿಚಾರಣೆ.

ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯು ಪಿರ್ಯಾದಿಗೆ ಪಿ.ಡಿ.ಓ ಹುದ್ದೆ ಕೊಡಿಸುದಾಗಿ ಹೇಳಿ 3.50.000/- ರೂಗಳನ್ನು ಪಡೆದುಕೊಂಡು ಕೆಲಸವನ್ನು ಕೊಡಿಸದೆ ಅಥವಾ ಹಣವನ್ನು ವಾಪಸ್ ಕೊಡದೇ ಮೋಸ ಮಾಡಿರುತ್ತಾನೆ.						
14	ಚಂದ್ರಾಲೇಔಟ್	87/2018 ಕಲಂ. 420.406 ಐಪಿಸಿ ದಿನಾಂಕ: 26.02.2018	ವಿಜಯ್ ಹೆಗ್ಡೆ ಬಿನ್ ಭೋಜರಾಜ್ ಹೆಗ್ಡೆ. #22. 2ನೇ ಮುಖ್ಯರಸ್ತೆ. ಇನ್ ಕಾಂ ಟ್ಯಾಕ್ಸ್ ಲೇಔಟ್. ಬೆಂಗಳೂರು ನಗರ.	ಎ1 ಮಂಜುನಾಥ ಬಿನ್ ಹನುಮಯ್ಯ. #48. 13ನೇ ಅಡ್ಡರಸ್ತೆ. ಮಲ್ಲೇಶ್ವರಂ. ಬೆಂಗಳೂರು ನಗರ ಎ2 ಜಗದೀಶ್ ಗೌಡ. #38/2. 2ನೇ ಅಡ್ಡರಸ್ತೆ. 2ನೇ ಮುಖ್ಯರಸ್ತೆ. ಶಿವನಗರ. ರಾಜಾಜಿನಗರ. ಬೆಂಗಳೂರು	-	8ನೇ ಎಸಿಎಂಎಂ ನ್ಯಾಯಾಲಯ -ವಿಚಾರಣಾ ಹಂತ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ವಿಧಾನಸೌಧದಲ್ಲಿ ಮಂತ್ರಿಗಳು ಪರಿಚಯವಿರುತ್ತಾರೆ ನಿಮ್ಮ ಮಗ ಪಿರ್ಯಾದುದಾರರ ಮಗ ವಿಕ್ರಾಂತನಿಗೆ ನೀರಾವರಿ ಇಲಾಖೆಯಲ್ಲಿ ಕೆಲಸ ಕೊಡಿಸುತ್ತನೆಂದು ನಂಬಿಸಿ ಚಂದ್ರಾಲೇಔಟ್ ಪೊಲೀಸ್ ಠಾಣಾ ಸರಹದ್ದಿನ ಇನ್‌ಕಾಂ ಟ್ಯಾಕ್ಸ್ ಲೇಔಟ್ ಮನೆ ನಂ. 22 ರಲ್ಲಿ 4.50. 000 ನಗದು. ನಂತರ 5.50.000 ಲಕ್ಷ ಬ್ಯಾಂಕ್ ಅಕೌಂಟ್ ಮೂಲಕ ಪಡೆದು ಕೆಲಸ ಕೊಡಿಸದೇ. ಹಣ ವಾಪಾಸ್ಸು ನೀಡದೇ ವಂಚಿಸಿರುವ ಬಗ್ಗೆ ದೂರು.						
15	ಚಂದ್ರಾಲೇಔಟ್	40/2018 ಕಲಂ. 406.120(ಬಿ). 420. ಸಹಿತ 34 ಐಪಿಸಿ ದಿನಾಂಕ: 24.01.2018	ನಿಶಾಂತ್. ಜಿ ಬಿನ್ ಲೇಟ್ ಎಸ್.ಕೆ ಕೊಟ್ರಪ್ಪ #2455/23. 12ನೇ ಅಡ್ಡರಸ್ತೆ. ಎಂಸಿಸಿಎ ಬ್ಲಾಕ್. ಗಂಗೊಂಡನಹಳ್ಳಿ	ಎ1 ಶ್ರೀನಿವಾಸ ಬಿನ್ ಲೇಟ್ ಕಣ್ಣನ್. ತುಳಸಿ ನಿಲಯ. ಎಂಐಜಿ-71. 2ನೇ ಮುಖ್ಯರಸ್ತೆ. ಕೆಹೆಚ್‌ಬಿ ಕಾಲೋನಿ. ಕಲ್ಲಹಳ್ಳಿ. ವಿನೋಭ ನಗರ. ಶಿವಮೊಗ್ಗ ಎ2 ಕಿಶೋರ್ ಬಿನ್ ಶ್ರೀನಿವಾಶ. ಲಕ್ಕವಳ್ಳಿ ಗ್ರಾಮ & ಪೋಸ್ಟ್. ತರಿಕೆರೆ ತಾಲ್ಲೂಕು. ಚಿಕ್ಕಮಗಳೂರು ಎ3 ಮೈತ್ರಿ ಕೋಂ ಕಿಶೋರ್. ಕೆ.ಎಸ್ ಲಕ್ಕವಳ್ಳಿ ಗ್ರಾಮ & ಪೋಸ್ಟ್. ತರಿಕೆರೆ ತಾಲ್ಲೂಕು. ಚಿಕ್ಕಮಗಳೂರು	-	8ನೇ ಎಸಿಎಂಎಂ ನ್ಯಾಯಾಲಯ -ವಿಚಾರಣಾ ಹಂತ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- 2014ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಕೆಪಿಟಿಸಿಎಲ್ ಸಂಸ್ಥೆಯ ಕೆಲಸ ಕೊಡಿಸುವುದಾಗಿ ನಂಬಿಸಿ ಚಂದ್ರಾಲೇಔಟ್ ಪೊಲೀಸ್ ಠಾಣಾ ಸರಹದ್ದಿನ ಅಡಿಗಾಸ್ ಹೋಟೆಲ್ ಬಳಿ ಕರೆಸಿಕೊಂಡು ಮಾತುಕತೆ ಮಾಡಿ ಬ್ಯಾಂಕ್ ಅಕೌಂಟ್ ಮೂಲಕ 10 ಲಕ್ಷ ಪಡೆದು ಕೆಲಸ ಕೊಡಿಸದೇ. ಹಣ ವಾಪಾಸ್ಸು ನೀಡದೇ ವಂಚಿಸಿರುವ ಬಗ್ಗೆ ದೂರು						
16	ಚಂದ್ರಾಲೇಔಟ್	41/2018 ಕಲಂ. 120(ಬಿ). 406. 420. ಸಹಿತ 34 ಐಪಿಸಿ ದಿನಾಂಕ: 24.01.2018	ಜಿ. ಮಾದೇಗೌಡ ಬಿನ್ ಲೇಟ್ ಜವರೇಗೌಡ. #138 7ನೇ ಮುಖ್ಯರಸ್ತೆ. 3ನೇ ಅಡ್ಡರಸ್ತೆ. ಕಾವೇರಿನಗರ. ಬೆಂಗಲೂರು ನಗರ	ಎ1 ಶ್ರೀನಿವಾಸ ಬಿನ್ ಲೇಟ್ ಕಣ್ಣನ್. ತುಳಸಿ ನಿಲಯ. ಎಂಐಜಿ-71. 2ನೇ ಮುಖ್ಯರಸ್ತೆ. ಕೆಹೆಚ್‌ಬಿ ಕಾಲೋನಿ. ಕಲ್ಲಹಳ್ಳಿ. ವಿನೋಭ ನಗರ. ಶಿವಮೊಗ್ಗ ಎ2 ಕಿಶೋರ್ ಬಿನ್ ಶ್ರೀನಿವಾಶ. ಲಕ್ಕವಳ್ಳಿ ಗ್ರಾಮ & ಪೋಸ್ಟ್. ತರಿಕೆರೆ ತಾಲ್ಲೂಕು. ಚಿಕ್ಕಮಗಳೂರು	-	8ನೇ ಎಸಿಎಂಎಂ ನ್ಯಾಯಾಲಯ -ವಿಚಾರಣಾ ಹಂತ

				ಎ3 ಇಸ್ರೇಲ್ ಡಿ ಕ್ರೋಟಾ. #22. 1ನೇ ಮುಖ್ಯರಸ್ತೆ. 15ನೇ ಅಡ್ಡರಸ್ತೆ. ಕೆ.ಜಿ ನಗರ, ಯಶ್ವಂತಪುರ. ಬೆಂಗಳೂರು ನಗರ. ಎ4 ಮೈತ್ರಿ ಕೋಂ ಕಿಶೋರ್. ಕೆ.ಎಸ್ ಲಕ್ಕವಳ್ಳಿ ಗ್ರಾಮ & ಪೋಸ್ಟ್. ತರಿಕೆರೆ ತಾಲ್ಲೂಕು, ಚಿಕ್ಕಮಗಳೂರು.		
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- 2014ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಕೆಪಿಟಿಸಿಎಲ್ ಸಂಸ್ಥೆಯಲ್ಲಿ ಪಿರ್ಯಾದುದಾರರ ಮಗಳು ಅರ್ಚನಾ & ಸಂಬಂಧಿ ಪಾಂಡುರಂಗರವರಿಗೆ ಕೆಲಸ ಕೊಡಿಸುವುದಾಗಿ ನಂಬಿಸಿ ಚಂದ್ರಾಲೇಔಟ್ ಪೊಲೀಸ್ ಠಾಣಾ ಸರಹದ್ದಿನ ವಿಲ್ಲೇಜ್ ಹೈಪರ್ ಮುಂಬಾಗ ಕರೆಸಿಕೊಂಡು ಮಾತುಕತೆ ಮಾಡಿ ಬ್ಯಾಂಕ್ ಅಕೌಂಟ್ ಮೂಲಕ & ನಗದಾಗಿ 30.50.000 ಲಕ್ಷ ಪಡೆದು ಕೆಲಸ ಕೊಡಿಸದೇ. ಹಣ ವಾಪಾಸ್ಸು ನೀಡದೇ ವಂಚಿಸಿರುವ ಬಗ್ಗೆ ದೂರು						
17	ಜ್ಞಾನಭಾರತಿ	174/2018 ಕಲಂ. 406,420,354(ಡಿ) ಐಪಿಸಿ	ಶ್ರೀ.ಹರೀಶ್ ಬಿನ್ ಸಣ್ಣ ಗಿರಿಯಪ್ಪ 23ವರ್ಷ, ಕನಕನಾಯಕನಹಳ್ಳಿ ಮಾತೋಡು ಹೋಬಳಿ, ಚಿತ್ರದುರ್ಗಾ ಜಿಲ್ಲೆ	ಗಿರಿಧರ್ ನಡೋಣಿ	ಆರೋಪಿ ಪತ್ತೆಯಾಗಿರುವ ುದಿಲ್ಲ.	ಸಿ ವರದಿ 06/06/19
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರಿಗೆ ಆರೋಪಿ ಗಿರಿಧರ್ ನಡೋಣಿಯವರು 2016 ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೇಬಲ್ ಹುದ್ದೆ ಕೊಡಿಸುತ್ತೆನೆಂದು ಹೇಳಿ ರೂ.8.25.000/-ಗಳನ್ನು ಪಡೆದುಕೊಂಡು ಪಿರ್ಯಾದಿಗೆ ಕೆಲಸವನ್ನು ಕೊಡಿಸದೇ ಹಣವನ್ನು ವಾಪಸ್ ನೀಡದೇ ಮೋಸ ಮಾಡಿದ ಬಗ್ಗೆ ದೂರು ಇತ್ಯಾದಿ.						
18	ಜ್ಞಾನಭಾರತಿ	ಮೊ.ಸಂ.250/2018 ಕಲಂ.20.504.506.34 ಐಪಿಸಿ	ಶ್ರೀಮತಿ.ಆಶಾ ಬಿನ್ ಚಂದ್ರಪ್ಪ 33ವರ್ಷ, ನಂ.15. ಕೇರ್ ಆಫ್ ಗಂಗಾಧರ್ ಹೌಸ್, ಗಿರಿರಸ್ತೆ. ಮುನೇಶ್ವರ ಬ್ಲ್ಯಾಕ್, ಅವಲಹಳ್ಳಿ, ಬೆಂಗಳೂರು ನಗರ.	ಎ1ಗಣೇಶನ್ @ ಗಣೇಶ್ ರಾಜನ್ ಬಿನ್ ನಾಗರಾಜ್ ಮೂಳೆನಹಳ್ಳಿ, ದಂಡಿಗನಹಳ್ಳಿ, ಚೆನ್ನರಾಯಪಟ್ಟಣ್ಣ ಬೆಂಗಳೂರು ನಗರ. ಎ2-ಗಂಗಾಧರ್ ಬಿನ್ ಗಂಗಾರಾಜನ್ ನಂ.22. 17ನೇ ಕ್ರಸ್. ಚರ್ಚ್ ಹತ್ತಿರ, ನಾಗದೇವನಹಳ್ಳಿ, ಬೆಂಗಳೂರು ನಗರ.	ನೀಡಿರುವುದಿಲ್ಲ. ಮಾನ್ಯಯಾಲಂ ುದಲ್ಲಿ ವಿಚಾರಣೆಯಲ್ಲಿ ರುತ್ತದೆ.	ಸಿ.ಸಿ.ನಂ.30996/2018 ವಿಚಾರಣೆ ಹಂತ ದಲ್ಲಿರುತ್ತದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದಿಗೆ ಸರ್ಕಾರಿ ಟೈಪಿಸ್ಟ್ ಕೆಲಸ ಕೊಡಿಸುವುದಾಗಿ ನಂಬಿಸಿ ರೂ.3.00.000/-ಗಳನ್ನು ಆರೋಪಿ ಗಂಗಾರಾಜ್ ಪಡೆದುಕೊಂಡು ಕೆಲಸವನ್ನು ಕೊಡಿಸಿದೇ ಹಣವನ್ನು ವಾಪಸ್ ನೀಡದೇ ಮೋಸ ಮಾಡಿರುತ್ತಾನೆಂದು ಕೊಟ್ಟ ದೂರು ಇತ್ಯಾದಿ.						
19	ಬಸವೇಶ್ವರನ 'ಗರ	ಮೊ.ನಂ.341/18 ಕಲಂ 420, 468, 471 ರೆ/ವಿ	ಶ್ರೀ ಸುನೀಲ್ ಕುಮಾರ್ ಆರ್.ಎ	ಎ1.ಮಂಜುನಾಥ ಇ ಹೆಚ್ ಬಿನ್ ಹನುಮಯ್ಯ. ವಾಸ ಇರುಬಹಳ್ಳಿ	-	5ನೇ ಎಸಿಎಂಎಂ ನ್ಯಾಯಾಲಯ

		34 ಐಪಿಸಿ ದಿ:-28.10.18	ತಂದೆ ಲೇಟ್ ಬಿ ಆರ್ ಅಶ್ವಥನಾರಾಯಣ್, 50ವರ್ಷ, ನಂ.294, 7 ನೇ ಸಿ ಅಡ್ಡರಸ್ತೆ, ಬಸವೇಶ್ವರನಗರ.	ಗ್ರಾಮ, ಬಿಳಗುಂದ ಪೋಸ್ಟ್, ನಾಗಮಂಗಲ ತಾಲ್ಲೂಕ್, ಮಂಡ್ಯ ಜಿಲ್ಲೆ. ಈ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೆ.		ಸಿಸಿ ನಂ. 14552/2020 ಮುಂದಿನ ವಿಚಾರಣಾ ದಿನಾಂಕ: 27-01-2022
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಕೆ.ಪಿಟಿಸಿಎಲ್ ನಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ಮೋಸ ಮಾಡಿರುವ ಬಗ್ಗೆ ದೂರು						
20	ಹೈಗ್ರೌಂಡ್ಸ್	187/2018 ಕಲಂ 406, 420, 506 ಐಪಿಸಿ	ಶ್ರೀ. ಹನುಮಂತ ದೇಸಾಯಿ, ಸಲಾವಸನಗರ, ವಿಜಯಪುರ್ ಜಿಲ್ಲೆ.	ಮಂಜುನಾಥ್, ಆರ್.ಆರ್ ನಗರ, ಬೆಂಗಳೂರು	-	ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.
ಫಿರ್ಯಾದುದಾರರಿಗೆ ಪಿಡಿಓ ಕೆಲಸವನ್ನು ಕೊಡಿಸುತ್ತವೆಂದು ಹೇಳಿ ಆರೋಪಿಯು 3.5 ಲಕ್ಷ ರೂಗಳನ್ನು ಹಣವನ್ನು ಮುಂಗಡವಾಗಿ ಪಡೆದು ಕೆಲಸವನ್ನು ಕೊಡಿಸದೇ 75.000 ರೂಗಳನ್ನು ಮಾತ್ರ ವಪಾಸ್ಸು ಕೊಟ್ಟಿದ್ದು, ಉಳಿದ ಹಣವನ್ನು ವಪಾಸ್ಸು ನೀಡದೇ ಮೋಸ ಮಾಡಿರುತ್ತಾರೆಮದು ನೀಡಿದ ದೂರು ಇತ್ಯಾದಿ.						

2019

ಕ್ರ ಸಂ	ಪೊಲೀಸ್ ಠಾಣೆಯ ಹೆಸರು	ಮೊ.ಸಂ.ಕ ಕಲಂ, ದಿನಾಂಕ	ಫಿರ್ಯಾದುದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
1	ಬೈಯಪ್ಪನಹಳ್ಳಿ	192/2019 ಕಲಂ 420 ಐ.ಪಿ.ಸಿ ದಿ.18.02.2019	ಶ್ರೀಮತಿ ಭವ್ಯ ಕೋಂ ಶ್ರೀನಿವಾಸ, 25ವರ್ಷ, ನಂ-173/7, 3ನೇ ಕ್ರಾಸ್, ನಂಜಪ್ಪ ಲೇಔಟ್, ಆಡುಗೋಡಿ, ಬೆಂಗಳೂರು	ಎ1)ಸತೀಶ್ ಎಂ ಬಿನ್ ಲೇಟ್ ಮೋಹನ್ ರಾಮ್ ಬಿ, 34 ವರ್ಷ, ವಾಸ-ನಂ-166, 4ನೇ ಕ್ರಾಸ್,ಆರ್.ಎಂ.ಎಸ್.ಲೇಔಟ್, ಮೈಸೂರು ಎ-2)ಮಂಜುನಾಥ ಎಂ ಬಿನ್ ಮಹದೇವಯ್ಯ ಪಿ. 34 ವರ್ಷ, ವಾಸ-ಡಿ-7/4225, 3ನೇ ಕ್ರಾಸ್, ಬಿ.ವಿ.ಲೇಔಟ್, ಗುತ್ತಲು ಕಾಲೋನಿ, ಮಂಡ್ಯ	ಇಲ್ಲ	ವಿಚಾರಣಾ ಹಂತದಲಿರುತ್ತದೆ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಫಿರ್ಯಾದುದಾರರು ಬಿ.ಇ ವ್ಯಾಸಂಗ ಮಾಡಿದ್ದು ಬಿ.ಎಂ.ಆರ್.ಸಿ.ಎಲ್ ನಲ್ಲಿ ಕೆಲಸ ಇರುವ ಬಗ್ಗೆ ವಿಚಾರ ಮಾಡಿಕೊಂಡು ಹೋಗಲು ಬೈಯಪ್ಪನಹಳ್ಳಿ ಮೆಟ್ರೋ ನಿಲ್ದಾಣಕ್ಕೆ ಬಂದಾಗ ಅಲ್ಲಿ ಸತೀಶ್ ಎಂಬುವರು ಪರಿಚಯವಾಗಿದ್ದು ಹಣದ ವ್ಯವಸ್ಥೆ ಮಾಡಿದರೆ ನಿಮಗೆ ಬಿ.ಎಂ.ಆರ್.ಸಿ.ಎಲ್ ನಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದ್ದು ಫಿರ್ಯಾದುದಾರರು ತಮ್ಮ ತಂದೆಗೆ ಹೇಳಾಗಾಗ ಆಗಾಗಗ 7.5 ಲಕ್ಷರೂ ಹಣ ನೀಡಿದ್ದು ಇದುವರೆಗು ಕೆಲಸ ಕೊಡಿಸದೆ ಹಣವು ಕೊಡದೇ ಮೋಸ ಂಆಡಿರುತ್ತಾರೆಂದು ಕೊಟ್ಟ ದೂರು ಇತ್ಯಾದಿ						
2	ಶ್ರೀರಾಮಪುರ	18/2019, ಕಲಂ.406, 420, 506 ಐಪಿಸಿ ದಿನಾಂಕ :25-	ಶ್ರೀ ಶರತ್‌ಕುಮಾರ್ ಬಿನ್ ಅಜಿತ್‌ಕುಮಾರ್, 27 ವರ್ಷ, ನಂ.12, ಎಸ್.ಎನ್.ನಗರ, 2ನೇ ಕ್ರಾಸ್, ಬಿ.ಹೆಚ್.ರೋಡ್, ಶಿವಮೊಗ್ಗ	1)ಮಣವಾಳನ್ 2)ದಿಲೀಪ್ 3)ಶ್ರೀಮತಿ ಎಳಿಲಾರಸಿ 4)ಜಯಚಂದ್ರ	5,00,000/- ರೂಗಳಲ್ಲಿ 3,00,000/- ರೂಗಳನ್ನು ವಾಪಸ್ ನೀಡಿರುತ್ತದೆ.	ಮಾನ್ಯ ನ್ಯಾಯಾಲಯದ ಸಿಸಿ ನಂಬರ್ 13824/2021ರಲ್ಲಿ ವಿಚಾರಣೆಯಲ್ಲಿರುತ್ತದೆ.

		01-2019	ಜಿಲ್ಲೆ.			
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, 1, 2 ಮತ್ತು 3ನೇ ಆರೋಪಿಗಳು ಪಿರ್ಯಾದುದಾರರಿಗೆಅವರತಮ್ಮನಾದ ವಿನೋದ್‌ರವರಿಗೆರೈಲ್ವೆಇಲಾಖೆಯಲ್ಲಿಇಂಜನಿಯರಿಂದ ಕೆಲಸ ಕೊಡಿಸುವುದಾಗಿ 5 ಲಕ್ಷ ರೂಗಳನ್ನು ತೆಗೆದುಕೊಂಡು ಕೆಲಸ ಕೊಡಿಸದೆ ಹಣವನ್ನು ಸಹ ವಾಪಸ್‌ಕೊಡದೆ ಮೋಸಮಾಡಿಜೀವಬೇಧರಿಕೆ ಹಾಕಿರುತ್ತಾರೆಂದುಕೊಟ್ಟದೂರುಇತ್ಯಾದಿ.						
3	ಶ್ರೀರಾಮಪುರ	83/2019 ಕಲಂ 420 ಐಪಿಸಿ 07-05-19	ಶ್ರೀ ಸಯ್ಯದ ಅಲಿ ಬಿನ್ ಲೇಟ್ ಮೀರಾಸಾಬ, 43 ವರ್ಷ.	ಮಣವಾಳನ್	4,50,000/- ರೂಗಳಲ್ಲಿ 3,00,000/- ರೂಗಳನ್ನು ವಾಪಸ್ ನೀಡಿರುತ್ತದೆ.	ಮಾನ್ಯ ನ್ಯಾಯಾಲಯದ ಸಿಸಿ ನಂಬರ್ 13136/2020 ರಲ್ಲಿ ವಿಚಾರಣೆಯಲ್ಲಿರುತ್ತದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರಿಗೆ ಪರಿಚಯವಿರುವ ಆರೋಪಿಯು ರೈಲ್ವೆ ಇಲಾಖೆಯಲ್ಲಿ ನನಗೆ ಪರಿಚಯವಿದ್ದು. ಯಾರಿಗಾದರು ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದ್ದರಿಂದ ಪಿರ್ಯಾದುದಾರರುತಮ್ಮ ಸ್ನೇಹಿತನ ಮಗನಿಗೆ ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುತ್ತಾರೆಂದು ಒಟ್ಟು ರೂ. 4,50,000/- ರೂ.ಗಳ ಹಣವನ್ನು ಆರೋಪಿಗೆ ಕೊಟ್ಟಿದ್ದು. ಆದರೆ ಆರೋಪಿಯು ಕೆಲಸವನ್ನು ಕೊಡಿಸದ' ಪಿರ್ಯಾದುದಾರರು ನೀಡಿದ ಹಣವನ್ನು ವಾಪಸ್‌ಕೊಡದೆ ಮೋಸ ಮಾಡಿರುತ್ತಾರೆಂದುಕೊಟ್ಟದೂರುಇತ್ಯಾದಿ.						
4	ಸುಬ್ರಮಣ್ಯನಗ 'ರ	18/2019 ಕಲಂ 506-420 ಐಪಿಸಿ	ಶ್ರೀ ಸಂಜೀವ್‌ಕುಮಾರ್.ಹೆಚ್. ಬಿನ್ ಟಿ.ಆರ್.ಹೊನ್ನೇಶ್. 27 ವರ್ಷ. ನಂ.2822. 12ನೇ ಮೈನ್. ಡಿ ಬ್ಲಾಕ್. ರಾಜಾಜಿನಗರ. 2ನೇ ಹಂತ. ಬೆಂ.10.	1)ಓಳಯಪ್ಪ 2)ಬಸವರಾಜು 3)ಶಿವಕುಮಾರ್	-	ಸದರಿ ಪ್ರಕರಣವು ಸಿಸಿ ನಂಬರ್ 9399/2019 ರಲ್ಲಿ ವಿಚಾರಣೆಯಲ್ಲಿರುತ್ತದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರು ಬಿ.ಇ. ಸಿವಿಲ್ ಇಂಜಿನಿಯರ್ ವ್ಯಾಸಂಗ ಮಾಡಿದ್ದು. ನಾಗರಬಾವಿಯಲ್ಲಿ ಹೋಟೆಲ್ ಇಟ್ಟುಕೊಂಡು ಜೀವನನಡೆಸಿಕೊಂಡಿದ್ದು. ಈಗ್ಗೆ 2018ನೇ ಸೆಪ್ಟಂಬರ್ ಕೊನೆಯ ವಾರದಲ್ಲಿ ಎ1 ಮತ್ತು ಎ2 ಆರೋಪಿಗಳು ಊಟಕ್ಕೆಂದು ಅವರ ಹೋಟೆಲ್‌ಗೆ ಬಂದಿದ್ದಾಗ, ಪಿರ್ಯಾದುದಾರರನ್ನು ಪರಿಚಯಿಸಿಕೊಂಡು ಅವರ ವಿದ್ಯಾಭ್ಯಾಸದ ಬಗ್ಗೆ ತಿಳಿದುಕೊಂಡು, ತಮಗೆ ಉನ್ನತ ಅಧಿಕಾರಿಗಳು, ರಾಜಕಾರಣಿಗಳು ಪರಿಚಯವಿದ್ದು. ತಮಗೆ ಬಿಎಂಆರ್‌ಸಿಎಲ್. ಪಿಡಬ್ಲ್ಯುಡಿ. ಬಿ.ಇ.ಎಲ್ ಇದರಲ್ಲಿ ಜೂನಿಯರ್ ಇಂಜಿನಿಯರ್ ಮಟ್ಟದ ಕೆಲಸವನ್ನು ಕೊಡಿಸುವುದಾಗಿ ಹೇಳಿ ಮೊಬೈಲ್ ನಂಬರ್‌ಗಳನ್ನು ಕೊಟ್ಟಿದ್ದು. ನಂತರ 12 ಲಕ್ಷ ರೂ.ಗಳಿಗೆ ಒಪ್ಪಿ ದಿನಾಂಕ 05-10-2018 ರಂದು ಪಿರ್ಯಾದುದಾರರು ತಮ್ಮ ಮನೆಯಲ್ಲಿ ಎ1, ಎ2 ಆರೋಪಿಗಳನ್ನು ಕರೆಯಿಸಿಕೊಂಡು 12 ಲಕ್ಷ ರೂ.ನಗದು ಹಣವನ್ನು ಕೊಟ್ಟು. ತಮ್ಮ ಶಾಲಾ. ಕಾಲೇಜಿನ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಪಡೆದುಕೊಂಡಿದ್ದು. ಆದರೆ ಸುಮಾರು ದಿನಗಳಾದರೂ ಆರೋಪಿಗಳು ಪಿರ್ಯಾದುದಾರರಿಗೆ ಕೆಲಸವನ್ನು ಕೊಡಿಸದೇ ಇದ್ದು. ಕೇಳಲು ಹೋದಾಗ ಆರೋಪಿಗಳು ಕೆಲಸವನ್ನು ಕೊಡಿಸದೇ ವಾಪಸ್ ಹಣವನ್ನು ಕೊಡದೇ ಮೋಸ ಮಾಡಿ ಜೀವಬೆದರಿಕೆ ಹಾಕಿರುತ್ತಾರೆಂದು ದೂರು.						
5	ಬಾಗಲಗುಂಟೆ ಪೊಲೀಸ್ ಠಾಣೆ	ಮೊ.ಸಂ- 270-2019 ಕಲಂ- 406,419,420 ಐಪಿಸಿ	ಅಭಿಮನ್ಯು ನಸ್ಕರ್ ಬಿನ್ ಶ್ಯಾಮ್‌ಸುಂದರ್ ನಸ್ಕರ್ 25ವರ್ಷ. ರೆಡ್ಡಿಪಿ.ಜಿ. ರಾಘವೇಂದ್ರ ಪೀಪಲ್‌ಟ್ರೀ ಆಸ್ಪತ್ರೆ ಹತ್ತಿರ. ಟಿ.ದಾಸರಹಳ್ಳಿ, ತುಮಕೂರು ರಸ್ತೆ.	ರಾಧಕೃಷ್ಣ ಜಿ ಆರ್ ಬಿನ್ ಜಿ ಎಲ್ ರಂಗನಾಥ್ 33ವರ್ಷ. ವಾಸ: ಶ್ರೀ ಬಾಲಾಜಿ ಟೆಂಟ್ಸ್ ಪಿಜಿ ನಂ: 03. 16ನೇ ಮುಖ್ಯರಸ್ತೆ. ಚೈತನ್ಯ ಟೆಕ್ನೋ ಸ್ಕೂಲ್ ಹತ್ತಿರ ವೀರಣ್ಣನಪಾಳ್ಯ ನಾಗವಾರ ಬೆಂಗಳೂರು ನಗರ	ಆರೋಪಿಯನ್ನು ದಸ್ತಗಿರಿ ಮಾಡಿ ಆರೋಪಿಯ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿ ಸಲ್ಲಿಸಿರುತ್ತದೆ	ಸಿಸಿ ನಂ: 2878/2021 ರಲ್ಲಿ ವಿಚಾರಣೆಯಲ್ಲಿದೆ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ದೂರಿನ ಸಾರಾಂಶವೇನೆಂದರೆ ದೂರುದಾರರು ಶಾಲೆಯಲ್ಲಿ ಪಿ.ಟಿ ಟೀಚರ್ ಆಗಿದ್ದ ಸಂದರ್ಭದಲ್ಲಿ ಅಲ್ಲಿಗೆ ಕಂಪ್ಯೂಟರ್ ಟ್ರೈನಿಂಗ್ ಮಾಡಲೆಂದು ಬಂದಿದ್ದ. ಹಾಸನ ಜಿಲ್ಲೆಯ ಮೂಲದವರೆಂದು ಹೇಳಿಕೊಂಡಿದ್ದ ಅಂಧರಾದ ಜಿ.ಆರ್.ರಾಧಾಕೃಷ್ಣ ಎಂಬುವವರು ನನಗೆ ಪರಿಚಿತರಾದರು. ನಾನು ಶಾಲೆಯ ಕೆಲಸ ಬಿಟ್ಟ ನಂತರ. ಇವರು ನನಗೆ ರೈಲ್ವೆ ಅಥವಾ						

<table>
<tr><td colspan="7">ಹೆಚ್.ಎಲ್.ಎಲ್.ನಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ. ಅಲ್ಲದೆ ಜಿ.ಆರ್.ರಾಧಾಕೃಷ್ಣ ನನ್ನ ಹೆಸರನ್ನು ಹೇಳಿಕೊಂಡು ನನ್ನ ವಿಸಿಟಿಂಗ್ ಕಾರ್ಡನ್ನು ಮಾಡಿಸಿಕೊಂಡು ಅದನ್ನು ತೋರಿಸಿ, ಹಲವರಿಂದ ಕೆಲಸ ಕೊಡಿಸುವುದಾಗಿ ಹೇಳಿ ನಂಬಿಸಿ ನನ್ನ ಬ್ಯಾಂಕ್ ಅಕೌಂಟ್‌ಗೆ ಹಣವನ್ನು ಹಾಕಿಸಿಕೊಂಡು ಹಣವನ್ನು ಡ್ರಾ ಮಾಡಿಕೊಂಡು ತನ್ನ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ವಂಚನೆ ಮಾಡಿರು ತ್ತಾನೆಂದು ವಿಷಯ ತಿಳಿದುಬಂತು. ಆದ್ದರಿಂದ ಜಿ.ಆರ್.ರಾಧಾಕೃಷ್ಣ ಈತನ ವಿರುದ್ಧ ಸೂಕ್ತ ಕಾನುನು ಕ್ರಮ ಜರುಗಿಸಬೇಕೆಂದು ನೀಡಿದ ದೂರು ಇತ್ಯಾದಿ.</td></tr>
<tr><td>6</td><td>ಸಂಜಯ ನಗರ</td><td>ಮೊ.ಸಂ: 135/2019 ಕಲಂ 420 ಐಪಿಸಿ</td><td>ಶ್ರೀಮತಿ.ಬಿ.ಟಿ.ಪುಷ್ಪಲತಾ ಕೊಂ ವೇಣು.ಆರ್. 34 ವರ್ಷ, ವಾಸ ನಂ.3042, 3ನೇ ಮಹಡಿಯ, 5ನೇ ಬ್ಲಾಕ್, ಜನಪ್ರಿಯಾ ಅಪಾರ್ಟ್‌ಮೆಂಟ್, ಅಳ್ಳಾಳಸಂದ್ರ, ಬೆಂ.</td><td>ಮಂಜೇಗೌಡ, 55 ವರ್ಷ (ಮೃತ ಪಟ್ಟಿರುತ್ತಾನೆ.)</td><td>-</td><td>ಬಿ ಅಂತಿಮ ವರದಿ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಸಾರಾಂಶ:- ಈ ಕೇಸಿನ ಪಿರ್ಯಾದುದಾರರಾದ ಶ್ರೀಮತಿ.ಬಿ.ಟಿ.ಪುಷ್ಪಲತಾ ಕೊಂ ವೇಣು.ಆರ್. 34 ವರ್ಷ, ವಾಸ ನಂ.3042, 3ನೇ ಮಹಡಿಯ, 5ನೇ ಬ್ಲಾಕ್, ಜನಪ್ರಿಯಾ ಅಪಾರ್ಟ್‌ಮೆಂಟ್, ಅಳ್ಳಾಳಸಂದ್ರ, ಬೆಂಗಳೂರು-64. ರವರು ನೀಡಿದ ದೂರಿನ ಸಾರಾಂಶವೇನೆಂದರೆ, ನಾನು ಎಂ.ಎಸ್ಸಿ. (ಎ.ಜಿ.) ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹಾಲಿ ಅಳ್ಳಾಲಸಂದ್ರ, ಜನಪ್ರಿಯಾ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದುಕೊಂಡು ದೇವನಹಳ್ಳಿಯಲ್ಲಿರುವ ಕೃಷಿ ಇಲಾಖೆಯಲ್ಲಿ ಗುತ್ತಿಗೆ ನೌಕರಳಾಗಿ ಕೆಲಸ ಮಾಡಿಕೊಂಡಿರುತ್ತೇನೆ. 2017ನೇ ಸಾಲಿನ ಫೆಬ್ರವರಿ ತಿಂಗಳಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರ ಹುದ್ದೆಯ ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದ ವಿಚಾರವನ್ನು ನಮ್ಮ ತಂದೆಯವರು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾ॥ ದಿಂಡಗೂರು ಗ್ರಾಮದ ವಾಸಿ ನಮ್ಮ ಸಂಬಂಧಿಕ ಡಿ.ಸಿ. ಮಂಜೇಗೌಡ ಎಂಬುವವರಿಗೆ ತಿಳಿಸಿ ನಿಮಗೆ ಯಾರಾದರೂ ಪರಿಚಯವಿದ್ದರೆ ನಮ್ಮ ಮಗಳಿಗೆ ಕೆಲಸ ಕೊಡಿಸುವಂತ ಕೇಳಿಕೊಂಡಿರುವಾಗ್ಗೆ ಡಿ.ಸಿ.ಮಂಜೇಗೌಡ ರವರು ನನಗೆ ಫೋನ್ ಮಾಡಿ ತಿಳಿಸಿದ್ದೇನೆಂದರೆ ನನಗೆ ಹಲವಾರು ಜನ ರಾಜಕೀಯ ವ್ಯಕ್ತಿಗಳು ಗೊತ್ತಿರುತ್ತಾರೆ. ನೀನು ಪರೀಕ್ಷೆ ಬರೆದ ನಂತರ ಫೋನ್ ಮಾಡು 25 ಲಕ್ಷ ಹಣ ಕೊಟ್ಟರೆ ಕೆಲಸ ಕೊಡಿಸುವ ಜವಬ್ದಾರಿ ನನ್ನದು ಎಂದು ತಿಳಿಸಿ ನನ್ನಿಂದ 22 ಲಕ್ಷ ನಗದು ಹಣ ಪಡೆದು ಕೆಲಸ ಕೊಡಿಸದೇ ಹಣವನ್ನು ವಾಪಸ್ಸು ಕೊಡದೇ ಮೋಸ ಮಾಡಿರುವ ನಮ್ಮ ಸಂಬಂಧಿಕ ಡಿ.ಸಿ.ಮಂಜೇಗೌಡ ರವರ ಮೇಲೆ ಕಾನೂನು ರೀತಿ ಕ್ರಮ ಜರುಗಿಸಿ ಹಣವನ್ನು ವಾಪಸ್ಸು ಕೊಡಿಸುವಂತೆ ಕೊಟ್ಟ ದೂರು ಇತ್ಯಾದಿ.</td></tr>
<tr><td>7</td><td>ಉಪ್ಪಾರಪೇಟೆ</td><td>30/2019 ಕಲಂ 420 ಐಪಿಸಿ, ದಿನಾಂಕ:08/02/19</td><td>ಶ್ರೀಮತಿ ಶ್ರೀದೇವಿ.ಕೆ ಕೋಂ ಸಿದ್ದು.ಕೆ. 35 ವರ್ಷ, ವಾಸ ನಂ.ಇಲ್ಲಾ, ದೇಸಾಯಿಕಲ್ಲೂರುಗ್ರಾಮ, ಅಪ್ಜಲ್‌ಪುರತಾ॥ ಕಲಬುರಗಿಜಿಲ್ಲೆ.</td><td>1) ಮೆಹಬೂಬ್ ಪಾಷ.
2) ರೆಹಾನ್ ಷರೀಫ್ ಬಿನ್ ಮಹಮದ್‌ಅಫೇಜ್‌ವುಲ್ಲಾ, 36 ವರ್ಷ, ವಾಸ ನಂ.18, 42ನೇ ಕ್ರಾಸ್, 8ನೇ ಮೇನ್, ಜಯನಗರ, 4ನೇ ಹಂತ, ಬೆಂಗಳೂರು.</td><td>ಇಲ್ಲಾ</td><td>ಸಿಸಿನಂ.26551/2019 ರಲ್ಲಿ ವಿಚಾರಣೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಗಳು ಪಿರ್ಯಾದುದಾರರು ಮತ್ತುಇವರ ಸ್ನೇಹಿತರಿಗೆ ಪಿ.ಡಿ.ಓ. ಎಸ್.ಡಿ.ಎ. ದಲಾಯತ್ ಮತ್ತು ಸಚಿವಾಲಯದ ಹುದ್ದೆಗಳನ್ನು ಕೊಡಿಸುವುದಾಗಿಒಟ್ಟು 14,62,000/- ರೂಗಳನ್ನು ಪಡೆದುಕೊಂಡುಕೆಲಸವನ್ನುಕೊಡಿಸದೇಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.</td></tr>
<tr><td>8</td><td>ಉಪ್ಪಾರಪೇಟೆ</td><td>50/2019 ಕಲಂ 420 ಐಪಿಸಿ, ದಿನಾಂಕ:27/02/19</td><td>ಶ್ರೀ ಮುಕುಂದಪ್ಪಜಿ.ಡಿ ಬಿನ್ ಕೃಷ್ಣೋಜಿರಾವ್ ಎಂ, ನಂ.5, 4ನೇ ಕ್ರಾಸ್, 5ನೇ ಮೇನ್, ಬ್ಯಾಟರಾಯನಪುರ, ಬೆಂಗಳೂರು.</td><td>ಯಶವಂತಪ್ಪಎ.ಡಿ. ದೊಡ್ಡೇರಹಳ್ಳಿ ಗ್ರಾಮ, ಹೊನ್ನಹಳ್ಳಿ ತಾ॥ ದಾವಣಗೆರೆಜಿಲ್ಲೆ.</td><td>ಇಲ್ಲಾ</td><td>ಸಿಸಿನಂ.26529/2019 ರಲ್ಲಿ ವಿಚಾರಣೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರರಿಗೆಎಫ್.ಡಿ.ಎ ಕೆಲಸ ಕೊಡಿಸುವುದಾಗಿ ತಿಳಿಸಿ 8,50,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.</td></tr>
<tr><td>9</td><td>ಉಪ್ಪಾರಪೇಟೆ</td><td>53/2019</td><td>ಶ್ರೀ ಶಿವ.ಎಂ ಬಿನ್</td><td>ಶರಣಪ್ಪಕೋಣೆ</td><td>ಇಲ್ಲಾ</td><td>ಸ ನ್ಯಾಯಾಲಯದ ಸಿಸಿ</td></tr>
</table>

<table>
<tr><td></td><td></td><td>ಕಲಂ 420,
504, 506
ಐಪಿಸಿ.
ದಿನಾಂಕ:07/0
3/19</td><td>ಮಹದೇವಯ್ಯ, 28 ವರ್ಷ,
ವಾಸ ನಂ.1805, 5ನೇ
ಮೇನ್, 1ನೇ ಕ್ರಾಸ್,
ಆರ್.ಪಿ.ಸಿ ಲೇಔಟ್,
ವಿಜಯನಗರ, ಬೆಂಗಳೂರು.</td><td></td><td></td><td>ನಂ.16099/2019
ರಲ್ಲಿ ವಿಚಾರಣೆ
ಯಲ್ಲಿರುತ್ತದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರರಿಗೆ ಮತ್ತುಇವರ ಸ್ನೇಹಿತರಿಗೆಎಫ್.ಡಿ.ಎ ಕೆಲಸ ಕೊಡಿಸುವುದಾಗಿ ತಿಳಿಸಿ 30,00,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ. ಹಣ ಕೇಳಲು ಹೋದರೆಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾನೆಂದುಕೊಟ್ಟದೂರು.</td></tr>
<tr><td>10</td><td>ಉಪ್ಪಾರಪೇಟೆ</td><td>64/2019
ಕಲಂ420ಐಪಿಸಿ
.ದಿ:22/03/19</td><td>ಶ್ರೀ ರವಿ ಶಿವಪ್ಪ.ಟಿ.
ಸುರಮರಗ್ರಾಮ, ಗದಗತಾ॥
&ಜಿಲ್ಲೆ</td><td>ಸಾಯಿರಾಜ್ ಬಸವರಾಜರಾಮ್‌ಜಿ</td><td>ಇಲ್ಲಾ</td><td>ಸಿ ಅಂತಿಮ ವರದಿ
ಸಲ್ಲಿಸಿದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರರಿಗೆ ಮತ್ತುಇವರ ಸ್ನೇಹಿತರಿಗೆಅಬಕಾರಿಗಾರ್ಡ್ ಕೆಲಸ ಕೊಡಿಸುವುದಾಗಿ ತಿಳಿಸಿ 15,00,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.</td></tr>
<tr><td>11</td><td>ಉಪ್ಪಾರಪೇಟೆ</td><td>99/2019
ಕಲಂ 420
ಐಪಿಸಿ.
ದಿ:12/05/19</td><td>ಶ್ರೀ ಸಿದ್ದಯ್ಯ ಬಿನ್
ಹುಚ್ಚಭೈರಯ್ಯ, 66 ವರ್ಷ,
ವಾಸ ಮೈದಾಳ ಗ್ರಾಮ,
ಕೆಸ್ತೂರು ಪೋಸ್ಟ್,
ತುಮಕೂರು</td><td>ಧನರಾಜ್</td><td>ಇಲ್ಲಾ</td><td>ಸಿಸಿ ನಂ.28702/
2019 ರಲ್ಲಿ ವಿಚಾರಣೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರರ ಮಗನಿಗೆ ಅಬಕಾರಿಪಿ.ಎಸ್.ಐ ಕೆಲಸ ಕೊಡಿಸುವುದಾಗಿ ತಿಳಿಸಿ 10,00,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.</td></tr>
<tr><td>12</td><td>ಉಪ್ಪಾರಪೇಟೆ</td><td>115/2019
ಕಲಂ 420
ಐಪಿಸಿ.
ದಿನಾಂಕ:29/0
5/19</td><td>ಶ್ರೀಎ.ಜನಾರ್ಧನ್‌ಕುಮಾರ್
ಬಿನ್ ವೆಂಕಟೇಶಪ್ಪ, 30
ವರ್ಷ, ವಾಸ ಜಂಬೂ
ಬಜಾರ್, 2ನೇ ಕ್ರಾಸ್,
ಚಿಂತಾಮಣಿ.ಚಿಕ್ಕಬಳ್ಳಾಪುರ</td><td>ಸಂತೋಷ್ ಶಿವಾಜಿ ದುಮಾರೆ</td><td>ಇಲ್ಲಾ</td><td>ಸದರಿ
ಪ್ರಕರಣದಲ್ಲಿಮಾನ್ಯ
ನ್ಯಾಯಾಲಯಕ್ಕೆ
ದಿ:29/02/2020
ರಂದುಬಿಅಂತಿಮ ವರದಿ
ಸಲ್ಲಿಸಿದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರಿಗೆಪಿ.ಎಸ್.ಐ ಕೆಲಸ ಕೊಡಿಸುವುದಾಗಿ ತಿಳಿಸಿ 10,00,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.</td></tr>
<tr><td>13</td><td>ಉಪ್ಪಾರಪೇಟೆ</td><td>202/2019
ಕಲಂ 420ಐಪಿಸಿ.
ದಿನಾಂಕ:18/09
/19</td><td>ಶ್ರೀ ಶೇಖರಪ್ಪ ಬಿನ್ ಲೇಟ್
ಭೀಮಪ್ಪ, ವಾಸ ನಂ.30,
13ನೇ ಕ್ರಾಸ್, ಕಾವೇರಿಪುರ,
ಕಾಮಾಕ್ಷಿಪಾಳ್ಯ, ಬೆಂಗಳೂರು.</td><td>ದೇವೇಂದ್ರಪ್ಪ.ಡಿ</td><td>ಇಲ್ಲಾ</td><td>ಸದರಿ ಪ್ರಕರಣ ಮಾನ್ಯ
5ನೇ ಎಸಿಎಂಎಂ
ನ್ಯಾಯಾಲಯದ ಸಿಸಿ
ನಂ.26423/2019
ರಲ್ಲಿ ಮುಂದಿನ
ವಿಚಾರಣೆ
ದಿನಾಂಕ:22/12/2021</td></tr>
</table>

						ಅಗಿರುತ್ತದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯು ಫಿರ್ಯಾದುದಾರರು ಮತ್ತುಅವರ ಸ್ನೇಹಿತರ ಮಕ್ಕಳಿಗೆ ನ್ಯಾಯಾಲಯಗಳಲ್ಲಿ ಎಫ್.ಡಿ.ಎ&ಎಸ್.ಡಿ.ಎ ಕೆಲಸ ಕೊಡಿಸುವುದಾಗಿ ತಿಳಿಸಿ 11 ಜನರಿಂದಒಟ್ಟು42,40,000/-ರೂಗಳನ್ನು ಪಡೆದುಕೆಲಸವನ್ನುಕೊಡಿಸದೆಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.						
14	ಚಂದ್ರಾಲೇಔಟ್	214/2019 ಕಲಂ. 420 ಐಪಿಸಿ	ವೆಂಕಟೇಶ್ ಹೆಚ್.ಜಿ ಬಿನ್ ಗೋವಿಂದ ರಾಜು, #50, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಪಟ್ಟೆಗಾರ ಪಾಳ್ಯ, ವಿಜಯನಗರ, ಬೆಂ.	ಎ1 ಸುನೀಲ್ ಜಿ.ಬಿ ಬಿನ್ ಬೆಟ್ಟಸ್ವಾಮಿ, #226, ಗಾಣಸೂರು ಗ್ರಾಮ, ಬಿ.ಎಂ ಹೊಸೂರು ಪೋಸ್ಟ್, ಬಿಡದಿ, ರಾಮನಗರ ಜಿಲ್ಲೆ	-	8ನೇ ಎಸಿಎಂಎಂ ನ್ಯಾಯಾಲಯ - ವಿಚಾರಣಾ ಹಂತ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿತನು ತಾನು ಡಿ.ಕೆ ಶಿವ ಕುಮಾರ್ ಗನ್‌ಮ್ಯಾನ್ ಅಗಿದ್ದು, ಕಿದ್ವಾಯಿ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಕೆಲಸ ಕೊಡಿಸುವುದಾಗಿ ನಂಬಿಸಿ 04 ಲಕ್ಷ ನೀಡುವಂತೆ ತಿಳಿಸಿ 1,50,000 ಲಕ್ಷ ಅಡ್ವಾನ್ಸ್ ಪಡೆದು ಕೆಲಸ ಕೊಡಿಸದೇ, ಹಣ ವಾಪಾಸ್ಸು ನೀಡದೇ ವಂಚಿಸಿರುವ ಬಗ್ಗೆ ದೂರು						
15	ಬ್ಯಾಟರಾಯನ ಪುರ	ಮೊ.ಸಂ. 58/2019 ಕಲಂ 420 ಐಪಿಸಿ.	ಶ್ರೀಮುಕುಂದಪ್ಪ	ಯಶವಂತಪ್ಪ ಎ.ಡಿ. 57 ವರ್ಷ.	-	ಸದರಿ ಪ್ರಕರಣವನ್ನು ಸರಹದ್ದು ಆಧಾರದ ಮೇಲೆ ಉಪ್ಪಾರಪೇಟೆ ಪಿ.ಎಸ್.ಗೆ ದಿ:22.02.2019 ರಂದು ವರ್ಗಾವಣೆ ಮಾಡಲಾಗಿದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪ್ರಕರಣದ ಸಾರಾಂಶ:- ಫಿರ್ಯಾದಿಗೆ ಶ್ರೀ ಯಶವಂತಪ್ಪ ರವರು ಖಾಸಗಿಕಂಪನಿಯಲ್ಲಿ ಯಾಕೆ ಕೆಲಸ ಮಾಡುತ್ತಿಯಾ ಮುಖ್ಯಮಂತ್ರಿಯವರಿಗೆ ಹೇಳಿ ಪ್ರಥಮ ದರ್ಜೆ ಗುಮಾಸ್ತನ ಕೆಲಸ ಕೊಡಿಸುವ್ಯದಾಗಿ ಒಟ್ಟು 8,50,000/ ರೂಗಳನ್ನು ಪಡೆದುಕೊಂಡಿದ್ದು ಹಣವನ್ನು ವಾಪಸ್ಸು ನೀಡದೇ ಕೆಲಸವನ್ನು ಕೊಡದೆ ಮೋಸ ಮಾಡಿರುವ್ಯದಾಗಿ ಕೊಟ್ಟ ದೂರು ಇತ್ಯಾದಿ.						
16	ಬಸವೇಶ್ವರನಗರ	75/2019 ಕಲಂ 406, 420, 506, ಸಹಿತ 34 ಐಪಿಸಿ 10-03-2019	ಶ್ರೀ ಗಿರೀಶ್ ಕೆ.ಆರ್ ಬಿನ್ ರಾಮಕೃಷ್ಣ, ನಂ.660/ಸಿ, 2ನೇ ಮೈನ್,3ನೇಕ್ರಾಸ್,ರಂಗನಾಥಪುರ,ಸಿಂಡಿಕೇಂಟ್‌ಬ್ಯಾಂಕ್‌ಕಾಲೋನಿ,ವಿಜಯನಗರ,ಬೆಂ	ಸಂಗಾಪುರ ಎಂ ಎಸ್ ಬಿನ್ ಸಿದ್ದಣ್ಣ 55 ವರ್ಷ, ವಾಸ ನಂ. 1319, 2ನೇ ಕ್ರಾಸ್, ಕೆ.ಹೆಚ್‌ಬಿ ಕಾಲೋನಿ, ಗೋವಿಂದರಾಜನಗರ, ಬೆಂಗಳೂರುನಗರ.	-	ಸಿಸಿ ನಂ. 7006/2020 ವಿಚಾರಣೆ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಸಬ್ ರಿಜಿಸ್ಟರ್ ಹುದ್ದೆ ಕೊಡಿಸುವುದಾಗಿ ಹೇಳಿ ಮೋಸ ಮಾಡಿರುವ ಬಗ್ಗೆ						
17	ವಿಜಯನಗರ	68/2019ಕಲಂ 504,506, 420 ಐಪಿಸಿ	ಶ್ರೀ.ವಿಜಯ ಬಸಪ್ಪ	ವೀರಣಗೌಡ ನರಗುಂದ ತಾಲ್ಲೋಕ್, ಗದಗ	ಇಲ್ಲ	ನ್ಯಾಯಾಲಯದಲ್ಲಿ ವಿಚಾರಣೆ

ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಲಕ್ಷಾಂತರ ಹಣವನ್ನು ಪಡೆದುಕೊಂಡು ಸರ್ಕಾರಿ ಕೆಲಸ ಕೊಡಿಸದೇ ಹಣವನ್ನು ಸಹ ವಾಪಸ್ಸ್ ನೀಡದೇ ಕೇಳಿದರೇ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಮೋಸ ಮಾಡಿರುವ ಬಗ್ಗೆ ನೀಡಿದ ದೂರು ಇತ್ಯಾದಿ.						
18	ಯಲಹಂಕ	225/2019 ಕಲಂ 406, 420 ಐಪಿಸಿ	ಶ್ರೀಮತಿ.ಶೈಲಜಾ ಕೋಂ ಶಂಕರ್ ನಂ.126, 3ನೇ ಮೈನ್, 7ನೇ ಕ್ರಾಸ್, ಮಾರುತಿನಗರ, ಯಲಹಂಕ ಬೆಂಗಳೂರು	ಶ್ರೀನಾಥರೆಡ್ಡಿ	ಸದರಿ ಪ್ರಕರಣದಲ್ಲಿ ಆರೋಪಿತನು ಪತ್ತೆಯಾಗದ ಕಾರಣ 'ಸಿ' ಅಂತಿಮ ವರದಿ ಸಲ್ಲಿಸಿದೆ.	'ಸಿ' ಅಂತಿಮ ವರದಿ ನಿವೇದಿಸಿದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿತನು ಪಿರ್ಯಾದು ದಾರರ ಗಂಡ ಶಂಕರ್ ಎಂಬುವರಿಗೆ ರೈಲ್ವೇ ಇಲಾಖೆಯಲ್ಲಿ ಕ್ಲರ್ಕ್ ಕೆಲಸ ಕೊಡಿಸುವುದಾಗಿ ನಂಬಿಸಿ 8 ಲಕ್ಷ ಹಣ ಪಡೆದು ಕೆಲಸವನ್ನು ಕೊಡಿಸದೇ ಹಣವನ್ನು ವಾಪಸ್ ಕೊಡದೇ ಮೋಸ ಮಾಡಿರುತ್ತಾನೆಂದು ನೀಡಿರುವ ದೂರು ಇತ್ಯಾದಿ.						
19	ವೈಟ್‌ಫೀಲ್ಡ್	518/2019 ಕಲಂ 406, 420 ಸಹಿತ 34 ಐಪಿಸಿ	ಪುರುಷೋತ್ತಮ ರೆಡ್ಡಿ	1)ಕಲ್ಯಾಣ ಚಕ್ರವರ್ತಿ ಮತ್ತು 2)ಸಂತೋಷಿ	ಇಲ್ಲಾ	ತನಿಖೆ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-ಈ ಕೇಸಿನ ಸಾರಾಂಶವೇನೆಂದರೆ, ಆರೋಪಿಯು ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ, ಅವರ ಅಕೌಂಟಿನಿಂದ ಐ.ಡಿ.ಬಿ.ಐ ಖಾತೆ ವರ್ಗಾವಣೆ ಮಾಡಿಸಿಕೊಂಡು, ಕೆಲಸ ಕೊಡಿಸದೇ ಮೋಸ ಮಾಡಿರುತ್ತಾರೆಂದು ನೀಡಿದ ದೂರು ಇತ್ಯಾದಿ.						
20	ಕೆ.ಆರ್ ಪುರ	90/2019 ಕಲಂ: 420,406 ಐಪಿಸಿ	ಶ್ರೀ. ರಾಜೇಶ್ ಜಯಸಿಂಹ, ನಂ. 17/ಎ, ಹೆಚ್.ಟಿ ಲೈನ್, ಆದಿತ್ಯಾ ಲೇ ಔಟ್, ಕಲ್ಕೆರೆ ಮುಖ್ಯರಸ್ತೆ, ರಾಮಮೂರ್ತಿ ನಗರ ಬೆಂ	ಶ್ರೀಮತಿ ರಮ್ಯ ಶ್ರೀ ಮಿಥುನ್ ಕುಮಾರ್	ಇಲ್ಲ	ಪ್ರಕರಣವು 4ನೇ ಎ.ಸಿ.ಎಂ.ಎಂ ನ್ಯಾಯಾಲಯದ ಸಿಸಿ ನಂ. 7237/2020ರಲ್ಲಿ ವಿಚಾರಣೆಯಲ್ಲಿದೆ.
ಈ ಕೇಸಿನ ಸಾರಾಂಶವೇನೆಂದರೆ ಪಿರ್ಯಾದುದಾರರಿಗೆ ಆರೋಪಿಗಳು ರೈಲ್ವೆ ಇಲಾಖೆಯಲ್ಲಿ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ, 07 ಲಕ್ಷ ರೂ ಹಣವನ್ನು ಪಡೆದು ಕೆಲಸವನ್ನು ಕೊಡಿಸದೇ, ಹಣವನ್ನು ವಾಪಸ್ ಕೊಡದೇ ಮೋಸ ಮಾಡಿರುತ್ತಾರೆಂದು						

2020

ಕ್ರ. ಸಂ	ಪೊಲೀಸ್ ಠಾಣೆಯ ಹೆಸರು	ಮೊ.ಸಂ.& ಕಲಂ, ದಿನಾಂಕ	ಫಿರ್ಯಾದುದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
1	ರಾಜಗೋಪಾಲನಗರ	147/2020 ಕಲಂ-384, 504, 506, ರೆ/ವಿ 34ಐಪಿಸಿ.	ಸಿಟಿಂ-66, ಎಲ್.ಜಿ. ಎಸ್.ಟಿಓ.ಡಿ.ಜಿ.ಎಸ್.ಟಿ.ಓ-06, 14ನೇ ಕ್ರಾಸ್, ಪೀಣ್ಯ	ನಟರಾಜ ನಾಡಿಗ ರೆಡ್ಡಿ	ಇಲ್ಲ	ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತದೆ.

<table>
<tr><td></td><td></td><td></td><td>೨ನೇ ಹಂತ ಬೆಂ.</td><td></td><td></td><td></td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-

ಈ ಕೇಸಿನ ಸಾರಾಂಶವೇನೆಂದರೆ. ಪಿರ್ಯಾದುದಾರರು ಸಿಟಿಂ-೬೬. ಎಲ್.ಜಿ.ಎಸ್.ಟಿ.ಓ. ಡಿ.ಜಿ.ಎಸ್.ಟಿ.ಓ-೦೬. ೧೪ನೇ ಕ್ರಾಸ್. ಪೀಣ್ಯ ೨ನೇ ಹಂತ ಬೆಂಗಳೂರು ರವರು ಠಾಣೆಗೆ ಹಾಜರಾಗಿ ೨೦೧೯ನೇ ಸಾಲಿನಲ್ಲಿ ಪಿರ್ಯಾದುದಾರರು ಚಿತ್ರದುರ್ಗ ಜಿಲ್ಲೆಯ ತುರುವನೂರು ಗ್ರಾಮದಲ್ಲಿ ಮನೆ ಕಟ್ಟಿಸುತ್ತಿದ್ದು ಆ ಸಮಯದಲ್ಲಿ ರಾಜಶೇಖರ್ ಎಂಬ ಟೈಲ್ಸ್ ಕೆಲಸ ಮಾಡುವವರಿಂದ ನಟರಾಜ ಎಂಬುವರು ಪರಿಚಯವಾಗಿದ್ದು ನನಗೆ ೨೦೧೯ನೇ ಸಾಲಿನಲ್ಲಿ ಕೆ.ಪಿ.ಎಸ್.ಸಿ ವ್ಯಯಕ್ತಿಕ ಪರೀಕ್ಷೆಗೆ ಆಯ್ಕೆಯಾಗಿದ್ದು ಆಗ ನಟರಾಜ ನನಗೆ ದೊಡ್ಡ ವ್ಯಕ್ತಿಗಳು ಗೊತ್ತು. ರಾಜಕೀಯ ವ್ಯಕ್ತಿಗಳು ಪರಿಚಯವಿದ್ದಾರೆ ೮,೦೦೦,೦೦೦/- ರೂಗಳನ್ನು ಕೊಡು ನಾನು ನಿನಗೆ ಎ.ಸಿ ಅಥವಾ ಡಿ.ವೈ.ಎಸ್.ಪಿ ಹುದ್ದೆ ಮಾಡಿಸಿಕೊಡುತ್ತೇನೆಂದು . ನಂತರ ಕೆ.ಪಿ.ಎಸ್.ಸಿ ಅಲ್ಲಿ ದುಡ್ಡಿನ ವಿಚಾರ ನಡೆಯುವುದಿಲ್ಲವೆಂದು ಸುಮ್ಮನಿದ್ದೆನು. ೨೦೧೯ನೇ ಸಾಲಿನ ಡಿಸೆಂಬರ್ ಕೊನೇಯ ವಾರದಲ್ಲಿ ಕೆ.ಪಿ.ಎಸ್.ಸಿ ಯಲ್ಲಿ ಪಲಿತಾಂಶ ಬಂದಿದ್ದು ಅದರಲ್ಲಿ ನನಗೆ ತಹಶೀಲ್ದಾರ್ ಹುದ್ದೆ ಸಿಕ್ಕಿರುತ್ತದೆ. ಇದನ್ನು ತಿಳಿದ ನಟರಾಜ ಹುದ್ದೆಯನ್ನು ನಾನೇ ಮಾಡಿಸಿರುತ್ತೇನೆ ನನಗೆ ಹಣ ಕೊಡು ಎಂದು ಪೀಡಿಸುತ್ತಿದ್ದನು. ದಿನಾಂಕ: 25/02/2020 ರಂದು ಮದ್ಯಾಹ್ನ 12-00 ಗಂಟೆ ಸಮಯದಲ್ಲಿ ನಟರಾಜ 4 ರಿಂದ 5 ಜನಗಳ ಜೊತೆ ಮೇಲ್ಕಂಡ ನನ್ನ ಕಛೇರಿಯ ಹತ್ತಿರ ಬಂದಿದ್ದು ನಾನು ಸಿಗದ ಕಾರಣ ನನ್ನ ಮೇಲಾಧಿಕಾರಿಗಳಾದ ಜೆಸಿಸಿಟಿ-೦೬ ರವರ ಬಳಿ ವೃಥ್ವಿಗೆ ತಹಶೀಲ್ದಾರ್ ಹುದ್ದೆ ಕೊಡಿಸಿದ್ದು ನಾನು ನನಗೆ ಹಣ ಕೊಡದಿದ್ದರೆ ಅತನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಹೋಗಿರುತ್ತಾರೆ. ಇದಾದ 2-3 ವಾರಗಳ ಬಳಿಕ ನಟರಾಜನ ಹುಡುಗರೆಂದು ಹೇಳಿಕೊಂಡು ಬಂದು ನಟರಾಜನಿಗೆ ಹಣ ಕೊಡದಿದ್ದರೆ ಸುಮ್ಮನೆ ಬಿಡುವುದಿಲ್ಲ ಸೂಳೆ ಮಗನೆ. ಬೋಳಿ ಮಗನೆ ಎಂದು ಬೈದು ಬೆದರಿಕೆ ಹಾಕಿರುತ್ತಾರೆಂದು ಕ್ರಮಕ್ಕಾಗಿ ಕೊಟ್ಟ ದೂರು ಇತ್ಯಾದಿ.</td></tr>
<tr><td>2</td><td>ಜ್ಞಾನಭಾರತಿ</td><td>250/2020 ಕಲಂ. 506,34,420, 417 ಐಪಿಸಿ</td><td>ಶ್ರೀ.ಮಹೇಶ್.ಪಿ ಬಿನ್ ಪುಟ್ಟಮಾದು ನಂ.12. ವೈಭವಿ ನಿಲಯ. ಮರಿಯಪ್ಪನಪಾಳ್ಯ. ನಾಗದೇವನಹಳ್ಳಿ. ಬೆಂಗಳೂರು ನಗರ.</td><td>1. ಪಲ್ಲವಿ
2. ಭದ್ರಿನಾಥ್</td><td>-</td><td>ಮಾನ್ಯ ನ್ಯಾಯಾಲಯಕ್ಕೆ ಬಿ ವರದಿಯನ್ನು ಸಲ್ಲಿಸಲಾಗಿದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಪಿರ್ಯಾದಿ ಮಗನಿಗೆ ಕೆಪಿಎಸ್‌ಸಿಯಲ್ಲಿ ಸಬ್ ರಿಜಿಸ್ಟರ್ ಹುದ್ದೆಯನ್ನು ಕೊಡಿಸುವುದಾಗಿ ನಂಬಿಸಿ ಆರೋಪಿಗಳು ರೂ.36,00000/-ಗಳನ್ನು ಪಡೆದುಕೊಂಡು ಹಣವನ್ನು ವಾಪಸ್ ಕೊಡಿಸದೇ. ಕೆಲಸವನ್ನು ಕೊಡಿಸದೇ ಮೋಸ ಮಾಡಿರುತ್ತಾನೆ ಎಂದು ಕೊಟ್ಟ ದೂರು ಇತ್ಯಾದಿ.</td></tr>
<tr><td>3</td><td>ಕೆಂಗೇರಿ</td><td>238/2020 ಕಲಂ 420 ಐಪಿಸಿ . ವರದಿ 19-08-2020</td><td>ಗೋಪಾಲಗೌಡಬಿನ್ ಲಿಂಗೇಗೌಡ. 32ವರ್ಷ. ನಂ. 315. 5ನೇ ಕ್ರಾಸ್. 6ನೇ ಮುಖ್ಯರಸ್ತೆ. ಜ್ಞಾನಭಾರತಿ ಲೇಔಟ್. ಬೆಂ. ನಗರ.</td><td>ಮುರುಳಿಗೌಡ. ಎನ್‌ಆರ್. ನಂ. 59. 2ನೇ ಮಹಡಿ.9ನೇ ಕ್ರಾಸ್. 1ನೇ ಮುಖ್ಯರಸ್ತೆ. ಆವಲಹಳ್ಳಿ. ಬಿ.ಡಿ.ಎ ಲೇಔಟ್. ಬೆಂ. ನಗರ.</td><td>ಘನ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.</td><td>ಘನ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-</td></tr>
</table>

<table>
<tr><td colspan="7">ಮುರುಳಿಗೌಡ ಎಂಬುವನು ಅಂದಿನ ಮಾಜಿ ಮುಖ್ಯ ಮಂತ್ರಿಗಳಾದ ಕುಮಾರಸ್ವಾಮಿರವರ ಬಳಿ ಬಾಡಿಗಾರ್ಡ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ಪಿರ್ಯಾದುದಾರರಿಗೆ ವಂಚಿಸಿ, ಸಿ.ಎಂ. ಕಛೇರಿಯಲ್ಲಿ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ, ಪಿರ್ಯಾದುದಾರರಿಂದ 5 ಲಕ್ಷಹಣವನ್ನು ಪಡೆದು ವಂಚಿಸಿರುತ್ತಾನೆ.</td></tr>
<tr><td>4</td><td>ಬ್ಯಾಡರಹಳ್ಳಿ</td><td>327/2020
ಕಲಂ: 420
ಐಪಿಸಿ
ದಿ:07.11.2020</td><td>ಗಣೇಶ ಸಿ ಗೌಡ ಬಿನ್ ಚಿಕ್ಕವರದೇಗೌಡ, 41 ವರ್ಷ, ಎಸ್.ಎಲ್.ವಿ ಸೈಬರ್ ಸೆಂಟರ್, ಈಸ್ಟ್ ವೆಸ್ಟ್ ಕಾಲೇಜ್, ಬಿ.ಇ.ಎಲ್ ಲೇಔಟ್, ಬೆ-91</td><td>ಎ1. ಮುರಳೀಗೌಡ ಎಂ</td><td>ಇಲ್ಲ</td><td>ಸಿಸಿ ನಂ-10896/2021 ಆಗಿದ್ದು ಮಾನ್ಯ ಸಿ.ಜೆ.ಎಂ ನ್ಯಾಯಲಯ ವಿಚಾರಣೆಯಲ್ಲಿರುತ್ತದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-

ಪಿರ್ಯಾದುದಾರರಿಗೆ ಮತ್ತು ಇತರರಿಗೆ ತಾನು ಪ್ರಧಾನ ಮಂತ್ರಿಗಳ ಕಛೇರಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ಡಿಆರ್‌ಡಿಓ ದಲ್ಲಿನ ಇತರೆ ವಿಭಾಗಗಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ಪಿರ್ಯಾದುದಾರರು ಮತ್ತು ಅವರ ಪರಿಚಯದವರಿಂದ ಹಣ ಪಡೆದು ಮೋಸ ಮಾಡಿರುವ ಬಗ್ಗೆ ದೂರು.</td></tr>
<tr><td>5</td><td>ಯಲಹಂಕ</td><td>174/2020
ಕಲಂ 420. 406.468.471
ಐಪಿಸಿ</td><td>ಶ್ರೀ.ಪೆಂಚಲಯ್ಯ. ಸಿ ಬಿನ್ ಮುನಿಸ್ವಾಮಿ 45ವರ್ಷ. ವಾಸ ನಂ.52. 3ನೇ ಮಹಡಿ. 4ನೇ ಕ್ರಾಸ್. ಜಿ.ಕೆ.ವಿ.ಕೆ ಪೋಸ್ಟ್. ಜಕ್ಕೂರು ಮುಖ್ಯರಸ್ತೆ. ಯಲಹಂಕ. ಬೆಂಗಳೂರು</td><td>ಬಸವರಾಜ ನಿಡಗುಂದಿ ವಾಸ ಫ್ಲಾಟ್ ನಂ.204. ಎ ಬ್ಲಾಕ್. ವೆಂಕಟ್ ಎಸ್ಟೇಟ್ ಅಪಾರ್ಟ್‌ಮೆಂಟ್. ಜಕ್ಕೂರು ರಸ್ತೆ. ಯಲಹಂಕ. ಬೆಂಗಳೂರು</td><td>ಆರೋಪಿತನನ್ನು ದಸ್ತಗಿರಿ ಪಡಿಸಿ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತದೆ.</td><td>ಮಾನ್ಯ 37ನೇ ನ್ಯಾಯಾಲಯದ ಸಿ.ಸಿ.ನಂ.1585/2021 ರಲ್ಲಿ ವಿಚಾರಣೆ ನಡೆಯುತ್ತಿರುತ್ತದೆ. ಮುಂದಿನ ವಿಚಾರಣಾ ದಿ.16/12/2021 ಆಗಿರುತ್ತದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿತನು ಪಿರ್ಯಾದು ದಾರರ ಮಗನಿಗೆ ರೈಲ್ವೇ ಇಲಾಖೆಯಲ್ಲಿ ಕೆಲಸ ಕೊಡಿಸು ವುದಾಗಿ ನಂಬಿಸಿ ಒಟ್ಟು ರೂ.5.75.000/- ಗಳನ್ನು ಪಡೆದು ಕೆಲಸವನ್ನು ಕೊಡಿಸದೇ ಹಣವನ್ನು ವಾಪಸ್ ಕೊಡದೇ ಮೋಸ ಮಾಡಿರುತ್ತಾನೆಂದು ನೀಡಿರುವ ದೂರು ಇತ್ಯಾದಿ</td></tr>
<tr><td>6</td><td>ಸಂಪಿಗೇಹಳ್ಳಿ</td><td>28/2020
ಕಲಂ 420
ಐಪಿಸಿ</td><td>ನೂತನ್</td><td>ಪ್ರಕಾಶ್ ಪಾಟೀಲ್ ಬಿನ್ ರಾಮೇಗೌಡ 43 ವರ್ಷ ನಂ.1248 13ನೇ ಕ್ರಾಸ್ ಎಂಸಿಇಸಿಹೆಚ್‌ಎಸ್ ಬಡಾವಣೆ ಬೆಂಗಳೂರು 77</td><td>ಹಿಂದಿರುಗಿಸಿರುವುದಿಲ್ಲ</td><td>ತನಿಖೆಯಲ್ಲಿದೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರರಿಗೆ ನನಗೆ ಕೇಂದ್ರ ಸರ್ಕಾರದ ನೌಕರಿಯಲ್ಲಿ ಪರಿಯಸ್ಥರಿರುವುದಾಗಿ ನಂಬಿಸಿ. ಕೇಂದ್ರ ಸರ್ಕಾರಿ ನೌಕರಿ ಕೊಡಿಸುವುದಾಗಿ ನಂಬಿಸಿ ರೂ.1100000/-ಗಳ ಹಣವನ್ನು ತನ್ನ ವಿವಿಧ ಬ್ಯಾಂಕ್ ಖಾತೆಗಳಿಗೆ ಪಿರ್ಯಾದು ಇಂದ ಹಣ ಜಮೆ ಮಾಡಿಸಿಕೊಂಡು ಕೆಲಸ ಕೊಡಿಸದೇ ಮೋಸ ಮಾಡಿರುವ ಬಗ್ಗೆ</td></tr>
<tr><td>7</td><td>ವಿಲ್ಸನ್‌ಗಾರ್ಡನ್</td><td>ಮೊ.ಸಂ.
96/2020
ಕಲಂ 406.
420 ಐಪಿಸಿ</td><td>ಶ್ರೀ ಹರೀಶ್.ಕೆ. ಬಿನ್ ಕೋದಂಡರಾಮಯ್ಯ. ನಂ. 99. ಎನ್.ಟಿ. ಬ್ಲಾಕ್. ಉರಿಗಂ ಪೋಸ್ಟ್& ವಿಲೇಜ್. ಬಂಗಾರಪೇಟೆತಾಲ್ಲೋಕ್</td><td>1. ಶ್ರೇಯಸ್ ಬೋಗಾರ್
2. ಮಾನೇಕ್ಯಲಾಸ್ ಮುಂಡೆ
3. ಅಜಿತ್‌ಕುಮಾರ್
4. ಪ್ರಣವ್ @ ಕುಮಾರ್
5. ಸಚಿನ್ ಸಕ್ಸೇನಾ @</td><td>-</td><td>ಪ್ರಕರಣವು ತನಿಖೆಯಲ್ಲಿರುತ್ತದೆ ಎ2. ಎ3. ಎ4 ಎ5 ಆರೋಪಿಗಳನ್ನು ಪತ್ತೆ ಮಾಡಬೇಕಾಗಿರುತ್ತದೆ.</td></tr>
</table>

				ವಿನಯ್ 6. ಶಾಂತಕುಮಾರ್, 7. ಸುರೇಶ್		
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಫಿರ್ಯಾದುದಾರರು ಮತ್ತು 15 ಜನ ಅಭ್ಯರ್ಥಿಗಳಿಗೆ ರೈಲ್ವೆಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ತರಬೇತಿ ಮಾಡಿಸಿ ಕೆಲಸ ಕೊಡಿಸದೇ ಮೋಸ ಮಾಡಿರುವುದಾಗಿ ಕೊಟ್ಟ ದೂರು.						
8	ವೈಟ್‌ಫೀಲ್ಡ್	98/2020 ಕಲಂ 406, 420 ಸಹಿತ 34 ಐಪಿಸಿ	ಶ್ರೀಮತಿ ಪ್ರಿಯಾ ಪಿಳ್ಳೈ-ಮ್ಯಾನೇಜರ್, ಎಸ್.ಬಿ.ಐ ಬ್ಯಾಂಕ್,	1)ಹಿತೇಶ್ ಆರ್ 2)ಕಲ್ಯಾಣ್ ಚಕ್ರವರ್ತಿ	ಇಲ್ಲ	ತನಿಖೆ
ಪಿರ್ಯಾದುದಾರರು ವೈಟ್‌ಫೀಲ್ಡ್ ಪೊಲೀಸ್ ಠಾಣೆಯ ಮೊಸಂಖ್ಯೆ 518/19 ಕಲಂ 406, 420 ಸಹಿತ 34 ಐಪಿಸಿ ಪ್ರಕರಣದ ಪಿರ್ಯಾದುದಾರರಾದ ಶ್ರೀ.ಪುರುಷೋತ್ತಮ್ ರೆಡ್ಡಿ ಮತ್ತು ದಂಡಪಾಣಿ ರವರೊಂದಿಗೆ ಠಾಣೆಗೆ ಆಗಮಿಸಿ, ವೈಟ್‌ಫೀಲ್ಡ್ ನಿವಾಸಿಯಾದ ಹಿತೇಶ್ ಆರ್ ರವರ ಮುಖಾಂತರ ಹೈದರಾದಬಾದ ನಿವಾಸಿಯಾದ ಕಲ್ಯಾಣ್ ಚಕ್ರವರ್ತಿ ರವರು ಪರಿಚಯವಾಗಿದ್ದು, ಕಲ್ಯಾಣ್ ಚಕ್ರವರ್ತಿಯವರು ಪಿರ್ಯಾದುದಾರರಿಗೆ ಭಾರತೀಯ ರೈಲ್ವೆ ಇಲಾಖೆಯಲ್ಲಿ ಅಧಿಕಾರಿಗಳು ಪರಿಚಯವಿದ್ದು, ನನಗೆ ನೇಮಕಾತಿ ಕಾಂಟ್ರ್ಯಾಕ್ಟ್ ದೊರಕಿದ್ದು, ಯಾರಿಗಾದರೂ ರೈಲ್ವೆ ಇಲಾಖೆಯಲ್ಲಿ ಕೆಲಸ ಬೇಕಾದರೆ ಕೊಡಿಸುವುದಾಗಿ ನಂಬಿಸಿ ಪಿರ್ಯಾದುದಾರರಿಗೆ ಪರಿಚಯವಿರುವ ಸೋಮಶೇಖರ್ ರೆಡ್ಡಿ, ಆನಂದ ರೆಡ್ಡಿ, ನಾಗರಾಜ್ ನಾಯ್ಡು, ಬಾಬು ರೆಡ್ಡಿ, ಜಗದೀಶ್ವರ ರಾವ್, ನಾರಾಯಣ ಗೌಡ, ನೇತ್ರಾವತಿ ಮತ್ತು ಜಗನ್ನಾಥ ರೆಡ್ಡಿ ರವರುಗಳ ಮುಖಾಂತರ ಕಲ್ಯಾಣ್ ಚಕ್ರವರ್ತಿ ರವರು ನೀಡಿದಂತಹ ಇವರ ಹೆಂಡತಿಯ ಖಾತೆಗೆ ಒಟ್ಟು 75 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿದ್ದು, ಕಲ್ಯಾಣ್ ಚಕ್ರವರ್ತಿ ರವರು ಹಣವನ್ನು ಪಡೆದು ತಿಂಗಳಾದರೂ ಕೆಲಸವನ್ನು ಕೊಡದೇ ಹಣವನ್ನು ವಾಪಾಸ್ಸು ಕೊಡದೇ ಮೋಸ ಮಾಡಿರುವ ಬಗ್ಗೆ ಮೊ.ಸಂಖ್ಯೆ 518/19 ರಂತೆ ಪ್ರಕರಣ ದಾಖಲಾಗಿದ್ದು, ಇದಾದ ನಂತರ ತಿಳಿದು ಬಂದ ಸಂಗತಿ ಏನೆಂದರೆ ಪಿರ್ಯಾದುದಾರರಿಗೆ ಹಿತೇಶ್ ಆರ್ ರವರು ಸಹಾಯ ಮಾಡುವ ಹಾಗೆ ನಂಬಿಸಿ, ಹಿತೇಶ್ ರವರು ಕಲ್ಯಾಣ್ ಚಕ್ರವರ್ತಿ ರವರಿಗೆ ಸಹಾಯ ಮಾಡುತ್ತಿರುವುದು ಕಂಡು ಬಂದಿದ್ದು, ನೊಂದ ಪಿರ್ಯಾದುದಾರರಿಗೆ ಹಾಗೂ ಇತರರಿಗೆ ನಂಬಿಕೆ ದ್ರೋಹವೆಸಗಿರುತ್ತಾರೆ. ಆದ್ದರಿಂದ ಆರೋಪಿತರ ವಿರುದ್ಧ ಕಾನೂನು ಕ್ರಮವನ್ನು ಜರುಗಿಸಬೇಕೆಂದು ನೀಡಿದ ದೂರು ಇತ್ಯಾದಿ.						

2021 ನೇ ಸಾಲಿನ (30.11.2021)

ಕ್ರ. ಸಂ	ಪೊಲೀಸ್ ಠಾಣೆಯ ಹೆಸರು	ಮೊ.ಸಂ.& ಕಲಂ, ದಿನಾಂಕ	ಫಿರ್ಯಾದುದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
1	ಹಲಸೂರು	253/2021 ಕಲಂ 420 ಐಪಿಸಿ	ಶ್ರೀ ಜಯಕುಮಾರ್ ಬಿನ್ ದೊರೆಸಿಂಗ್ 72 ವರ್ಷ ವಾಸ: ನಂ 02, ಮುನಿಸ್ವಾಮಪ್ಪ ರಸ್ತೆ, 4ನೇ ಕ್ರಾಸ್ ಟೆಂಡರ್ ಚಿಕನ್ ಎದುರುಗಡೆ ಕಮ್ಮನಹಳ್ಳಿ ಬೆಂಗಳೂರು.	ಆರೋಕ್ಯ ದಾಸ್ ಬಿನ್ ಲೇಟ್ ಲೂರುಸ್ವಾಮಿ 55 ವರ್ಷ ವಾಸ: ನಂ 151, 5ನೇ ಕ್ರಾಸ್ ಗಜೇಂದ್ರ ನಗರ ಹಳೆ ಬೈಯಪ್ಪನಹಳ್ಳಿ ಬೆಂಗಳೂರು.	ಇಲ್ಲ	ತನಿಖೆಯಲ್ಲಿರುತ್ತದೆ.
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯು ಪಿರ್ಯಾದುದಾರರಿಗೆ ತಾನು HQ &MEG Center ನಲ್ಲಿ ಸಿನಿಯರ್ ರಿಕ್ರೂಟ್‌ಮೆಂಟ್ ಅಫೀಸರ್ ಆಗಿರುವುದಾಗಿ ಪರಿಚಯವಾಗಿ ಪಿರ್ಯಾದುದಾರರ ಸಂಬಂಧಿಕರು ಮತ್ತು ಸ್ನೇಹಿತರುಗಳಿಗೆ ಊಕಿ ಓಓಇಉ ಅಜಓಣಜ ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಪಿರ್ಯಾದುದಾರರ ಬಳಿಯಿಂದ ಹಂತಹಂತವಾಗಿ 21,00,000/- ರೂ ಹಣವನ್ನು ಪಡೆದು ನಂತರದಲ್ಲಿ ಕೆಲಸವನ್ನು ಕೊಡಿಸದೆ ಹಣವನ್ನು ವಾಪಸ್ಸು ಕೊಡದೆ ಮೋಸಮಾಡಿರುತ್ತಾರೆಂದು ಕ್ರಮ ತೆಗೆದುಕೊಳ್ಳುವಂತೆ ಕೊಟ್ಟ ದೂರು.						

<table>
<tr><td>2</td><td>ಡಿ.ಜೆ ಹಳ್ಳಿ</td><td>39/2021
ಕಲಂ-420 . 406
ರೆ/ವಿ 34 ಐಪಿಸಿ</td><td>ಶ್ರೀಮತಿ ಬಿ.ಪಿ ರಾಜೇಶ್ವರಿ ಗಂಡ ಶಶಿಕುಮಾರ್ ಎನ್ ಎಲ್, 50 ವರ್ಷ, ನಂ.111, ಕೆ.ಹೆಚ್.ಬಿ ಕ್ವಾಟ್ರಸ್ ಕೆ.ಜಿ ಸಂದ್ರ ಬೆಂಗಳೂರು</td><td>1)ವೆಂಕಟೇಶ್ ಹೆಚ್.ಸಿ ಬಿನ್ ಚಿಕ್ಕ ಹೊನ್ನಯ್ಯ, 32 ವರ್ಷ, ನಂ.01, ಹಸಿರಿ ಗ್ರಾಂಡ್, ದ್ವಾರಕಾ ನಗರ, ಯಲಹಂಕ, ಬೆಂಗಳೂರು
2]ಮನೋಹರ್
3]ರೇಣುಕಾ</td><td>1850000</td><td>ತನಿಖೆಯಲ್ಲಿರುತ್ತದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ ಪಿರ್ಯಾದುದಾರರ ಮಗನಾದ ಎಸ್ ಓಜಸ್ಯಾದವ್, ರವರಿಗೆ ವೆಂಕಟೇಶ್ ಎಂಬಾತ ಪಿ.ಎಸ್.ಐ ಹುದ್ದೆಯನ್ನು 23ಲಕ್ಷಕ್ಕೆ ಕೊಡಿಸುವುದಾಗಿ ನಂಬಿಸಿ ಹಂತಹಂತವಾಗಿ 1850000 ರೂ ಹಣವನ್ನು ಮನೋಹರ್, ರೇಣುಕಾ, ಹಾಗೂ ವೆಂಕಟೇಶ್ರವರು ಪಡೆದುಕೊಂಡು ನಂತರ ಯಾವುದೇ ಪಿ.ಎಸ್.ಐ ಕೆಲಸ ಕೊಡಿಸದೆ ಮೋಸ ಮಾಡಿರುತ್ತಾರೆ. ಆದ್ದರಿಂದ ಈ ರೀತಿ ಪಿ.ಎಸ್.ಐ ಕೆಲಸ ಕೊಡಿಸುವುದಾಗಿ ನಂಬಿಸಿ ಮೋಸ ಮಾಡಿದ ವೆಂಕಟೇಶ್ ಹೆಚ್ ಸಿ, ಮನೋಹರ್ ಹಾಗೂ ರೇಣುಕಾ,ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ..</td></tr>
<tr><td>3</td><td>ರಾಜಾಜಿನ 'ಗರ ಪಿಎಸ್</td><td>86/2021
ಕಲ406,420
ಸಹಿತ ಐಪಿಸಿ</td><td>ಶ್ರೀ. ಭಾಸ್ಕರನ್ ನಂ.453, 5ನೇ ಕ್ರಾಸ್,1ನೇ ಮೈನ್ ರೋಡ್, ಪಂಚಶೀಲ ನಗರ,ಮೂಡಲಪಾಳ್ಯ, ಬೆಂ.</td><td>ಎ1 ನಟರಾಜ್ ಎ2. ಕೆಟಿ ವೀಣಾ ಎ3. ಪದ್ಮರೇಖಾ. ಎ4. ಧರ್ಮೇಂದ್ರ ಜೈನ್. ಎ5.ಆದಿತ್ಯ. ಎ6.ಪ್ರತೀಕ್. ಎ7.ಅನಂತ್ ಕುಮಾರ್.ಎಸ್. ಎ8.ಅನಂತು(ಆಡಿಟರ್). ಎ9.ಹೆಗಡೆ. ಎ10.ಭಟ್</td><td>ಇಲ್ಲ</td><td>ಪ್ರಕರಣವು ಹಾಲಿ ತನಿಖಾ ಹಂತದಲ್ಲಿಇರುತ್ತದೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಪಿರ್ಯಾದುದಾರರು ಮೇಲಾಧಿಕಾರಿಗಳ ಮುಖಾಂತರ ಕೊಟ್ಟ ದೂರಿನ ಸಾರಾಂಶವೇನೆಂದರೆ. ರಾಜಾಜಿನಗರ. 4ನೇ ಬ್ಲಾಕ್. 41ನೇ ಕ್ರಾಸ್. ನಂ.2. 1ನೇ ಮಹಡಿಯಲ್ಲಿರುವ ಸ್ಪಂದನ ಫೌಂಡೇಶನ್‌ನ ನಟರಾಜ್ ರವರು ದಿನಾಂಕ.06.06.2019 ರಲ್ಲಿ ಪಿಯಾದುದಾರರನ್ನು ಸಂಪರ್ಕಿಸಿ 11,50,000 ರೂ. ಗಳನ್ನು ಸಂಸ್ಥೆಗೆ ಕೊಡುವಂತೆ ಕೇಳಿದ್ದುದರಿಂದ ನಟರಾಜು.ಎನ್.ಎಸ್. ರವರಿಗೆ 11,50,000 ರೂ. ನಗದು ಹಣ ಕೊಟ್ಟಿದ್ದು. ತದನಂತರ ಕೊರೋನದಿಂದ ಬ್ಯುಸಿನೆಸ್ ಲಾಸ್ ಆಗಿದ್ದ ಕಾರಣ ಹೇಳಿ ಮತ್ತೊಮ್ಮೆ 8,50,000 ರೂಗಳನ್ನು 2020 ರಲ್ಲಿ ಪಿರ್ಯಾದಿಯವರಿಂದ ಪಡೆದುಕೊಂಡಿರುತ್ತಾರೆ. ಒಟ್ಟು 20,00,000 ರೂ.ಗಳನ್ನು ಸ್ಪಂದನ ಫೌಂಡೇಷನ್ ಸಂಸ್ಥಾಪಕರು ಎಂದು ವೀಣಾ.ಕೆ.ಟಿ ರವರನ್ನು ಪರಿಚಯಿಸಿ ಕೇಂದ್ರದಿಂದ 100 ಕೋಟಿ ರೂ.ಅನುದಾನ ಬರಬೇಕಾಗಿದ್ದು. ಅದರಲ್ಲಿ ನಮ್ಮ ಬಳಿ 22,50,000 ರೂ. ಮಾತ್ರ ಇದ್ದು, ಉಳಿದ 27,50,000 ರೂ. ಸದರಿ ಹಣವನ್ನು ಐಸಿಐಸಿಐ ಚೆಕ್ ಗಳ ಮೂಲಕ ಸ್ಪಂದನ ಸಂಸ್ಥೆಗೆ ಹಾಕಿಸಿಕೊಂಡಿರುತ್ತಾರೆ. ಕೇಂದ್ರದಿಂದ ಅನುದಾನ ಬಂದ ತಕ್ಷಣ ಹಣ ವಾಪಸ್ ಕೊಡುವುದಾಗಿ ತಿಳಿಸಿದ್ದು. ಅದರಂತೆ ಪಿರ್ಯಾದುದಾರರು ಒಟ್ಟು 47,50,000 ರೂ. ಹಣವನ್ನು ಕೊಟ್ಟಿದ್ದು ಹಣವನ್ನು ಕೇಳಿದರೆ ಸಂಸ್ಥೆಯಿಂದ ಹಣ ಬರಲು ವಿಳಂಬವಾಗಿದೆ ಬಂದ ಮೇಲೆ ಕೊಡುತ್ತೇವೆಂದು ಸಬೂಬು ಹೇಳುತ್ತಾರೆ. ಇದೇ ರೀತಿ ಇವರೊಂದಿಗೆ ಪದ್ಮರೇಖಾ. ಧರ್ಮೇಂದ್ರ ಜೈನ್. ಆದಿತ್ಯ. ಪ್ರತೀಕ್. ಅನಂತ್‌ಕುಮಾರ್.ಎಸ್. ಅನಂತು (ಆಡಿಟರ್). ಹೆಗಡೆ. ಭಟ್ ರವರುಗಳು ಸೇರಿ ವಿವಿಧ ರೀತಿಯಲ್ಲಿ ಜನರಿಗೆ ಮೋಸ ಮಾಡಿರುತ್ತಾರೆ. ಪಿರ್ಯಾದಿಯವರಂತೆ ಎಷ್ಟೋ ಜನರನ್ನು ನಂಬಿಸಿ ಮೋಸ ಮಾಡಿರುತ್ತಾರೆ. ಆದ್ದರಿಂದ ಸದರಿಯವರುಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು. ಇತ್ಯಾದಿ</td></tr>
<tr><td>4</td><td>ಸುಬ್ರಮ ಣ್ಯನಗರ</td><td>26/2021 ಕಲಂ 420 506 ಐ.ಪಿ.ಸಿ</td><td>ರಮೇಶ್ ಒಡೆಯಾರ್ ಬಿನ್ ಸೋಮಲಿಂಗ ಒಡೆಯಾರ್ 28 ವರ್ಷ ವಾಸ ನಂ-4150. 3 ನೇ ಮುಖ್ಯರಸ್ತೆ ಸುಬ್ರಮಣ್ಯನಗರ, ಬೆಂಗಳೂರು-21 ಮೊ.ನಂ.9036614440</td><td>ಎ1) ದಿಲೀಪ್ ಅದಿವೆಪ್ಪ ಗಸ್ತಿ. 38 ವರ್ಷ, ಮಲ್ಲಮ್ಮ ನಗರ ಮುಧೋಳ. ಬಾಗಲಕೋಟೆ ಜಿಲ್ಲೆ.</td><td>-</td><td>ಸದರಿ ಪ್ರಕರಣದಲ್ಲಿ ಬಿ ಅಂತಿಮ ವರದಿಯನ್ನು ದಿನಾಂಕ18/08/2021 ರಂದು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ</td></tr>
</table>

<table>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ನಾನು ಹಾಗು ನನ್ನ ಅಣ್ಣನಾದ ಮಧು ಒಡೆಯಾರ್ ಇಬ್ಬರು ಸರ್ಕಾರಿ ಕೆಲಸಕ್ಕಾಗಿ ನೋಡುತ್ತಿರುವಾಗ ಬಾಗಲಕೋಟೆ ಜಿಲ್ಲೆ, ಮುಧೋಳ ಟೌನ್ ಮಲ್ಲಮ್ಮನಗರ ವಾಸಿಯಾದ ದಿಲೀಪ್ ಅದಿವೆಪ್ಪ ಗಸ್ತಿ ಈತನು 2017 ನೇ ಇಸವಿಯ ಪೆಬ್ರವರಿ ತಿಂಗಳನಲ್ಲಿ ವಿಜಯಪುರದಲ್ಲಿ ನನಗೆ ಪರಿಚಯವಾಗಿದ್ದು ಈತನು ನನಗೆ ರಾಜಕೀಯ ವ್ಯಕ್ತಿಗಳು ಗೊತ್ತು ಎಂದು ಹಲವು ಗಣ್ಯ ರಾಜಕೀಯ ವ್ಯಕ್ತಿಗಳ ಜೊತೆ ಇರುವ ಫೋಟೋ ತೋರಿಸಿ ನಿಮಗೆ ರೈಲ್ವೆ ಇಲಾಖೆಯಲ್ಲಿ ಸ್ಟೇಷನ್ ಮಾಸ್ಟರ್, ಟಿಕೇಟ್ ಕಲೆಕ್ಟರ್, ಎಲೆಕ್ಟ್ರಿಷಿಯನ್, ಗ್ರೂಪ್ ಸಿ, ಗ್ರೂಪ್ ಡಿ, ಈ ನೌಕರಿಯ ಕೆಲಸ ಕೊಡಿಸುವುದಾಗಿ ಹೇಳಿ ನಂಬಿಸಿದನು ನಿಮಗೆ ಯಾವುದೇ ಪರೀಕ್ಷೆ ಇಲ್ಲದೆ ನೇರವಾಗಿ ಕೆಲಸ ಕೊಡಿಸುತ್ತೇನೆಂದು ಅದಕ್ಕಾಗಿ ಕೆಲವು ವ್ಯಕ್ತಿಗಳಿಗೆ ಹಣ ಕೊಡಬೇಕು ಎಂದು ಹೇಳಿ 2017 ನೇ ಇಸವಿ ಜೂನ್ ತಿಂಗಳನಲ್ಲಿ ಸುಬ್ರಮಣ್ಯನಗರದ ನಾನು ಬಾಡಿಗೆಗೆ ವಾಸವಿದ್ದ ಮನೆಯ ಬಳಿ ಬಂದು ನನ್ನಿಂದ 10,00,000/-ರೂ ನಗದು ಹಣ ಹಾಗು ನನ್ನ ಅಣ್ಣನಾದ ಮಧು ಒಡೆಯಾರ್ ಈತನಿಂದ 15,00,000/-ರೂ ನಗದು ಹಣವನ್ನು ಬೇರೆ ಬೇರೆ ದಿನಾಂಕಗಳಂದು ದಿಲೀಪ್ ಅದಿವೆಪ್ಪ ಗಸ್ತಿ ಈತನು ಪಡೆದುಕೊಂಡಿದ್ದು ಗ್ಯಾರಂಟಿಯಾಗಿ ಅತನ ಬ್ಯಾಂಕ್ ಖಾತೆ ಸಂ. 30912096089 ಇರುವ ಎಸ್.ಬಿ.ಐ ಬ್ಯಾಂಕ್ ಚೆಕ್ ನಂಬರ್ 354845, 354863, 354864 ಗಳಲ್ಲಿ ಅತನ ಸಹಿ ಮಾಡಿ ಕೊಟ್ಟಿರುತ್ತಾನೆ, ನಾನು ಹಾಗು ನನ್ನ ಅಣ್ಣ ಇಬ್ಬರು ಸಾಲ ಸೋಲ ಮಾಡಿ ಕೆಲಸ ಸಿಗುತ್ತದೆಂದು ಆಸೆಯಿಂದ ದಿಲೀಪ್ ಅದಿವೆಪ್ಪ ಗಸ್ತಿಗೆ ಹಣ ನೀಡಿದ್ದು ನಮಗೆ ಕೆಲಸವನ್ನು ಕೊಡಿಸದೆ, ಹಣವನ್ನು ವಾಪಸ್ ಕೊಡದೆ ಮೋಸ ಮಾಡಿ ಪ್ರಾಣ ಬೆದರಿಕೆ ಹಾಕುತ್ತಿರುವ ದಿಲೀಪ್ ಅದಿವೆಪ್ಪ ಗಸ್ತಿ ಈತನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ನಾವು ಅತನಿಗೆ ಕೊಟ್ಟಿರುವ ಹಣವನ್ನು ವಾಪಸ್ ಕೊಡಿಸಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ</td></tr>
<tr><td>5</td><td>ನಂದಿನಿ ಲೇಔಟ್ ಪಿಎಸ್</td><td>300/2021 ಕಲಂ 420,467,468,471ರೆಡ್ ವಿತ್ 34 ಐ.ಪಿ.ಸಿ.</td><td>ಸೋಮಲಿಂಗಪ್ಪ ಬಿನ್ ಹರಿಶ್ಚಂದ್ರ, 58 ವರ್ಷ, ನಂ-58/12, ಪಿಟಬ್ಲ್ಯೂಕ್ವಾಟ್ರಸ್, ನಂದಿನಿಲೇಔಟ್-96</td><td>1. ಬಿಂದು
2. ಅಲ್ಲಭಕ್ಷ</td><td>ಇಲ್ಲ</td><td>ಪ್ರಕರಣವು ಹಾಲಿ ತನಿಖಾ ಹಂತದಲ್ಲಿಇರುತ್ತದೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ನನ್ನ ಮಕ್ಕಳಾದ ಸುಮನ್‌ಪಾಟೀಲ್ ಸಹಾಯಕಇಂಜಿನಿಯರ್ ಆಗಿ ಹಾಗೂ ಸೂರಜ್ ಪಾಟಿಲ್‌ರಾಜಾಜಿ ನಗರದಲ್ಲಿ ಕೆಲಸಮಾಡಿಕೊಂಡಿರುತ್ತಾರೆ. ನಾನು ಕೆಲಸ ಮಾಡುವ ಮುಖ್ಯಮಂತ್ರಿರವರಕಛೇರಿಯಲ್ಲಿ 2015ನೇ ಸಾಲಿನಲ್ಲಿ ಶ್ರೀಮತಿ ಕೋಂ ಅನೀಲ್‌ಕುಮಾರ್‌ಎಂಬುವರ ಕಿರಿಯ ಸಹಾಯಕಿಯಾಗಿ ಕೆಲಸ ಮಾಡಿಕೊಂಡಿದ್ದು ನನಗೆ ಇವರ ಪರಿಚಯದಿರುತ್ತದೆ. ಈಗಿರುವಾಗ್ಗೆ ಬಿಂದುರವರು ನನ್ನ 2ನೇ ಮಗ ಸುರಜ್ ಪಾಟೀಲ್ ಗೆ ಸರಕಾರಿ ಕೆಲಸ ಕೊಡಿಸುತ್ತೇನೆಂದು ಹೇಳಿ, ನನಗೆ ಅಲ್ಲಾಭಕ್ಷಎಂಬಾತ ಪರಿಚಯದಿದ್ದಾನೆ, ಅತನ ಮಾವನ ಹಕ್ಕುಗಳ ಆಯೋಗದಲ್ಲಿ ಗುತ್ತಿಗೆ ಆಧಾರದ ಮೇರೆಗೆ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದಾನೆ. ಆತನಿಗೆ ನೀವು 15 ಲಕ್ಷರೂ ಹಣವನ್ನು ಕೊಟ್ಟರೆ, ನಿಮ್ಮ ಮಗನಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣಇಲಾಖೆಯ್ಯಲಿ ಕಿರಿಯ ಸಹಾಯಕ ಕೆಲಸವನ್ನು ಕೊಡಿಸುತ್ತಾನೆಂದು ತಿಳಿಸಿದ್ದು. ನಂತರ ನಾನು ಬಿಂದುರವರನ್ನು ಭೇಟಿ ಮಾಡಿ ಕೇಳಿದಕ್ಕೆ ಅವರು ನಿಮಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದಿ ಪೋನ್ ಬಂದಿರುತ್ತದೆಎಂದು ಹೇಳಿ ಉಳಿದ ಹಣವನ್ನುಅಲ್ಲಾಭಕ್ಷರವರಿಗೆ ಕೊಡಿ ಎಂದು ಹೇಳಿ. ನನ್ನ ಮಗನಿಗೆ ಸರಕಾರಿ ಕೆಲಸ ಕೊಡಿಸುತ್ತೇನೆಂದು ಹೇಳಿ ನನಿಂದ 15,00,000/- ರೂ ಹಣವನ್ನುಆರ್.ಟಿ.ಜಿ.ಎಸ್ ಮುಖಾಂತರ ಹಾಗೂ ನಗದಾಗಿ ಪಡೆದುಕೊಂಡು ಕೆಲಸ ಕೊಡಿಸದೆ ಉಳಿದ 10,00,000/- ರೂ ಹಣವನ್ನು ಸಹ ವಾಪಸ್‌ಕೊಡದೆ ಮೋಸ ಮಾಡಿರುವ ಶ್ರೀಮತಿ ಬಿಂದು ಹಾಗೂ ಅಲ್ಲಾಭಕ್ಷ ರವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮಜರುಗಿಸಬೇಕೆಂದುಕೊಟ್ಟದೂರುಇತ್ಯಾದಿ.</td></tr>
<tr><td>6</td><td>ಆರ್‌ಎಂಸಿ ಯಾರ್ಡ್</td><td>ಮೊ.ಸಂ 197/2021 ಕಲಂ 406,420,465,467,468,471 ರೆ/ವಿ 34 ಐಪಿಸಿ</td><td>ಶ್ರೀ.ವಿಜಯ್ ಕುಮಾರ್ ಪಿ.ಯು ಬಿನ್ ಉತ್ತಪ್ಪ, 34 ವರ್ಷ, ನಂ-7, ಮುನಿಚಪ್ಪ ಬಿಲ್ಡಿಂಗ್, ನಂ-45, ನ್ಯೂ ಬೈಯಪ್ಪನಹಳ್ಳಿ, ಇಂದಿರಾನಗರ, ಬೆಂಗಳೂರು ನಗರ.</td><td>ಎ-1 ಪ್ರದೀಪ್
ಎ-2 ಶ್ವೇತಾ ಹಾಗೂ ಇತರರು</td><td>ಇಲ್ಲ</td><td>ತನಿಖೆಯಲ್ಲಿದೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಈ ಕೇಸಿನ ಸಾರಾಂಶವೇನೆಂದರೆ ಗೊರಗುಂಟೆಪಾಳ್ಯ ಇ.ಎಸ್.ಸಿ.ಐ. ಆಸ್ಪತ್ರೆಯಲ್ಲಿ ಓ.ಟಿ. ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿರುವ ಪ್ರದೀಪ್.ಸಿ. ಎಂಬಾತನು ಇ.ಎಸ್.ಐ.ಸಿ. ಆಸ್ಪತ್ರೆಯ ಡೈರೆಕ್ಟರ್ ಮುಖಾಂತರ ಇ.ಎಸ್.ಐ.ಸಿ. ಆಸ್ಪತ್ರೆಯಲ್ಲಿ ಖಾಲಿ ಇರುವ ಸ್ಟಾಫ್ ನರ್ಸ್, ಯು.ಡಿ.ಸಿ.(ಅಪ್ಪರ್ ಡಿವಿಷನ್ ಕ್ಲರ್ಕ್), ಸ್ಟೆನೋಗ್ರಾಫರ್ ಹುದ್ದೆಗಳ ಅಭ್ಯರ್ಥಿಗಳಿಗೆ ಕೆಲಸವನ್ನು ಕೊಡಿಸುವುದಾಗಿ ನಂಬಿಸಿ ನನ್ನ ಮತ್ತು ನನ್ನ ಹೆಂಡತಿ ಶ್ರೀಮತಿ ಕಲಾ ರವರಿಂದ 10 ಲಕ್ಷ ರೂಗಳನ್ನು ಪಡೆದುಕೊಂಡು ಹಾಗೂ ನನ್ನ ಸ್ನೇಹಿತರಾದ ವಿನೇಶ್, ನಾಗೇಶ್‌ಗೌಡ, ಸಾಗರ್ ಮಾಚಯ್ಯ, ಲತೇಶ್ ಹಾಗೂ ಇತರೆ ಸುಮಾರು 25 ಜನರಿಗೆ ಇದೇ ರೀತಿ 5 ರಿಂದ</td></tr>
</table>

<table>
<tr><td colspan="7">10 ಲಕ್ಷ ರೂಗಳ ವರೆಗೆ ಹಣವನ್ನು ವಸೂಲಿ ಮಾಡಿಕೊಂಡು ಅವರಿಗೂ ಸಹ ನಕಲಿ ನೇಮಕಾತಿ ಆದೇಶದ ಪತ್ರಗಳನ್ನು ಕೊಟ್ಟು ಕೆಲಸ ಕೊಡಿಸದೆ ನಮ್ಮಿಂದ ಪಡೆದುಕೊಂಡ ಹಣವನ್ನು ವಾಪಸ್ಸು ಕೊಡದೆ ನಂಬಿಕೆ ದ್ರೋಹ ಎಸಗಿ, ಮೋಸ ಮಾಡಿದ ಪ್ರದೀಪ್.ಸಿ. ಓ.ಟಿ.ಟೆಕ್ನಿಷಿಯನ್ ಇ.ಎಸ್.ಐ.ಸಿ. ಆಸ್ಪತ್ರೆ, ಬೆಂಗಳೂರು ಮತ್ತು ಆತನ ಹೆಂಡತಿ ಶ್ರೀಮತಿ. ಶ್ವೇತಾ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೊಟ್ಟ ದೂರು.</td></tr>
<tr><td>7</td><td>ಸೋಲದೆ ೀವನಹಳ್ಳಿ</td><td>290/2021
ಕಲಂ-120(ಬಿ).
384.406.417.41
8.419,420,426,
506 ಐಪಿಸಿ.</td><td>ಕೆ.ನಾಗರಾಜು ಬಿನ್ ಲೇಟ್ಕುರ್ಲಪ್ಪ. 56 ವರ್ಷ, ನಂ.149. 2ನೇ ಕ್ರಾಸ್, ಮತ್ತೂರು ಗ್ರಾಮ. ಹೆಸರಘಟ್ಟ ಹೋಬಳಿ, ಬೆಂ.</td><td>1)ಪಲ್ಲವಿ.ಹೆಚ್.ಜಿತಂದೆ ಲೇಟ್ ಗಂಗಾ ಹುಚ್ಚಯ್ಯ. 30 ವರ್ಷ,
2)ಇದ್ರಾಣಿ , 45 ವರ್ಷ,
ಇಬ್ಬರ ವಿಳಾಸ-ನಂ-34 ಬಿ.
ಕೊಕನಟ್ಗಾರ್ಡನ್.
ಸೋಲದೇವನಹಳ್ಳಿ,
ಬೆಂಗಳೂರು ನಗರ-107.</td><td>---</td><td>ತನಿಖೆಯಲ್ಲಿರುತ್ತದೆ</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಈ ದೂರಿನ ಸಾರಾಂಶವೇನೆಂದರೆ ಸೋಲದೇವನಹಳ್ಳಿ ಪೊಲೀಸ್ಠಾಣೆಯ ನ್ಯಾಯಾಲಯದ ಸಿಬ್ಬಂದಿ ಪಿಸಿ-12223 ರವರು ಮಾನ್ಯ ಸಿ.ಜೆ.ಎಂ ನ್ಯಾಯಾಲಯದಿಂದಠಾಣೆಗೆತಂದು ಹಾಜರುಪಡಿಸಿದ ಪಿ.ಸಿ.ಆರ್ ನಂ.611/2021 ಅನ್ನು ಪಡೆದು ಪರಿಶೀಲಿಸಿ ನೋಡಿದದೂರೆನೆಂದರೆಆರೋಪಿ ಎ1 ರವರು ವಾಡಿಕೆಯ ಹೆಬಿಚ್ಯುಯಲ್ಆರೋಪಿ ಎಂದುಅಮಾಯಕರ ವಿರುದ್ಧ ಸುಳ್ಳು ದೂರುದಾಖಲಿಸುವುದು ಹಾಗೂ ಅಮಾಯಕರನ್ನು ಸಂಪರ್ಕಿಸಿ ತಾನು ಮಾಜಿ ಸಚಿವರ ಸಂಬಂಧಿಎಂದು ಪರಿಚಯಿಸಿಕೊಂಡು ಮಾಜಿಉಪಮುಖ್ಯಮಂತ್ರಿ ಜಿ.ಪರಮೇಶ್ವರ್ರವರುತಮ್ಮತಂದೆಯ ಸಂಬಂಧಿ. ಎಂದು ಹೇಳಿಕೊಂಡು ಸರ್ಕಾರದ ಇಲಾಖೆಗಳ ಅಡಿಯಲ್ಲಿ ಬಹಳಷ್ಟು ಉದ್ಯೋಗಗಳು ಇವೆ ಎಂದು ಹೇಳಿ ಸರ್ಕಾರಿ ಕೆಲಸ ಮತ್ತು ಸರ್ಕಾರದ ವತಿಯಿಂದ ಸಾಲ ಕೊಡಿಸುವುದಾಗಿ ಅಮಾಯಕರಿಗೆ ಆಮಿಷವೊಡ್ಡಿ ಮೋಸಗೊಳಿಸುವ ಚಾಳಿಯನ್ನು ಹೊಂದಿರುತ್ತಾರೆ. ದೂರುದಾರರ ಮನೆಯಲ್ಲಿ ಉಳಿದು 04 ಲಕ್ಷರೂ ಪಡೆದು ವಾಪಸ್ ಕೇಳಿದರೆ ಸುಳ್ಳು ದೂರು ದಾಖಲಿಸಿರುತ್ತಾರೆ. ತನಗೆ ಮತ್ತುಆರೋಪಿ ಎ1 ಗೆ ಪಾವತಿಸಲು 25 ಲಕ್ಷರೂ ಆರೋಪಿ ಎ2 ರೊಂದಿಗೆ ಸೇರಿಕೊಂಡು ರಘುನಾಥ್, ಲಾವಣ್ಯ, ಪ್ರತಾಪ್, ನಟೇಶ್ ಮತ್ತು ಇತರರು ಆರೋಪಿ ಎ1 ಗೆ ಲೈಂಗಿಕ ಕಿರುಕುಳ ಪ್ರಕರಣಗಳನ್ನು ದಾಖಲಿಸಲು ಪ್ರೇರೇಪಿಸಿರುತ್ತಾರೆ. ಮತ್ತು ದೂರುದಾರರಿಗೆ ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ಮೇಲ್ಕಂಡ ಆರೋಪಿಯು ಯಾವುದೋ ಕಾರ್ಯಕ್ರಮಕ್ಕೆ ಹೋಗುವ ನೆಪದಲ್ಲಿ ಫಿರ್ಯಾದಿಯ ಪತ್ನಿಯಿಂದ ಚಿನ್ನದ ಉಂಗುರ ಮತ್ತು ಕಿವಿಯೋಲೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿಯು ಸಮಾಜದ ಗೌರವಸ್ಥಿತ ವ್ಯಕ್ತಿಗಳ ಹೆಸರನ್ನು ದುರುಪಯೋಗಪಡಿಸಿಕೊಂಡು ಹಲವಾರು ಅಪರಾಧಗಳನ್ನು ಎಸಗಿ, ಹಲವರಿಗೆ ವಂಚಿಸಿದ್ದಾರೆ. ಆದ್ದರಿಂದ ಮೇಲ್ಕಂಡ ಆರೋಪಿಗಳ ವಿರುದ್ಧ ಮಾನ್ಯ ಸಿ.ಜೆ.ಎಂ ನ್ಯಾಯಾಲಯದಿಂದ ಬಂದಆದೇಶದ ಪಿ.ಸಿ.ಆರ್ ನಂ.611/2021 ರಂತೆ ಕಾನೂನು ಕ್ರಮಕ್ಕಾಗಿಕೊಟ್ಟದೂರುಇತ್ಯಾದಿ.</td></tr>
<tr><td>8</td><td>ಉಪ್ಪಾರಪೇ ಟೆ</td><td>11/2021 ಕಲಂ
406, 420 ಐಪಿಸಿ.
ದಿನಾಂಕ:19/01/21</td><td>ಶ್ರೀ ಅಣ್ಣಯ್ಯ ಬಿ.ಎಂ ಬಿನ್ ಮೂಡಲಪ್ಪ, 66 ವರ್ಷ. ವಾಸ ನಂ.1, ಮಾತೃಶ್ರೀ ನಿಲಯ. ಎಂ.ಎಂ ಲೇಔಟ್, ಸುಭಾಷ್ನಗರ, ಮಣಿಪಾಲ ಕೌಂಟಿ, ಹೊಸೂರುರಸ್ತೆ. ಬೆಂಗಳೂರು.</td><td>ಮಹೇಶ್ಎಸ್.ಕೆ ಬಿನ್ ಕೃಷ್ಣೋಜಿರಾವ್, 46 ವರ್ಷ, ವಾಸ ನಂ.62/ಬಿ. 3ನೇ ಮೇನ್, ಯಾದವಗಿರಿ. ಮೈಸೂರುಟೌನ್.</td><td>ಇಲ್ಲಾ</td><td>ಸಿಸಿ ನಂ.13518/2021ರಲ್ಲಿ ವಿಚಾರಣೆ.</td></tr>
<tr><td colspan="7">ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):-
ಆರೋಪಿಯು ಪಿರ್ಯಾದುದಾರರ ಮಕ್ಕಳಿಗೆ ರೈಲ್ವೆಇಲಾಖೆಯ ಟಿ.ಸಿ ಹುದ್ದೆಕೊಡಿಸುವುದಾಗಿ70,00,000/-ರೂಗಳನ್ನು ಪಡೆದು ಕೆಲಸವನ್ನು ಕೊಡಿಸದೆ ಅಥವಾ ಹಣವನ್ನು ವಾಪಸ್ಕೊಡದೇ ಮೋಸ ಮಾಡಿರುತ್ತಾನೆ.</td></tr>
<tr><td>9</td><td>ಉಪ್ಪಾರಪೆ ೀಟೆ</td><td>36/2021 ಕಲಂ
465, 468, 471,
420 ರೆ/ವಿ 34
ಐಪಿಸಿ.
ದಿನಾಂಕ:15/02/21</td><td>ಶ್ರೀ ರವಿಪ್ರಕಾಶ್ ಭಂಟವಾರಕರ್ ಬಿನ್ ಪ್ರಕಾಶ್.ಬಿ. 28 ವರ್ಷ. ವಾಸ ಯಲಗೂರುಗ್ರಾಮ. ನಿಡಗುಂದಿ ತಾ॥</td><td>ಕೆ.ಪಿ ಬ್ರಿಜೇಶ್ ಬಿನ್ ಪುಷ್ಪಾಂಗದ, 46 ವರ್ಷ, ನಂ.286, ಬಿಇಎಂಎಲ್ ಲೇಔಟ್, ಬಸವೇಶ್ವರನಗರ. ಬೆಂಗಳೂರು.</td><td>ಇಲ್ಲಾ</td><td>ಸಿಸಿ ನಂ.13333/2021 ವಿಚಾರಣೆ</td></tr>
</table>

			ವಿಜಯಪುರಜಿಲ್ಲೆ.			
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯು ಫಿರ್ಯಾದುದಾರರ ಮಗನಿಗೆ ಪಿ.ಎಸ್.ಐ ಹುದ್ದೆ ಕೊಡಿಸುವುದಾಗಿ10,45,000/-ರೂಗಳನ್ನು ಪಡೆದು ಕೆಲಸವನ್ನು ಕೊಡಿಸದೆ ಅಥವಾ ಹಣವನ್ನು ವಾಪಸ್ ಕೊಡದೇ ಮೋಸ ಮಾಡಿರುತ್ತಾನೆ.						
10	ಉಪ್ಪಾರಪೇಟೆ	196/2021 ಕಲಂ 406, 419, 420 ಐಪಿಸಿ. ದಿ:28/11/21	ಶ್ರೀ ರಾಘವೇಂದ್ರ ಕುಮಾರ್ ಬಿನ್ ಗಂಗರುದ್ರಯ್ಯ, 46 ವರ್ಷ, ವಾಸ ನಂ.43, 3ನೇ ಕ್ರಾಸ್, ಉಲ್ಲಾಳ ಮುಖ್ಯರಸ್ತೆ, ಬ್ಯಾಡರಹಳ್ಳಿ,ಬೆಂ.	ಅನಿಲ್‌ನರಸಿಂಹ ರಾವ್ ಕುಲಕರ್ಣಿ@ಅನಿಲ್‌ಕುಮಾರ್ ಕುಲಕರ್ಣಿ ಬಿನ್ ಲೇಟ್ ನರಸಿಂಹರಾವ್ ಕುಲಕರ್ಣಿ, 56ವರ್ಷ, ನಂ.85/86,7ನೇ ಕ್ರಾಸ್,ಕೆ.ಎಸ್‌ಆರ್‌ಟಿಸಿಲೇಔಟ್ . ಮಹದೇಶ್ವರನಗರ, ಬೆಂ.	ಇಲ್ಲಾ	ದೋಷಾರೋಪಣಾ ಪಟ್ಟಿಸಲ್ಲಿಸಬೇಕಾಗಿರುತ್ತದೆ .
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ಆರೋಪಿಯು ಫಿರ್ಯಾದುದಾರರ ಮಕ್ಕಳಿಗೆ ಪೋಲೀಸ್‌ಕಾನ್ಸ್‌ಟೇಬಲ್ ಕೆಲಸ ಕೊಡಿಸುವುದಾಗಿ1,20,000/-ರೂಗಳನ್ನು ಪಡೆದು ಕೆಲಸವನ್ನು ಕೊಡಿಸದೆ ಅಥವಾ ಹಣವನ್ನು ವಾಪಸ್‌ಕೊಡದೇ ಮೋಸ ಮಾಡಿರುತ್ತಾನೆ.						
11	ಚಂದ್ರಾಲೇಔಟ್	15/2021 ಕಲಂ. 420 ಸಹಿತ 35 ಐಪಿಸಿ	ಪ್ರಮೀಳಾ ಹೆಚ್.ಎನ್ ಕೋಂ ಆರ್ ರಂಗಸ್ವಾಮಿ. #07. 4ನೇ ಮುಖ್ಯರಸ್ತೆ. ಮಾರುತಿ ನಗರ. ನಾಗರಭಾವಿ. ಬೆಂಗಳೂರು ನಗರ	ಎ1 ರಾಘವೇಂದ್ರ.ಎ.ಬಿ ಬಿನ್ ಬೋರೇಗೌಡ. ಅಗಳೆ ಗ್ರಾಮ. ಸಂತೆಬರಹಳ್ಳಿ ಹೋಬಳಿ. ಕೆ.ಆರ್ ಪೇಟೆ. ಮಂಡ್ಯ ಜಿಲ್ಲೆ ಎ2 ಶ್ರೀಮತಿ ಮನು ಕೋಂ ರಾಘವೇಂದ್ರ ಎ.ಬಿ. ಅಗಳೆ ಗ್ರಾಮ. ಸಂತೆಬರಹಳ್ಳಿ ಹೋಬಳಿ. ಕೆ.ಆರ್ ಪೇಟೆ. ಮಂಡ್ಯ ಜಿಲ್ಲೆ ಎ3 ಹರೀಶ್. ಎ4 ನವೀನ್	-	8ನೇ ಎಸಿಎಂಎಂ ನ್ಯಾಯಾಲಯ - ವಿಚಾರಣಾ ಹಂತ
ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು):- ವಿಧಾನಸೌಧದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಪರಿಚಯವಿರುತ್ತಾರೆ ಎಂದು ಫಿರ್ಯಾದುದಾರಿಗೆ ನಂಬಿಸಿ ಕರ್ನಾಟಕ ರಾಜ್ಯ ಪತ್ರ ತೋರಿಸಿ ನಿಮ್ಮ ಮಗ ರಜತ್ ಗೆ ಸರ್ಕಾರಿ ಕೆಲಸ ಕೆಲಸ ಕೊಡಿಸುವುದಾಗಿ ತಿಳಿಸಿ 10.20.000 ರೂ ಪಡೆದು ಕೆಲಸ ಕೊಡಿಸದೇ. ಹಣ ವಾಪಾಸ್ಸು ನೀಡದೇ ವಂಚಿಸಿರುವ ಬಗ್ಗೆ ದೂರು						
12	ಬ್ಯಾಟರಾಯನಪುರ	ಮೊ.ಸಂ.341/2021 ಕಲಂ 420 506 ಸಹಿತ 34 ಐಪಿಸಿ.	ಶ್ರೀ ಶಿವಕುಮಾರ ಬಿನ್ ಶರಣಪ್ಪ 55 ವರ್ಷ	ಎ-1 ಕೃಷ್ಣಪ್ಪ ಎ-01 ಈಶನುಲ್ಲಾ ಖಾನ	-	ಬಿ ಅಂತಿಮ ವರದಿ ದಿ:18/11/2019
4.	ಕದ್ರಾ ಪೊಲೀಸ್ ಠಾಣೆ	ಗುನ್ನಾ ನಂ 13/2019 ಕಲಂ-406, 409,420 ಸಹಿತ 34 ಐ.ಪಿ.ಸಿ	ದಿನಾಂಕ 14-07-2019 ರಂದು 13-45 ಗಂಟೆಗೆ	ಶ್ರೀಮತಿ ನಿರ್ಮಲಾ ಕೋಂ ಕೃಷ್ಣಾ ಪ್ರಾಯ 42 ವರ್ಷ , ಅಂಗನವಾಡಿ ಕರ್ಯಕರ್ತೆ,ಸಾ॥ ರಾಜೀವನಗರ	1) ಮಂಜು ತಂದೆ ಮಾದೇವ ಉದ್ಯೋಗ ಕೆ.ಪಿ.ಸಿ. ನೌಕರ ಸಾ॥ ಕೆ.ಪಿ.ಸಿ. ಕಾಲೋನಿ ಕದ್ರಾ 2) ಅಬ್ಬಾಸ ಖಾದರ ಉದ್ಯೋಗ ಚಾಲಕ ಸಾ॥ ಕೆ.ಪಿ.ಸಿ. ಲೇಬರ ಕಾಲೋನಿ.	ನಮೂದಾದ ಆರೋಪಿ ನಂ 1 ನೇಯವನು ಕೆ.ಪಿ.ಸಿ. ನೌಕರನಾಗಿದ್ದು, ಆರೋಪಿ 2 ನೇಯವನೊಂದಿಗೆ ಸೇರಿ ಫಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ದಿನಾಂಕ 15-01-2018 ರಂದು 16-00 ಗಂಟೆಗೆ ಫಿರ್ಯಾದಿಯ ಮನೆಯ ಹತ್ತಿರ ಬಂದು ಫಿರ್ಯಾದಿಗೆ ಉದ್ದೇಶಿಸಿ ನಿನ್ನ ಮಗನಿಗೆ ಕೆ.ಪಿ.ಸಿ.ಯಲ್ಲಿ ನೌಕರಿ ಕೊಡಿಸುತ್ತೇವೆ ಅಂತಾ ಹೇಳಿ ಫಿರ್ಯಾದಿಯಿಂದ ಹಂತ ಹಂತವಾಗಿ ಬ್ಯಾಂಕ ಖಾತೆಯ ಮೂಖಾಂತರ ಒಟ್ಟು 2,00,000/- ರೂಪಾಯಿ ಹಣವನ್ನು ಆರೋಪಿ ನಂ 1 ನೇಯವನು ತನ್ನ ಬ್ಯಾಂಕ ಖಾತೆಗೆ ಹಾಕಿಸಿಕೊಂಡು ಇಲ್ಲಿಯ ವರೆಗೆ ಫಿರ್ಯಾದಿಯ ಮಗನಿಗೆ ನೌಕರಿ ಕೊಡಿಸದೇ ಮತ್ತು ಫಿರ್ಯಾದಿಯಿಂದ ಪಡೆದ ಹಣ ಸಹ ಮರಳಿ ಕೊಡದೇ ಫಿರ್ಯಾದಿಗೆ ಮೋಸ ವಂಚನೆ ಮಾಡಿರುತ್ತಾರೆ ಅಂತಾ ವಗೈರೆ ಫಿರ್ಯಾದದ ವಿವರ.	ವಂಚನೆಗೊಳಗಾದವರಿಗೆ ಹಣ ಹಿಂದುರುಗಿಸಲಾಗಿದೆ.	"ಬಿ" ಅಂತಿಮ ವರದಿ ಸಲ್ಲಿಸಿದೆ.

5.	ಕಾರವಾರ ಶಹರ ಪೊಲೀಸ್ ಠಾಣೆ.	ಎಮ್.ಸಿ.ಆರ್ -ಆ 27/2019 ಕಲಂ: 406, 417, 420 ಐಪಿಸಿ	28-03-2019	ಶ್ರೀಮತಿ ಆಶಾ ಕೋಂ ಶೈಲೇಶ ಬಾಡಕರ ವಯಸ್ಸು: 55 ವರ್ಷ ವೃತ್ತಿ: ಗೃಹಿಣಿ ಸಾ: ವಾಟರ್ ಟ್ಯಾಂಕ್ ಹತ್ತಿರ, ಕೆ.ಎಚ್.ಬಿ ಕಾಲನಿ ಹಬ್ಬುವಾಡ, ಕಾರವಾರ	ಹೃಷಿಕೇಶ ತಂದೆ ದೀಪಕ ಜಾಧವ ವಯಸ್ಸು: 41 ವರ್ಷ ವೃತ್ತಿ ಜೂನಿಯರ್ ಟೆಕ್ನೀಷಿಯನ್ ಸಾ: ಮಹಾರಾಷ್ಟ್ರ ಇಲೆಕ್ಟ್ರಿಕ್ ಕಂಪನಿ ಕಂ.ಲಿ. ಇ.ಎಚ್.ಸಿ ಪ್ರಾಜೆಕ್ಟ್, ಸಬ್ ಡಿವಿಜನ್, ಬಾಪಟ್ ಕ್ಯಾಂಪ್, ಮಾರ್ಕೇಟ್ ಏರಿಯಾ, ಕೊಲ್ಲಾಪುರ, ಮಹಾರಾಷ್ಟ್ರ	ಮಾನ್ಯ ಸಿ.ಜೆ.ಎಮ್ ನ್ಯಾಯಾಲಯದ ಖಾಸಗಿ ದೂರು ಸಂಖ್ಯೆ : 02/2019 ನೇದು ತನಿಖೆ ಕೈಗೊಳ್ಳಲು ಮಾನ್ಯ ಸಿ.ಪಿ.ಐ ಕಾರವಾರ ರವರ ಮುಖಾಂತರ ಠಾಣೆಗೆ ಬಂದಿದ್ದು, ಅದರಲ್ಲಿ "ಆರೋಪಿತನು ಮಹಾರಾಷ್ಟ್ರ ಇಲೆಕ್ಟ್ರಿಕ್ ಕಂಪನಿ ಲಿಮಿಟೆಡ್, ಇ.ಎಚ್.ಸಿ ಪ್ರಾಜೆಕ್ಟ, ಸಬ್ ಡಿವಿಜನ್, ಬಾಪಟ್ ಕ್ಯಾಂಪ್, ಮಾರ್ಕೇಟ್ ಏರಿಯಾ, ಕೊಲ್ಲಾಪುರ, ಮಹಾರಾಷ್ಟ್ರದಲ್ಲಿ ಜೂನಿಯರ್ ಟೆಕ್ನೀಷಿಯನ್ ಅಂತಾ ಕೆಲಸ ನಿರ್ವಹಿಸುತ್ತಿದ್ದು, ಫಿರ್ಯಾದಿಯವರಿಗೆ ಕಳೆದ 2015 ನೇ ಸಾಲಿನ ಅಕ್ಟೋಬರ್ ತಿಂಗಳನಲ್ಲಿ ಪರಿಚಿತನಾಗಿ ತಾನು ಫಿರ್ಯಾದಿಯವರ ಮಗನಾದ ಅನುಜ ಬಾಡಕರ ಇವನಿಗೆ ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ದಿನಾಂಕ: 03-10-2015 ರಿಂದ ದಿನಾಂಕ: 28-07-2016 ರವರೆಗೆ ಫಿರ್ಯಾದಿಯವರಿಂದ ಸುಮಾರು 15,00,000 ರೂಪಾಯಿ ಹಣವನ್ನು ಪಡೆದು, ದಿನಾಂಕ: 04-01-2018 ರಂದು ಫಿರ್ಯಾದಿಯವರ ಮಗನಿಗೆ ಸುಳ್ಳು ನೌಕರಿ ಆದೇಶ ಪತ್ರವನ್ನು ನೀಡಿ, ಈವರೆಗೂ ಕೆಲಸ ಕೊಡಿಸದೇ, ಫಿರ್ಯಾದಿಯವರಿಂದ ಪಡೆದುಕೊಂಡ ಹಣವನ್ನು ಸಹ ಮರಳಿ ಫಿರ್ಯಾದಿಯವರಿಗೆ ಕೊಡದೇ ನಂಬಿಕೆ ದ್ರೋಹ ಮತ್ತು ಮೋಸ ವಂಚನೆಯನ್ನು ಮಾಡಿರುವ ಬಗ್ಗೆ ಇತ್ಯಾದಿ ನಮೂದು ಇರುವ ಫಿರ್ಯಾದು.	---	ಸದರ ಪ್ರಕರಣವು ಮಾನ್ಯ ನ್ಯಾಯಾಲಯದ ಸಿ.ಸಿ ನಂ: 618/2019 ನೇದರಲ್ಲಿ ವಿಚಾರಣೆಯಲ್ಲಿರುತ್ತದೆ.
					2020			
6.	ದಾಂಡೇಲಿ ನಗರ ಠಾಣೆ	ಗುನ್ನಾನಂ; 28/2020 ಕಲಂ;420 ಸಹಿತ 34 ಐ.ಪಿ.ಸಿ	ದಿನಾಂಕ;13-03-2020	ಶ್ರೀ ಬಲವಂತ ಹನುಮಂತ ಬೋಮ್ಮನಹಳ್ಳಿ ಸಾ॥ ಬಸವೇಶ್ವರನಗರ ಅಂಬೆವಾಡಿ ದಾಂಡೇಲಿ	1 ವಿಜಯ ಶಿವರಾಮ್ ನಾಯರ್ ಸಾ॥ ಟೌನಶೀಪ್ ದಾಂಡೇಲಿ 2) ಪ್ರಶಾಂತ ಜೋಶಿ ಬೆಂಗಳೂರು 3) ಪ್ರಬಾಕರ ಪಿ ಬೆಂಗಳೂರು	ನಮೂದಾದ ಆರೋಪಿತನು ಫಿರ್ಯಾದಿದಾರರಿಗೆ ಹಾಗೂ ಅವರ ಸ್ನೇಹಿತರಿಗೆ ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿದಾರರು ಹಾಗೂ ಅವರ ಸ್ನೇಹಿತರಿಗೆ ಆರೋಪಿ 01 ನೇಯವರು ತನಗೆ ಬೆಂಗಳೂರಿನಲ್ಲಿ ಸರಕಾರಿ ಇಲಾಖೆಯ ಉನ್ನತ ಅಧಿಕಾರಿಗಳ ಪರಿಚಯ ಇದೆ. ಅಂತಾ ತನನ್ನು ಪರಿಚರಿಸಿಕೊಂಡು ಫಿರ್ಯಾದಿದಾರುರು ಹಾಗೂ ಅವರ ಸ್ನೇಹಿತರ ಮಕ್ಕಳಿಗೆ ಸರಕಾರಿ ಇಲಾಖೆಯಲ್ಲಿ ನೌಕರಿಕೊಡಿಸುವುದಾಗಿ ನಂಬಿಸಿ ಫಿರ್ಯಾದಿದಾರರು ಹಾಗೂ ಅವರ ಸ್ನೇಹಿತರಿಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿ ಆರೋಪಿ ನಂ 02 ನೇಯವರು ಉನ್ನತ ಅಧಿಕಾರಿ ಅಂತಾ ಭೇಟಿ ಮಾಡಿಸಿ ನೌಕರಿಯನ್ನು ಕೊಡಿಸದೇ ಹಾಗೂ ಕೊಟ್ಟೇರುವ ಹಣವನ್ನು ವಾಪಸು ನೀಡದೇ ಮೋಸ ಮಾಡಿದ್ದು ಸದರಿಯವನ ಮೇಲೆ ಕಾನೂನಿನಂತೆ ಕ್ರಮ ಕೈಗೊಳ್ಳು ಬಗ್ಗೆ ಫಿರ್ಯಾದಿಯವರು ನೀಡಿದ ಸಾರಾಂಶ	ಹಿಂದಿರುಗಿಸಲಾಗಿರುವುದಿಲ್ಲಾ.	ಸದರಿ ಪ್ರಕರಣವು ಮಾನ್ಯ ಜೆ.ಎಂ.ಎಪ್.ಸಿ ನ್ಯಾಯಲಯ ದಾಂಡೇಲಿ ಸಿ.ಸಿ ನಂ;3192/2021 ನೇದರಲ್ಲಿ ವಿಚಾರಣೆಯಲ್ಲಿರುತ್ತದೆ.

2021 (ನವೆಂಬರ್ ವರೆಗೆ)							
7.)	ಅಂಕೋಲಾ	ಗುನ್ನಾ ನಂ: 142/2021 ಕಲಂ: 420. 504. 506 ಐ.ಪಿ.ಸಿ	ದಿನಾಂಕ: 25/09/2021 ರಂದು 22:30 ಗಂಟೆಗೆ	ಶ್ರೀ ಯುವರಾಜ ತಂದೆ ಮಂಜುನಾಥ ನಾಯ್ಕ, ವಯಸ್ಸು: 21 ವರ್ಷ, ಬಿ.ಕಾಂ. ಅಂತಿಮ ವರ್ಷದ ವ್ಯಾಸಾಂಗ, ವಾಸ॥ ಗಾಬಿತ್‌ಕೇಣಿ, ಕೋಮಾರಪಂಥ ವಾಡ, ಅಂಕೋಲಾ	ವಿಕ್ರಮ್ ವಿನಾಯಕ ನಾಯ್ಕ, ವಾಸ॥ ಕಂಚಿನಬಾಗಿಲು, ಅಗಸೂರು, ಅಂಕೋಲಾ.	ಫಿರ್ಯಾದಿಯವರು ನೀಡಿದ ದೂರಿನಲ್ಲಿ, "ನಮೂದಾದ ಆರೋಪಿತನು, ಫಿರ್ಯಾದಿಯವರಿಗೆ ಕಾರವಾರ ಐ.ಎನ್.ಹೆಚ್.ಎಸ್. ಪತಂಜಲಿಯಲ್ಲಿ ಸ್ಟೋರ್ ಮ್ಯಾನೇಜ್‌ಮೆಂಟ್ ಕೆಲಸ ಕೊಡಿಸುವುದಾಗಿ ಹೇಳಿ, ದಿನಾಂಕ: 02/09/2021 ರಂದು 14:38 ಗಂಟೆಗೆ ಮತ್ತು 17:30 ಗಂಟೆಗೆ ಫೋನ್‌ಪೇ ಮೂಲಕ ಆರೋಪಿತನು ಒಟ್ಟು 7.050/- ರೂ. ಗಳನ್ನು ಜಮಾ ಮಾಡಿಸಿಕೊಂಡು, ಯಾವುದೇ ಕೆಲಸ ಕೊಡಿಸದೇ, ಹಣವನ್ನು ಮರಳಿ ಕೇಳಿದ ಫಿರ್ಯಾದಿಯವರಿಗೆ ಆರೋಪಿತನು ಅವಾಚ್ಯವಾಗಿ ಬೈದು, ಜೀವ ಬೆದರಿಕೆ ಹಾಕಿ, ಹಣವನ್ನು ಮರಳಿಸದೇ ವಂಚಿಸಿರುತ್ತಾನೆ. ಎಂಬಿತ್ಯಾದಿ. ಫಿರ್ಯಾದಿಯವರು ಘಟನೆಯ ವಿಷಯವನ್ನು ತನ್ನ ಮನೆಯ ಜನರು ಹಾಗೂ ಹಿತೈಷಿಗಳಲ್ಲಿ ವಿಚಾರಿಸಿ ಠಾಣೆಗೆ ಬಂದು ದೂರು ನೀಡಲು ವಿಳಂಬವಾಗಿದ್ದು ಇರುತ್ತದೆ.	--	ತನಿಖೆಯಲ್ಲಿದೆ.

8.	ಕುಮಟಾ	161/2021 , ಕಲಂ: 420. 465. 466. 468. 471 ಐ.ಪಿ.ಸಿ	ದಿನಾಂಕ: 14-09-2021 ರಂದು 19-45 ಗಂಟೆಗೆ	ಶ್ರೀಮತಿ ನರ್ಮದಾ ಮಹೇಶ ಅಡಿ. ವಯಸ್ಸು: 32 ವರ್ಷ. ವೃತ್ತಿ: ಕಂಪ್ಯೂಟರ್ ಎಜ್ಯುಕೇಶನ್ ಸೆಂಟರ್. ವಿಳಾಸ;- ರಥಬೀದಿ. ಗೋಕರ್ಣ. ಕುಮಟಾ. ಮೊ. ನಂ; 9591465140.	1) ರಮಾಕಾಂತ @ ಸಂತೋಷ ತಂದೆ ನಾಗೇಶ ನಾಯ್ಕ. ವಿಳಾಸ: ಕಡೇಬಾಗ. ಕುಮಟಾ. ಹಾಲಿ ವಿಳಾಸ: ನಾಗರಬಾವಿ ಬೆಂಗಳೂರು. 2) ರಾಜಣ್ಣ ಎನ್. ತಂದೆ ಆರ್. ನಾರಾಯಣನ್ ವಿಳಾಸ: ಅವಲಳ್ಳಿ. ಬೆಂಗಳೂರು	ದಿನಾಂಕ: 14-09-2021 ರಂದು 19-45 ಗಂಟೆಗೆ ಶ್ರೀಮತಿ ನರ್ಮದಾ ಮಹೇಶ ಅಡಿ. ವಯಸ್ಸು: 32 ವರ್ಷ. ವೃತ್ತಿ: ಕಂಪ್ಯೂಟರ್ ಎಜ್ಯುಕೇಶನ್ ಸೆಂಟರ್. ವಿಳಾಸ:- ರಥಬೀದಿ. ಗೋಕರ್ಣ. ಕುಮಟಾ ತಾಲೂಕ ಇವರು ಠಾಣೆಯಲ್ಲಿ ಹಾಜರಾಗಿ, "ಆರೋಪಿತನಾದ ರಮಾಕಾಂತ @ ಸಂತೋಷ ತಂದೆ ನಾಗೇಶ ನಾಯ್ಕ, ವಿಳಾಸ: ಕಡೇಬಾಗ, ಕುಮಟಾ, ಹಾಲಿ ವಿಳಾಸ: ನಾಗರಬಾವಿ ಬೆಂಗಳೂರು ಈತನು ಆರೋಗ್ಯ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಟೆಂಡರ್, ಎಸ್.ಡಿ.ಎ, ಎಫ್.ಡಿ.ಎ, ಕಮ್ ಡೆವಲಪ್‌ಮೆಂಟ್ ಆಫೀಸರ್ ಹುದ್ದೆಗಳ ನೌಕರಿ ಕೊಡಿಸುವುದಾಗಿ ಹೇಳಿ, ದಾಖಲೆಗಳನ್ನು ನಕಲಿ ಸೃಷ್ಟಿ ಮಾಡಿ, ಫಿರ್ಯಾದುದಾರರು ಹಾಗೂ ಇತರರಿಂದ ಸುಮಾರು 31,46,390/- ರೂಪಾಯಿಗಳಿಗಿಂತಲೂ ಹೆಚ್ಚಿನ ಹಣವನ್ನು ಪಡೆದು, ನೌಕರಿ ಕೊಡಿಸದೇ ಮತ್ತು ಆ ಹಣವನ್ನು ಕೂಡಾ ವಾಪಾಸ ಮಾಡದೇ ಫಿರ್ಯಾದುದಾರರಿಗೆ ವಂಚಿಸಿದ್ದಲ್ಲದೇ, 2 ನೇ ಆಪಾದಿತನಾದ ರಾಜಣ್ಣ ಎನ್. ತಂದೆ ಆರ್. ನಾರಾಯಣನ್ ವಿಳಾಸ: ಅವಲಳ್ಳಿ. ಬೆಂಗಳೂರದೀತನು ಎಂಬಾತನು ಈ ಮೇಲ್ಕಂಡ ಹಣವನ್ನು 1 ನೇ ಆರೋಪಿತನಿಂದ ವಾಪಾಸ ಕೊಡಿಸುವುದಾಗಿ ಫಿರ್ಯಾದುದಾರಳಿಂದ ರೂ. 8,00,000/- ಹಣವನ್ನು ಪಡೆದು ಯಾವುದೇ ಹಣವನ್ನು ಮರಳಿ ಕೊಡಿಸದೇ ಮೋಸ ವಂಚನೆ ಮಾಡಿರುವ ಬಗ್ಗೆ ಇತ್ಯಾದಿ ನೀಡಿದ ಲಿಖಿತ ದೂರನ್ನು ಕುಮಟಾ ಪೊಲೀಸ ಠಾಣಾ ಗುನ್ನಾ ನಂ: 161/2021, ಕಲಂ 420, 465, 466, 468, 471 ಐ.ಪಿ.ಸಿ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ.	ಇಲ್ಲಾ ಈ ಪ್ರಕರಣವು ಇನ್ನೂ ತನಿಖೆಯಲ್ಲಿ ಬಾಕಿ ಇರುತ್ತದೆ	ತನಿಖೆ
9.	ಹೊನ್ನಾವರ	310/2021 ಕಲಂ :420 ಐ.ಪಿ.ಸಿ	ದಿನಾಂಕ : 18.11.2021 ರಂದು 15:30 ಗಂಟೆಗೆ	ಶ್ರೀ ಸುಬ್ರಹ್ಮಣ್ಯ ತಂದೆ ಶ್ರೀಪಾದ ಶೇಟ 23-ವರ್ಷ. ಉದ್ಯೋಗ-ಖಾಸಗಿ ಕಂಪನಿಯಲ್ಲಿ ಕೆಲಸ. ಸಾ॥ ಕವಲಕ್ಕಿ, ತಾ-ಹೊನ್ನಾವರ ಮೊ.ನಂ-9449761622	ರಾಘವೇಂದ್ರ ತಂದೆ ಗೋವಿಂದ ಪೂಜಾರಿ ಸಾ॥ ಮಕ್ಕಿಮನೆ, ಬಸ್ರೂರ. ತಾ-ಕುಂದಾಪುರ, ಜಿ-ಉಡುಪಿ ಮೊ.ನಂ-8618101803	ನಮೂದಾದ ಆರೋಪಿತನು ಫಿರ್ಯಾಧಿಯವರಿಗೆ ಆತನ ಮಾವನವರ ಮುಖಾಂತರ 2019 ರಲ್ಲಿ ಪರಿಚಯವಾದವನು, ಫಿರ್ಯಾಧಿಯವರಿಗೆ ರೈಲ್ವೆ ಇಲಾಖೆಯಲ್ಲಿ ಡ್ರಾಫ್ಟ್ಸ್‌ಮನ್ ಹುದ್ದೆಯನ್ನು ಕೊಡಿಸುತ್ತೇನೆ ಅದಕ್ಕೆ ಒಟ್ಟು 7-ಲಕ್ಷ ರೂ. ಖರ್ಚಾಗುತ್ತದೆ. ಮುಂಗಡವಾಗಿ 3-ಲಕ್ಷ ಹಣವನ್ನು ಕೊಡುವುದು ನಂತರ ನೌಕರಿಸಿಕ್ಕ ಬಗ್ಗೆ ಆರ್ಡರ್ ಕಾಪಿ ಬಂದ ನಂತರ ಉಳಿದ ಹಣವನ್ನು ಕೊಡುವುದು ಅಂತಾ 2019 ರಲ್ಲಿ ಫಿರ್ಯಾಧಿ ಹಾಗೂ ಫಿರ್ಯಾಧಿ ಮನೆಯವರಿಗೆ ನಂಬಿಸಿ ಫಿರ್ಯಾದಿಯವರ ಕಡೆಯಿಂದ ಫಿರ್ಯಾಧಿಯವರ ತಾಯಿಯವರಾದ ಶ್ರೀಮತಿ ವಿಜಯ ಶೇಟ್ ಇವರ ಹೆಸರಿನಲ್ಲಿರುವ ಕವಲಕ್ಕಿ ಶಾಖೆಯ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಖಾತೆ ನಂ-89044085608 ನೇದರಿಂದ ಆರೋಪಿತನು ನೀಡಿದ್ದ ಆತನ ಹೆಸರಿಗೆ ಇರುವ ಕುಂದಾಪೂರ ಶಾಖೆಯ ಹೆಚ್.ಡಿ.ಎಫ್.ಸಿ ಬ್ಯಾಂಕ ಖಾತೆ ನಂ-50100186456554 ನೇದಕ್ಕೆ ದಿನಾಂಕ : 02.03.2019 ರಂದು 50,000/-ರೂ. ದಿನಾಂಕ : 08.03.2019 ರಂದು 80,000/- ರೂ. ಹಾಗೂ ದಿನಾಂಕ : 09.04.2019 ರಂದು 10,000/- ರೂ. ಹಣವನ್ನು ನೆಫ್ಟ	ಇಲ್ಲ	ತನಿಖೆ

10.)	ಬನವಾಸಿ ಪೊಲೀಸ ಠಾಣೆ	110/2021 ಕಲಂ: 420 ಐ.ಪಿ.ಸಿ. ದಿ:19-11-2021	19-11-2021	ಶ್ರೀ ರುದ್ರೇಶ ತಂದೆ ಪಾಲಾಕ್ಷಪ್ಪ ಕಲ್ಮಟ್ಟೇರ ಪ್ರಾಯ:27 ವರ್ಷ ಖಾಸಗಿ ಕಂಪನಿಯಲ್ಲಿ ಕೆಲಸ ಸಾ// ಕಾಳಂಗಿ. ಶಿರಸಿ// ತಾಲೂಕ ಮೊ. ನಂ 6362459398.	ರಾಘವೇಂದ್ರ ಗೋವಿಂದ ಪೂಜಾರಿ ಸಾ: ಕುಂದಾಪುರ, ಉಡುಪಿ ಜಿಲ್ಲೆ.	ನಮೂದಾದ ಆಪಾದಿತನಾದ ರಾಘವೇಂದ್ರ ಗೋವಿಂದ ಪೂಜಾರಿ ಸಾ: ಕುಂದಾಪುರ, ಉಡುಪಿ ಜಿಲ್ಲೆ. ಈತನು ನನಗೆ ಪರಿಚಯವಾದವನು ಅಬಕಾರಿ ಇಲಾಖೆಯಲ್ಲಿ ಪಿಎಎಸ್‌ಐ ಹುದ್ದೆ ಕೊಡಿಸುತ್ತೇನೆ. ಅದಕ್ಕೆ ಒಟ್ಟು 10 ಲಕ್ಷ ಹಣವನ್ನು ಕೊಡಬೇಕಾಗುತ್ತದೆ . ಮೊದಲು 3 ಲಕ್ಷ ಹಣವನ್ನು ಕೊಡಿ, ನಂತರ ನೇಮಕಾತಿ ಪತ್ರ ಬಂದ ಕೂಡಲೆ ಉಳಿದ ಹಣವನ್ನುಕೊಡಿ ಎಂದು 2018 ರಲ್ಲಿ ಫಿರ್ಯಾದಿಯವರಿಗೆ ನಂಬಿಸಿ ಫಿರ್ಯಾದಿಯ ಖಾತೆ ನಂ 0491108025433 ನೇದರಿಂದ ಆರೋಪಿತನ ಹೆಸರಿಗೆ ಇರುವ ಹೆಚ್.ಡಿ.ಎಫ್.ಸಿ ಬ್ಯಾಂಕ ಖಾತೆ ನಂ: 50100186456554 ನೇದಕ್ಕೆ ದಿನಾಂಕ:14.11.2018 ರಂದು 2.00.000=00 ರೂ. ಹಾಗೂ ದಿನಾಂಕ;15.11.2018 ರಂದು ಅದೇ ಖಾತೆಗೆ 20.000=00 ರೂ. ಹಾಗೂ 23.01.2019 ರಂದು 50.000=00 ರೂ. ದಿನಾಂಕ: 26-03-2019 ರಂದು 30.000=00 ರೂ. ಹೀಗೆ ಒಟ್ಟು 3.00.000=00 ರೂ. ಪಡೆಕೊಂಡು. ಫಿರ್ಯಾದಿಯವರಿಗೆ ಈ ವರೆಗೆ ನೌಕರಿ ಕೊಡಿಸದೇ ಮತ್ತು ಫಿರ್ಯಾದಿವಯರು ನೀಡಿದ್ದ 3.00.000=00 ರೂ. ಹಣವನ್ನು ಸಹ ಮರಳಿ ನೀಡಲದೇ ಫಿರ್ಯಾದಿಯವರಿಗೆ ಮೋಸ ಮಾಡಿದ್ದರಿಂದ ಆತನ ವಿರುದ್ಧ ಕ್ರಮ ಕೈಗೊಳ್ಳುವುದು. ಎಂಬಿತ್ಯಾದಿ ನೀಡಿದ ದೂರಿನ ಸಾರಾಂಶ.	ಸದರ ಪ್ರಕರಣವು ತನಿಖೆಯಲ್ಲಿ ರುತ್ತದೆ.	
11.	ಮುಂಡಗೋಡ	112/2021 ಕಲಂ:463, 465, 468, 417, 420 ಐಪಿಸಿ ದಿನಾಂಕ:- 03/09/2021 ರಂದು 14-15 ಗಂಟೆಗೆ	03-09-2021	ಶ್ರೀ ಗುರುರಾಯ ತಂದೆ ದತ್ತಾತ್ರಾಯ ರಾಯ್ಕರ್ ಪ್ರಾಯ-36 ವರ್ಷ ವೃತ್ತಿ- ಜಿಯೋ ಸಿಮ್ ವಿತರಕ ಜಾತಿ- ಹಿಂದೂ ದೈವಜ್ಞ ಬ್ರಾಹ್ಮಣ ಸಾ॥ನಂದೇಶ್ವರ ನಗರ, ಮುಂಡಗೋಡ. ಮೊ.ನಂ- 9738999001.	ಸಂತೋಷ ತಂದೆ ತಿಪ್ಪಣ್ಣ ಗುದಗಿ ಸಾ॥ಬಸವೇಶ್ವರ ನಗರ ಬ್ಯಾಡಗಿ ಜಿ॥ಹಾವೇರಿ	ಆರೋಪಿತನಾದ ಸಂತೋಷ ಗುದಗಿ ಈತನು ತಾನು ಬೆಂಗಳೂರಿನ ಕಮಿಷನರ್ ಆಫೀಸಿನಲ್ಲಿ ಕೆಲಸ ಮಾಡುತ್ತಿರುವದಾಗಿ ಮತ್ತು ನೌಕರಿ ಕೊಡಿಸುವದಾಗಿ ನಂಬಿಸಿ ಫಿರ್ಯಾದಿಯ ಮೂಲಕ ಸುಮಾರು ಇಪತ್ತೈದು ಲಕ್ಷ ಐವತ್ತು ಸಾವಿರ ಹಣವನ್ನು ಬೇರೆ-ಬೇರೆ ಜನರಿಂದ ತನ್ನ ಅಕೌಂಟಿಗೆ ಹಾಕಿಸಿಕೊಂಡು, ಬೇರೆ ಬೇರೆ ಜಿಲ್ಲೆಯ ಎಸ್.ಪಿ ಸಾಹೇಬರ ನಕಲು ಸಹಿ ಮಾಡಿದ ಖೊಟ್ಟಿ ನೇಮಕಾತಿ ದಾಖಲೆಗಳನ್ನು ಯಾವದೋ ಗಣಕಯಂತ್ರದಲ್ಲಿ ಸೃಷ್ಟಿಸಿ ಹಣವನ್ನು ಮರಳಿ ಕೊಡದೇ. ನಂಬಿಕೆ ದ್ರೋಹ ಹಾಗೂ ಮೋಸ ಮಾಡಿದ್ದು. ಇವರ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಲು ವಿನಂತಿ ಎಂಬಿತ್ಯಾದಿ ನೀಡಿದ ದೂರಿನ ಸಾರಾಂಶ	ಇಲ್ಲ	ಸದರಿ ಪ್ರಕರಣವು ತನಿಖೆಯ ಲ್ಲಿರುತ್ತದೆ.

						ಮೂಲಕ ಹಾಕಿಸಿ ಹಾಗೂ ದಿನಾಂಕ : 25.05.2019 ರಂದು ಕವಲಕ್ಕಿಯ ಫಿರ್ಯಾಧಿಯವರ ಮನೆಯಲ್ಲಿ ಆರೋಪಿತನು ಖುದ್ದಾಗಿ ಬಂದು ಫಿರ್ಯಾಧಿಯವರ ತಾಯಿಯವರ ಕಡೆಯಿಂದ 1.60,000/- ರೂ. ನಗದು ಹಣವನ್ನು ಪಡೆದು, ಹೀಗೆ ಒಟ್ಟು 3-ಲಕ್ಷ ಹಣವನ್ನು ಪಡೆದುಕೊಂಡು ಫಿರ್ಯಾಧಿಯವರಿಗೆ ಈವರೆಗೆ ನೌಕರಿಯನ್ನು ಕೊಡಿಸದೇ ಮತ್ತು ಫಿರ್ಯಾಧಿಯವರು ನೀಡಿದ್ದಂತಹ 3-ಲಕ್ಷ ಹಣವನ್ನು ಮರಳಿ ಸಹ ನೀಡದೇ ಫಿರ್ಯಾಧಿಯವರಿಗೆ ಮೋಸ ಮಾಡಿದ್ದರಿಂದ ಆತನ ವಿರುದ್ಧ ಕ್ರಮ ಕೈಗೊಳ್ಳುವಂತೆ ಫಿರ್ಯಾಧಿಯವರು ನೀಡಿದ ದೂರು.		

ಚಿಕ್ಕಮಗಳೂರು ಜಿಲ್ಲೆ.

2020

ಕ್ರ.ಸಂ	ಪೊಲೀಸ್ ಠಾಣೆ	ಮೊ.ನಂ. ಕಲಂ ವರದಿ ದಿನಾಂಕ	ಪಿರ್ಯಾದುದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು)	ವಂಚನೆಗೊಳಗಾದವರಿಗೆ ಹಿಂದಿರುಗಿ ಸಲಾಗಿದೆಯೇ ವಿವರ ನೀಡುವುದು.	ಪ್ರಕರಣದ ಪ್ರಸ್ತುತ ಹಂತ
1	ಚಿಕ್ಕಮಗಳೂರು ನಗರ	199/2020 ಕಲಂ- 170,419,420,466,468,471 ಐಪಿಸಿ	ಉಮೇಶ ಬಿನ್ ಚಂದ್ರೇಗೌಡ, 21 ವರ್ಷ, ಚಿಕ್ಕ ಗೌಜ, ಹಿರೇಗೌಜ ಪೋಸ್ಟ್, ಚಿಕ್ಕಮಗಳೂರು.	ಪ್ರಭಾಕರ್ ಬಿನ್ ಪರಮೇಶ್, ಭೈರವೇಶ್ವರ ನಗರ, ನಾಗರಬಾವಿ, ಬೆಂಗಳೂರು.	ದಿನಾಂಕ 29.10.2020 ರಂದು 21-30 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರಿನ ಸಾರಾಂಶವೇನೆಂದರೆ ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುವ ನಾನು ಚಿಕ್ಕಮಗಳೂರಿನ ವಿಷ್ಣು ಡೆಲಿಕೆಸಿನಲ್ಲಿ ಸಪ್ಲೇಯರ್ ಆಗಿ ಕೂಲಿ ಕೆಲಸ ಮಾಡಿಕೊಂಡು ಪದವಿಯನ್ನು ವ್ಯಾಸಾಂಗ ಮಾಡುತ್ತಿರುತ್ತೇನೆ. ನಮ್ಮ ಹೋಟೆಲ್ ಗೆ ಗ್ರಾಹಕರಾಗಿ ಬೆಂಗಳೂರು ನಿವಾಸಿ ಪ್ರಭಾಕರ್ ಎಂಬುವರು ಆಗಿಂದಾಗ್ಗೆ ಬಂದು ಹೋಗುತ್ತಿದ್ದು ಪರಿಚಿತರಾಗಿದ್ದರು. ಅವರು ನನ್ನ ವಿದ್ಯಾರ್ಹತೆ ಬಗ್ಗೆ ಕೇಳಿ ತಿಳಿದುಕೊಂಡು ನಾನು ಬೆಂಗಳೂರಿನ ಎಸ್ ಎಸ್ ಎಲ್ ಸಿ ಬೋರ್ಡ ನಲ್ಲಿ ಚೀಫ್ ಸೆಕ್ರೆಟರಿ ಆಗಿರುತ್ತೇನೆ. ಬೋರ್ಡ್ ನಲ್ಲಿ ಆರಾಧ್ಯ ಎಂಬವರಿಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದು ನಿನಗೆ ಕಂಪ್ಯೂಟರ್ ಬರುವುದರಿಂದ ಬೆಂಗಳೂರಿನಲ್ಲಿ ಎಸ್ ಎಸ್ ಎಲ್ ಸಿ ಬೋರ್ಡ್ ನಲ್ಲಿ ಖಾಲಿ ಇರುವ ಕಂಪ್ಯೂಟರ್ ಆಪರೇಟರ್ ಹುದ್ದೆ ಕೊಡಿಸುವುದಾಗಿ ಹೇಳಿ ನನ್ನ ಆಧಾರ್ ಕಾರ್ಡ್, ಪಾನ್ ಕಾರ್ಡ, ಎಸ್ ಎಸ್ ಎಲ್ ಸಿ ಪಿ ಯು ಸಿ ಮತ್ತು ಪದವಿ ಅಂಕಪಟ್ಟಿಗಳು , ಕ್ಯಾಸ್ಟ್ ಮತ್ತು ಇನ್ ಕಂ ಸರ್ಟಿಫಿಕೇಟ್, ಫೋಟೋ, ಬ್ಯಾಂಕ್ ಪಾಸ್ ಬುಕ್ ಮತ್ತು ಕಂಪ್ಯೂಟರ್ ಸರ್ಟಿಫಿಕೇಟ್ ನ ಮೂಲ ದಾಖಲೆಗಳನ್ನು ಪಡೆದುಕೊಂಡರು. ಈ ವಿಚಾರವನ್ನು ನನ್ನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಯೋಗೀಶ ರವರಿಗೆ ಹೇಳಿ ಅವರನ್ನು	ವಂಚನೆಗೊಳಗಾದವರಿಗೆ 14 ಲಕ್ಷ ರೂಗಳನ್ನು ಹಿಂದಿರುಗಿಸಿದೆ.	ಸಿಸಿ ನಂಬರ್ 1786/2020 ರಲ್ಲಿ ಘನ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

					ಸಹ ಪರಿಚಯ ಮಾಡಿಸಿದೆನು. ಪ್ರಭಾಕರ ರವರು ಕೆಲಸಕ್ಕೆ ನನ್ನ ಮೇಲಾಧಿಕಾರಿಗಳಿಗೆ ಹಣ ಕೊಡಬೇಕಾಗುತ್ತದೆ. ಒಟ್ಟು 7 ಲಕ್ಷ ರೂ ಗಳನ್ನು ಕೇಳಿ ಅವರ ಬ್ಯಾಂಕ್ ಅಕೌಂಟ್ ನಂಬರ್ ನೀಡಿದ್ದು ಅದರಂತೆ ದಿನಾಂಕ:30/05/2020 ರಂದು ವಿಜಯ ಬ್ಯಾಂಕ್ ಮೂಡಲ ಪಾಳ್ಯ ಶಾಖೆ ಖಾತೆ ಸಂಖ್ಯೆ 133301011008374 ಕ್ಕೆ ಚಿಕ್ಕಮಗಳೂರು ವಿಜಯ ಬ್ಯಾಂಕ್ ನಿಂದ 3.50.000 [ಮೂರುವರೆಲಕ್ಷ] ರೂ ಗಳನ್ನು ಹಾಕಿರುತ್ತೇನೆ. ಮತ್ತೆ ಪುನ: ನಾನು ದಿನಾಂಕ:09/07/2020 ರಂದು ವಿಜಯ ಬ್ಯಾಂಕ್ ಮೂಡಲ ಪಾಳ್ಯ ಶಾಖೆ ಖಾತೆಗೆ ಸಂಖ್ಯೆ 133301011008374 ಕ್ಕೆ ಚಿಕ್ಕಮಗಳೂರು ವಿಜಯ ಬ್ಯಾಂಕ್ ನಿಂದ 2.50.000 [ಎರಡೂವರೆಲಕ್ಷ] ರೂ ಗಳನ್ನು ಹಾಕಿರುತ್ತೇನೆ, ಮತ್ತು ಬೋಗಿನಿಲ ಹೋಂ ಸ್ಟೇ ಗೆ ಬಾಕಿ ಹಣ 50.000/- ರೂ ಕೊಡಲು ಪ್ರಭಾಕರನು ಹೇಳಿದ್ದು ಅದರಂತೆ ಬೋಗಿನಿಲ ಹೋಂ ಸ್ಟೇ ನ ಮಾಲಿಕರಾದ ಕಿರಣ್ ರವರಿಗೆ ಕೊಟ್ಟಿರುತ್ತೇನೆ. ದಿನಾಂಕ:12/07/2020 ರಂದು ಪ್ರಭಾಕರನು ನಮ್ಮ ಮನೆಗೆ ಚಿಕ್ಕಗೌಜಕ್ಕೆ ಬಂದು ನನ್ನ ತಂದೆ ತಾಯಿ ಸಮ್ಮುಖದಲ್ಲಿ ನನಗೆ ಆರ್ಡರ್ ಕಾಫಿಯನ್ನು ಕೊಟ್ಟು ನಮ್ಮ ತಂದೆ ತಾಯಿಯವರೊಂದಿಗೆ ಫೋಟೋ ತೆಗೆಸಿಕೊಂಡರು , ಸೆಪ್ಟಂಬರ್ 23 ರಂದು ಬೆಂಗಳೂರಿನ 18 ನೇ ಕ್ರಾಸ್ . ಮಲ್ಲೇಶ್ವರಂ [illegible] ಬೋರ್ಡನಲ್ಲಿ ಕೆಲಸಕ್ಕೆ ರಿಪೋರ್ಟ್ ಮಾಡು ಎಂದು ಹೇಳಿದರು ಮತ್ತು ಬಾಕಿ ಹಣ 50.000/- ರೂ ಗಳನ್ನು ಕಣಿವೆ ದಾಸರಹಳ್ಳಿ ಶನೇಶ್ವರ ದೇವಸ್ಥಾನದ ಅರ್ಚಕರಾದ ಆನಂದ ರವರಿಗೆ ಕೊಡಲು ಹೇಳಿದ್ದು ನಾನು ದಿನಾಂಕ:13-07-2020 ರಂದು ಆನಂದ್ ರವರಿಗೆ 50.000/- ರೂ		

					ಗಳನ್ನು ಕೊಟ್ಟಿರುತ್ತೇನೆ. ನಾನು ದಿನಾಂಕ:23/09/2020 ರಂದು ನಾನು ಪ್ರಭಾಕರ್ ರವರು ತಿಳಿಸಿದ ವಿಳಾಸಕ್ಕೆ ಬೆಂಗಳೂರಿಗೆ ಹೋದಾಗ ಅಲ್ಲಿ ಪ್ರಭಾಕರ್ ರವರು ಸಹ ಬಂದಿದ್ದು ನನ್ನನ್ನು ಪಿಯು ಬೋರ್ಡ್ ಕಛೇರಿ ಒಳಗೆ ಕರೆದುಕೊಂಡು ಹೋಗಿ ತಿರುಗಾಡಿಸಿ ಅಲ್ಲಿದ್ದ ಪ್ರವೀಣ್ ನಾಯಕ್ ಎಂಬುವರ ಬಳಿ ಹೋಗಿ ನನ್ನ ಸಹಿ ಮತ್ತು ಹೆಬ್ಬೆಟ್ಟು ಒತ್ತಿಸಿಕೊಂಡು ನಿನಗೆ ಈ ಮೇಲ್ ಐ ಡಿ ಮುಖೇನ ಜಾಯಿನಿಂಗ್ ಲೆಟರ್ ಬರುತ್ತದೆ ಆಗ ಕೆಲಸಕ್ಕೆ ಬಾ ಎಂದು ಹೇಳಿ ವಾಪಸ್ ಕಳುಹಿಸಿದರು, ನಾನು ಊರಿಗೆ ವಾಪಸ್ ಬಂದೆನು. ನಾನು ಈ ಬಗ್ಗೆ ಪ್ರಭಾಕರ್ ರವರ ಮೇಲೆ ಅನುಮಾನ ಗೊಂಡು ದಿನಾಂಕ:22/10/2020 ರಂದು ಪುನ: ನನ್ನ ಸ್ನೇಹಿತ ಯೋಗೀಶ ರವರೊಂದಿಗೆ ಬೆಂಗಳೂರಿಗೆ ಹೋಗಿ ಎಸ್ ಎಸ್ ಎಲ್ ಸಿ ಬೋರ್ಡ್ ಮತ್ತು ಪಿ ಯು ಸಿ ಬೋರ್ಡ್ ಗಳಿಗೆ ಹೋಗಿ ಪ್ರಭಾಕರ್ ರವರ ಬಗ್ಗೆ ವಿಚಾರ ಮಾಡಿದಾಗ ಅಲ್ಲಿ ಪ್ರಭಾಕರ್ ಎನ್ನುವವರು ಯಾರೂ ಕೆಲಸ ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು. ನಾನು ಮೋಸ ಹೋಗಿರುವುದು ನನಗೆ ತಿಳಿಯಿತು ನಾನು ಈ ಬಗ್ಗೆ ಹಿರಿಯರಲ್ಲಿ ಮತ್ತು ಸ್ನೇಹಿತರಲ್ಲಿ ವಿಚಾರ ಮಾಡಿ ಈ ದಿವಸ ಠಾಣೆಗೆ ಬಂದು ದೂರು ನೀಡುತ್ತಿದ್ದು ನನಗೆ ಕೆಲಸ ಕೊಡಿಸುವುದಾಗಿ ನಂಬಿಸಿ 7 ಲಕ್ಷರೂ ಗಳನ್ನು ಬ್ಯಾಂಕ್ ಖಾತೆಗೆ ಹಾಕಿಸಿಕೊಂಡು ನನಗೆ ನಕಲಿ ಅಪಾಯಿಂಟ್ ಮೆಂಟ್ ಲೆಟರ್ ನ್ನು ಕೊಟ್ಟು ವಂಚನೆ ಮಾಡಿರುವ ಪ್ರಭಾಕರ ಬಿನ್ ಪರಮೇಶ ಬೈರವೇಶ್ವರ ನಗರ, ನಾಗರಭಾವಿ ಬೆಂಗಳೂರು ರವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗಿ ಕೋರಿಕೆ. ಇದರೊಂದಿಗೆ ನನ್ನ ಬಳಿ		
					ಇರುವ ಅಪಾಯಿಂಟ್ ಮೆಂಟ್ ಲೆಟರ್. ಬ್ಯಾಂಕ್ ಚಲನ್ ಪ್ರತಿ ಮತ್ತು ನನ್ನ ತಂದೆ ತಾಯಿಯವರಿಗೆ ಈ ಅಪಾಯಿಂಟ್ ಮೆಂಟ್ ಲೆಟರ್ ಕೊಡುವಾಗ ತೆಗೆಸಿಕೊಂಡ ಪೋಟೋ ಲಗತ್ತಿಸಿರುತ್ತೇನೆ. ಪ್ರಭಾಕರ್ ರವರನ್ನು ನಾನು		

					ನನ್ನ ಸ್ನೇಹಿತ ಯೋಗೀಶ ಮತ್ತು ನನ್ನ ತಂದೆ ತಾಯಿ ಯವರು ನೋಡಿದ್ದು ಪುನಃ ನೋಡಿದರೆ ಗುರುತಿಸುತ್ತೇವೆ.ಎಂದು ನೀಡಿದ ದೂರಿನ ಮೇರೆಗೆ ಈ ಪ್ರ.ವ.ವರದಿ.		
2	ಚಿಕ್ಕಮಗಳೂರು ನಗರ ಠಾಣೆ	ಮೊ ನಂ-220/2020. ಕಲಂ- 406. 420 ಐಪಿಸಿ	ಸುಮಿತ್ರಮ್ಮ ಕೋಂ ಶಿವರುದ್ರಯ್ಯ. 42 ವರ್ಷ. ಹುಣಿಸೇರಮರದ ಬೀದಿ. ಚಿಕ್ಕಮಗಳೂರು.	ಎ1- ಸುನೀಲ್ ಕುಮಾರ್. ಚಿಕ್ಕಮಗಳೂರು. ಎ2- ಸಾಯಿ ಪ್ರಸಾದ್. ಚಿಕ್ಕಮಗಳೂರು.	ಈ ದಿವಸ ದಿನಾಂಕ:28/11/2020 ರಂದು 14-30 ಗಂಟೆಗೆ ಪಿರ್ಯಾದಿದಾರರು ಠಾಣೆಗೆ ಬಂದು ನೀಡಿದ ಗಣಕೀಕೃತ ದೂರಿನ ಸಾರಾಂಶವೇನೆಂದರೆ ಸುನೀಲ್ ಕುಮಾರ್ ಈತನ ಹೆಂಡತಿ ಮಗನೊಂದಿಗೆ ಸುಮಾರು 2 ವರ್ಷಗಳ ಹಿಂದೆ ಚಿಕ್ಕಮಗಳೂರು ಟೌನ್ ತೇಗೂರು ಗೇಟ್ ಸಮೀಪ ಬಾಡಿಗೆ ಮನೆ .ಮಾಡಿಕೊಂಡು ವಾಸವಾಗಿದ್ದು ನಮ್ಮಗಳ ಹತ್ತಿರ ಕೆ ಎಸ್ ಆರ್ ಟಿ ಸಿ ಸಂಸ್ಥೆಯಲ್ಲಿ ಡ್ರೈವರ್ ಕೆಲಸ ಮಾಡಿಕೊಂಡು ಇರುತ್ತೇನೆಂದು ಹಾಗೂ ಈ ಹಿಂದೆ 15 ರಿಂದ 20 ಜನರಿಗೆ ಸಿವಿಲ್ ಪೊಲೀಸ್ ಕಾನ್ಸ್ ಟೇಬಲ್ ಕೆಲಸ ವನ್ನು ಕೊಡಿಸಿರುತ್ತೇನೆ ನಾನು ಬಡವರಿಗೆ ಬಹಳಷ್ಟು ಸಹಾಯ ಮಾಡಿಕೊಂಡು ಬಂದಿರುತ್ತೇನೆ ನನಗೆ ಪೊಲೀಸ್ ಇಲಾಖೆಯಲ್ಲಿ ಡಿ.ವೈ.ಎಸ್.ಪಿ ಹಾಗೂ ಐ.ಜಿ.ಪಿ ಡಿ.ಜಿ.ಪಿ ಸಾಹೇಬರ ತನಕ ಚೆನ್ನಾಗಿ ಸಂಪರ್ಕ ಇರುತ್ತದೆ ಹಾಗೂ ಪರಿಚಯವಿರುತ್ತದೆ.ನಾನು ಬಹಳಷ್ಟು ಜನರಿಗೆ ಸರ್ಕಾರಿ ಕೆಲಸ ಕೊಡಿಸಿರುತ್ತೇನೆ. ನಿಮ್ಮಲ್ಲಿ ಯಾರಾದರೂ ಇದ್ದರೆ ಹೇಳಿ ಎಂದು ಇತ್ಯಾದಿಯಾಗಿ ಆಸೆ ಆಮಿಷಗಳನ್ನು ಒಡ್ಡಿ ನಾನು ಚಿಕ್ಕಮಗಳೂರು ಟೌನ್ ನಲ್ಲಿ ಹೂವಿನ ವ್ಯಾಪಾರ ಮಾಡುತ್ತಿರುವ ಜಾಗದಲ್ಲಿ 2018 ನೇ ಇಸವಿಯಲ್ಲಿ ಪ್ರತಿನಿತ್ಯ ಬಂದು ಸಿವಿಲ್ ಪೊಲೀಸ್ ಕಾನ್ಸ್ ಟೇಬಲ್ ಕೆಲಸ ಕೊಡಿಸುತ್ತೇನೆಂದು ಇತ್ಯಾದಿಯಾಗಿ ಹೇಳುತ್ತಾ ನನ್ನ ಮಗ ಉಮೇಶನಿಗೆ ಕೆಲಸ ಕೊಡಿಸುವುದಾಗಿ ಹೇಳಿ ಹಂತ ಹಂತವಾಗಿ 6.00.000 ಲಕ್ಷ ರುಪಾಯಿಗಳನ್ನು ಪಡೆದು ಇದುವರೆಗೂ ನಮಗೆ ಕೆಲಸ ಕೊಡಿಸುವುದಾಗಲಿ ಹಾಗೂ ನಮ್ಮಿಂದ ಪಡೆದ ಹಣವನ್ನು ವಾಪಸ್ ಕೊಟ್ಟಿರುವುದಿಲ್ಲ ನಮ್ಮಗಳಿಗೆ ವಂಚಿಸಿ ಮೋಸ	ಇಲ್ಲ	ಪಿರ್ಯಾದಿಯವರಿಂದ ದಾಖಲಾತಿ ಪಡೆಯಲು ಬಾಕಿ ಇದ್ದು ತನಿಖೆಯಲ್ಲಿರುತ್ತದೆ.

					ಮಾಡಿರುತ್ತಾರೆ. ಅಲ್ಲದೇ ನಮ್ಮ ಸಂಬಂದಿಕರಾದ ಗಿರಿಜಮ್ಮ ರವರ ಮಗ ಪ್ರದೀಪ್ .ಪ್ರವೀಣ್. ಹಾಗೂ ಶ್ರೀ ಮಹೇಶಯ್ಯ ರವರ ಮಗ ಯತೀಶ ರವರು ಸಹ ಪೊಲೀಸ್ ಕಾನ್ಸ್ ಟೇಬಲ್ ಕೆಲಸಕ್ಕಾಗಿ ತಲಾ 6.00,000 ಲಕ್ಷಗಳಂತೆ 4 ಜನರಿಂದ ಒಟ್ಟು 24 ಲಕ್ಷ ರೂಗಳನ್ನು ಪಡೆದು ವಂಚನೆ ಮಾಡಿರುತ್ತಾರೆ. ನಮ್ಮಿಂದ ಹಂತ ಹಂತವಾಗಿ ಹಣವನ್ನು ಪಡೆಯುವಾಗ ಸುನೀಲ್ ಕುಮಾರ್ ಹಾಗೂ ಇವರ ಮಗ ಸಾಹಿ ಪ್ರಸಾದ್ ಸಹಾ ಇರುತ್ತಾರೆ ಈ ವಿಷಯದ ಬಗ್ಗೆ ಇಬ್ಬರು ಸಹಾ ವಂಚಿಸಿರುತ್ತಾರೆ.ಇವರು ಚಿಕ್ಕಮಗಳೂರು ಟೌನ್ ತೇಗೂರು ಗೇಟ್ ಬಳಿ ಬಾಡಿಗೆ ಮನೆಯಲ್ಲಿದ್ದು ಸದರಿ ಈಗ ನಮಗೆ ಗೊತ್ತಾಗದ ರೀತಿಯಲ್ಲಿ ಮನೆ ಖಾಲಿ ಮಾಡಿಕೊಂಡು ಅವರ ಸ್ವಂತ ಊರಾದ ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕು ಸಂಕೇಶ್ವರ ಹೋಬಳಿ ನೆರ್ಲಿ ಗ್ರಾಮದಲ್ಲಿ ಆತನ ಸಂಸಾರದೊಂದಿಗೆ ವಾಸವಾಗಿರುತ್ತಾನೆ ಆತ ಇಲ್ಲಿ ಇರುವುದನ್ನು ನಾವುಗಳು ಪತ್ತೆ ಮಾಡಿ ನಾವುಗಳು ಸುಮಾರು ಒಂದು ವರ್ಷದಿಂದ ನಮ್ಮ ಹಣ ನಮಗೆ ಕೊಡುವಂತೆ ಇವರಿರುವ ಊರಿಗೆ ಹೋಗಿ ಕೇಳಿದರೆ ಸುಳ್ಳು ಸಬೂಬು ಹೇಳಿಕೊಂಡು ನಮ್ಮಗಳಿಗೆ ವಂಚಿಸಿ ಮೋಸ ಮಾಡಿರುತ್ತಾನೆ.ಆದ್ದರಿಂದ ನಮಗೆ ವಂಚಿಸಿ ಮೋಸ ಮಾಡಿರುವ ಸುನೀಲ್ ಕುಮಾರ್ ಮತ್ತು ಮಗ ಸಾಯಿ ಪ್ರಸಾದ್ ರವರುಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ನಮಗೆ ನ್ಯಾಯ ದೊರಕಿಸಿಕೊಡಬೇಕಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊ ನಂ 220-2020 ರಲ್ಲಿ ನೊಂದಾಯಿಸಿರುತ್ತೆ		

ಉಡುಪಿ ಜಿಲ್ಲೆ.

ಕ್ರ ಸಂ	ಪೊಲೀಸ್ ಠಾಣೆಯ ಹೆಸರು	ಮೊ. ಸಂ ಮತ್ತು ಕಲಂ, ದಿನಾಂಕ	ಪಿರ್ಯಾದುದಾರರ ಹೆಸರು	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆಯ ವಿವರ ನಮೂದಿಸುವುದು)	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
2021 ನೇ ಸಾಲಿನಲ್ಲಿ ಮಾತ್ರ							
1	ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆ	ಅ.ಕ್ರ 20/21 ಕಲಂ : 406,420 ಐ.ಪಿ.ಸಿ ದಿನಾಂಕ 09/02/21	ಶ್ರೀಮತಿ ಜಯಮ್ಮ ಪ್ರಾಯ 64 ವರ್ಷ ಗಂಡ: ಮಹಾಬಲ ವಾಸ: ಹೊಸಮನೆ, ಮಾಳ ಚೌಕಿ, ಮಾಳ ಅಂಚೆ ಮತ್ತುಗ್ರಾಮ. ಕಾರ್ಕಳ ತಾಲೂಕು	ಅಬ್ದುಲ್‌ಯಾನೆಜಬ್ಬರ್ ಪ್ರಾಯ 34 ವರ್ಷತಂದೆ ಮೊಹಮ್ಮದ್. ವಾಸ ಮುಸ್ತಾಫಾ ಮಂಜಿಲ್‌ಶಾರದಾ ನಗರ ಮಾಡೂರುಕೋಟೆಕ್ಕಾರು ಅಂಚೆ ಮತ್ತುಗ್ರಾಮ ಮಂಗಳೂರು ದಕ್ಷಿಣಕನ್ನಡಜಿಲ್ಲೆ. ಹಾಲಿವಾಸ : ಸಲಾಂರವರ ಬಾಡಿಗೆ ಮನೆ ಕುಶಾಲನಗರ ಮಾಡೂರು, ಮಂಗಳೂರು ದಕ್ಷಿಣಕನ್ನಡಜಿಲ್ಲೆ.	ಪಿರ್ಯಾಧಿದಾರರು ಮಾಳ ಹೊಸಮನೆ ನಿವಾಸಿಯಾಗಿದ್ದು ಅವರು ನಿವೃತ್ತಕಿರಿಯಆರೋಗ್ಯ ಸಹಾಯಕಿಯಾಗಿದ್ದುಅವರಿಗೆ 2019 ನೇ ಇಸವಿಯಲ್ಲಿ ಬೆಳ್ತಂಗಡಿ ಮದುವೆಬ್ರೋಕರ್ ಲಕ್ಷ್ಮೀ ಹೊಳ್ಳ ಎಂಬವರ ಮುಖಾಂತರ ಮಂಗಳೂರು ಕೋಟೆಕ್ಕಾರು ವಾಸಿ ಅಬ್ದುಲ್ ಖಾದರ್ ಎಂಬವರ ಪರಿಚಯವಾಗಿದ್ದುಆರೋಪಿತನು ಪಿರ್ಯಾಧಿಜಯಮ್ಮನವರಇಬ್ಬರು ಮಕ್ಕಳಿಗೆ ಸರಕಾರಿಉದ್ಯೋಗಕೊಡಿಸುವುದಾಗಿ ನಂಬಿಸಿ ಅವರನ್ನು ಮೋಸ ಮಾಡುವಉದ್ದೇಶದಿಂದ 9,60,000 ರೂಪಾಯಿ ಹಣವನ್ನು ನೇರವಾಗಿಜಯಮ್ಮನವರಿಂದ ಪಡೆದುಅವರಇಬ್ಬರು ಮಕ್ಕಳಿಗೆ ಸರಕಾರಿ ಕೆಲಸವನ್ನುಕೊಡಿಸದೇ ಹಣವನ್ನು ವಾಪಾಸು ಕೊಡದೇ ಮೋಸ ಮಾಡಿರುವುದಾಗಿದೆ	ಇಲ್ಲ	ಪಿಸಿಜೆ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ ಕಾರ್ಕಳ ಸಿಸಿ ನಂ 497/2021 ರಂತೆ ನ್ಯಾಯಾಲಯದ ವಿಚಾರಣೆಯಲ್ಲಿದೆ

ಬೆಳಗಾವಿ ಜಿಲ್ಲೆ

ಕ್ರ.ಸಂ	ಪೊಲೀಸ್ ಠಾಣೆಯ ಹೆಸರು	ಮೊ.ಸಂ. ಕಲಂ ದಿನಾಂಕ	ಫಿರ್ಯಾಧಿ ಹೆಸರು & ವಿಳಾಸ	ಆರೋಪಿತರ ಹೆಸರು & ವಿಳಾಸ	ಪ್ರಕರಣದ ಸಾರಾಂಶ	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೆ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
2018							
1.	ಗೋಕಾಕ ಶಹರ	231/2018 ಕಲಂ 420 ಐಪಿಸಿ ದಿನಾಂಕ:02/08/2018	ತುಕಾರಾಮ ಮಹಾದೇವಪ್ಪ ಕಮಲದಿನ್ನಿ ಸಾ-ಕಮಲದಿನ್ನಿ ತಾ-ಗೋಕಾಕ	ನೇಹಾ ಕೊಂ ರವಿ ಜತ್ತಿ ಸಾ-ಕುಮಾರಸ್ವಾಮಿ ಲೇಔಟ್ ಬೆಳಗಾವಿ	ಇದರಲ್ಲಿ ನಮೂದು ಮಾಡಿದ ಆರೋಪಿ ನೇಹಾ ಕೊಂ ರವಿ ಜತ್ತಿ ಸಾ-ಬೆಳಗಾವಿ ಕುಮಾರಸ್ವಾಮಿ ಲೇಔಟ್ ಇವಳು ಫಿರ್ಯಾದಿಯ ಮಗ ಅನೀಲ ತುಕಾರಾಮ ಕಮಲದಿನ್ನಿ ಸಾ-ಘುಲಗಡ್ಡಿ ಇವನಿಗೆ ಸರಕಾರಿ ನೌಕರಿ ಕೊಡಿಸುವದಾಗಿ ನಂಬಿಸಿ ಫಿರ್ಯಾದಿಯ ಕಡೆಯಿಂದ ಒಟ್ಟು 5,50,000-00 ರೂಪಾಯಿ ಗಳನ್ನು ಪಡೆದುಕೊಂಡು ಇಲ್ಲಿಯವರೆಗೆ ನೌಕರಿಯನ್ನು ಕೊಡಿಸದೇ ಹಾಗೂ ಹಣವನ್ನೂ ಸಹ ಮರಳಿ ಸಹ ಕೊಡದೆ ಮೋಸ ಮಾಡಿದ ಅಪರಾಧ.	ಸದರಿ ಪ್ರಕರಣವು ವಿಚಾರಣೆಯಲ್ಲಿ ಇರುತ್ತದೆ.	ಸಿಸಿ ನಂ-2589/2019 30/12/2021 ಆರ್ಡರ
2.	ಕಾಗವಾಡ	91/2018 ಕಲಂ 406, 420 ಐಪಿಸಿ	ಮುತ್ತಪ್ಪಾ ಸೋಮಲಿಂಗ ಪೂಜಾರಿ ಸಾ॥ ಮೋಳೆ	1.ಮಹೇಶ ತಂದೆ ಮಂಜುನಾತ ಸಾ॥ ದಾವನಗೇರಿ ಮತ್ತು ಮ್ಯೈಸೂರ ಹಾಲಿ ವಾಸ ಬೆಂಗಳೂರು	ಇದರಲ್ಲಿ ನಮೂದು ಮಾಡಿ ದಿನಾಂಕ ವೇಳೆ ವ ಸ್ಥಳದಲ್ಲಿ ಇದರಲ್ಲಿ ನಮೂದು ಮಾಡಿದ ಆರೋಪಿತನು ಫಿರ್ಯಾದಿ ಮತ್ತು ಸಾಕ್ಷಿದಾರ ಸಿದ್ದಪ್ಪಾ ಭೀಮಪ್ಪಾ ಅವಳೆ ಸಾ॥ ಐನಾಪೂರ ಇವರಿಗೆ ಕೆಇಬಿಯಲ್ಲಿ ನೌಕರಿ ಹಚ್ಚುತ್ತೇನೆ ಅಂತಾ ಹೇಳಿ ಫಿರ್ಯಾದಿಯವರ ಕಡೆಯಿಂದ 350.000/-ರೂಪಾಯಿಗಳನ್ನು	---	ಸಿಸಿ ನಂ-564/2021 ದಿನಾಂಕ:28/07/21 ಸಾಕ್ಷಿ

					ಮತ್ತು ಸಾಕ್ಷಿದಾರ ಸಿದ್ದಪ್ಪಾ ಅವಳಿ ಇವರ ಕಡೆಯಿಂದ 8.50000/- ರೋಖ ಹಣವನ್ನು ಪಡೆದುಕೊಂಡು ಅಲ್ಲದೆ ಫಿರ್ಯಾದಿಯವರ ಕಡೆಯಿಂದ ತನ್ನ ಯೂನಿಯನ್ ಬ್ಯಾಂಕ ಅಕೌಂಟಗೆ 4.00.000/- ಜಮಾ ಮಾಡಿಸಿಕೊಂಡು ನೌಕರಿಯನ್ನು ಕೊಡಸದೆ ಹಣವನ್ನು ಮರಳಿ ಕೊಡದೆ ನಂಬಿಕೆ ದ್ರೋಹ ಮೋಸ ಮಾಡಿದ ಅಪರಾಧ.		
3	ರಾಮದುರ್ಗ	209/2018 ಕಲಂ 420 ಐಪಿಸಿ ದಿನಾಂಕ : 15.09.2018 ರಂದು 1300 ಗಂಟೆಗೆ	ಹನಮಂತಪ್ಪ ಈರಪ್ಪ ಅಂಕಲಿ ವಯಾ : 39 ವರ್ಷ ಸಾ : ಹದ್ಲಿ ತಾ : ನರಗುಂದ ಜಿ : ಗದಗ	ಅರ್ಜುನ ಗದಿಗೆಪ್ಪ ಗುಡ್ಡದ ಸಾ : ಕಲಹಾಳ ತಾ : ರಾಮದುರ್ಗ	ಇದರಲ್ಲಿ ನಮೂದು ಮಾಡಿದ ಆರೋಪಿತನಾದ ಅರ್ಜುನ ಗದಿಗೆಪ್ಪ ಗುಡ್ಡದ ಸಾ: ಕಲಹಾಳ ಇವನು ತಾನು ಹಿಂದಿನ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರ ಆಪ್ತನಿರುತ್ತೇನೆ ನನಗೆ ಎಲ್ಲ ಇಲಾಖೆಯ ಅಧಿಕಾರಿಗಳು ಪರಿಚಯ ಇರುತ್ತಾರೆ. ನಾನು ಬೆಳಗಾವಿ ವಿಟಿಯುದಲ್ಲಿ ಅಟೆಂಡರ / ಕ್ಲಾರ್ಕ ನೌಕರಿ ಕೊಡಿಸುತ್ತೇನೆ ಅಂತಾ ಫಿರ್ಯಾದಿದಾರರಿಗೆ ಸುಳ್ಳು ಹೇಳಿ ಒಂದು ಹುದ್ದೆಗೆ ಮೂರು ಲಕ್ಷ ರೂಪಾಯಿ ಕೊಡಬೇಕು ಅಂತಾ ಮಾತನಾಡಿ ಸಾಕ್ಷಿದಾರ ಬಸಪ್ಪ ಸುಂಕಪ್ಪ ಅಡಿನ ಇವರ ಹೆಂಡತಿಯಾದ ಶ್ರೀಮತಿ ಸ್ಪೂರ್ತಿ ಇವರ ನೌಕರಿ ಸಲುವಾಗಿ ಒಟ್ಟು 05 ಲಕ್ಷ 80 ಸಾವಿರ ರೂಪಾಯಿಗಳನ್ನು ನಗದು ರೂಪದಲ್ಲಿ ಹಾಗೂ	ಹಣ ಹಿಂದಿರುಗಿಸಿ ಮಾನ್ಯ ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡು ಪ್ರಕರಣ ಮುಕ್ತಾಯಗೊಂಡಿರುತ್ತದೆ.	ಸಿಸಿ ನಂ- 15/2019 ರಾಜಿ ದಿ: 14/08/2021

					ಬ್ಯಾಂಕ ಅಕೌಂಟ ಮೂಲಕ ಫಿರ್ಯಾದಿದಾರ ಹಾಗೂ ಸಾಕ್ಷಿದಾರ ಬಸಪ್ಪ ಸುಂಕಪ್ಪ ಅಡಿನ ಇವರ ಕಡೆಯಿಂದ ಇಸಿದುಕೊಂಡು ಫಿರ್ಯಾದಿದಾರನಿಗೆ ಹಾಗೂ ಸಾಕ್ಷಿದಾರರ ಹೆಂಡತಿ ಶ್ರೀಮತಿ ಸ್ಪೂರ್ತಿ ಇವರಿಗೆ ಫ್ಲಿಟಿಯು ಬೆಳಗಾವಿಯಲ್ಲಿ ಅಟೆಂಡರ/ಕ್ಲಾರ್ಕ ನೌಕರಿ ಕೊಡಿಸದೇ ಹಾಗೂ ಅವರು ಕೊಟ್ಟ ಹಣವನ್ನೂ ಕೂಡ ಮರಳಿ ಕೊಡದೇ ಮೋಸ ಮಾಡಿದ ಅಪರಾಧ.		
2019							
1	ಹಾರೂಗೇರಿ	95/2019 ಕಲಂ 420 ಸಹ ಕಲಂ 34 ಐ.ಪಿ.ಸಿ 15.07.2019 ರಂದು 0900 ಗಂಟೆಗೆ	ಶ್ರೀ ನಿಜಗುಣ ಶ್ರೀಶೈಲಗೌಡ ಪಾಟೀಲ, ಸಾ॥ ಕೋಳಿಗುಡ್ಡ, ತಾ॥ ರಾಯಬಾಗ.	1) ಅಪ್ಪಣ್ಣಗೌಡ ಮಲಗೌಡ ಬಿರಾದರ, 2) ಮಲಗೌಡ ಮಾನಿಂಗ ಬಿರಾದರ, 3) ಸುರೇಶ ಮಲಗೌಡ ಬಿರಾದರ, ಸಾ॥ ಕೋಳಿಗುಡ್ಡ, 4) ಭೀಮಪ್ಪ ಲಕ್ಷ್ಮಣ ಕುಕ್ಕೋಳ್ಳಿ ಸಾ॥ ಬಾಳಿಗೇರಿ.	ಇದರಲ್ಲಿ ಮೂದು ಮಾಡಿದ ಆರೋಪಿತರು ಸಂಗನಮತ ಮಾಡಿಕೊಂಡು ಫಿರ್ಯಾದಿಯ ತಮ್ಮ ಮಂಜುನಾಥ ಶ್ರೀಶೈಲಗೌಡ ಬಿರಾದರ ಇವನಿಗೆ ಪಿ.ಎಸ್.ಐ ನೌಕರಿ ಕೊಡಿಸುತ್ತೇವೆ ಅಂತಾ ಹೇಳಿ ಫಿರ್ಯಾದಿ ಮತ್ತು ಫಿರ್ಯಾದಿಯ ತಂದೆಯಿಂದ 19.80.000/- ರೂ ಹಣವನ್ನು ಆರೋಪಿ ನಂಬರ 1 ಇವನ ಬ್ಯಾಂಕ್ ಖಾತೆಗೆ ಹಾಕಿಸಿಕೊಂಡು ಮತ್ತು 2.20.000/- ರೂ ರೋಖ ಹಣ ಆರೋಪಿ ನಂಬರ 2 ಇವನು ಇಸಿದುಕೊಂಡು ಹೀಗೆ ಒಟ್ಟು 22.00.000;-	--	ತನಿಖೆ
					ರೂಪಾಯಿ ಹಣವನ್ನು ಪಡೆದುಕೊಂಡು ಫಿರ್ಯಾದಿಯ ತಮ್ಮನಿಗೆ ಪಿ.ಎಸ್.ಐ ನೌಕರಿಯನ್ನು ಕೊಡಿಸದೆ ಹಣವನ್ನು ವಾಪಸ್ಸು ಕೊಡದೆ		

					ಮೋಸ ಮಾಡಿದ ಅಪರಾಧ.		
2	ಕಿತ್ತೂರ	63/2019 ಕಲಂ: 417 420 ಐಪಿಸಿ. 05/05/2019 ರಂದು 1315 ಗಂಟೆಗೆ	ಬಸವರಾಜು ತಂದೆ ಶೇಖರ ವಯಸ್ಸು: 31 ವರ್ಷ ಸಾ: ಬೂದೇನಹಳ್ಳಿ ತಾ: ವೀರಾಪೂರ	1)ಮಹಾಂತೇಶ ಮಲ್ಲಪ್ಪ ಪಠಾತ ಸಾ: ಸುತಗಟ್ಟಿ 2) ಶ್ರೀಮತಿ ಶಾಂತವ್ವ ಬಸಪ್ಪ ಕ್ಯಾತನವರ ಸಾ: ಕಲಬಾವಿ	ಇದರಲ್ಲಿ ನಮೂದಿಸಿದ ಆರೋಪಿತರು ಕಲಬಾವಿ ಗ್ರಾಮದ ಮಡಿವಾಳಪ್ಪ ದೇಮಪ್ಪ ತಿಗಡಿ. ಬಸವರಾಜ ಭೀಮಪ್ಪ ತಳವಾರ ಮತ್ತು ಕಲ್ಲಪ್ಪ ಪುಂಡಲೀಕ ಬಡಿಗೇರ ಇವರಿಗೆ ರೈಲ್ವೆ ಇಲಾಖೆಯಲ್ಲಿ ಡಿ ದರ್ಜೆಯ ಹುದ್ದೆಯ ನೌಕರಿ ಕೊಡಿಸುವದಾಗಿ ನಂಬಿಸಿ ಅವರ ಕಡೆಯಿಂದ ಒಟ್ಟು 2.60.000/- ರೂ ಹಣ ಪಡೆದು ಮೋಸ ಮಾಡಿದ ಅಪರಾಧ.	-	ಸಿಸಿ ನಂ 154/2020 ನ್ಯಾಯಾಲಯಾಲಯದ ವಿಚಾರಣೆ
2020							
1	ಚಿಕ್ಕೋಡಿ	59/2020 ಕಲಂ: 406 420 504 506 ಐಪಿಸಿ	ಶ್ರೀ ಸಮ್ಮೇದ ಶ್ರೀಪಾಲ ಕೋಟಿ ಸಾ॥ ಹಿರೇಕೋಡಿ ಗ್ರಾಮ ತಾ॥ ಚಿಕ್ಕೋಡಿ	1) ವಿಕ್ರಮ ಅಶೋಕ ಬನಗೆ 2) ಶಂಕರ ಅವಣ್ಣಾ ಮಾಳಿ 3) ಬಾಹುಬಲಿ ದೇವೇಂದ್ರ ಸೈಬನ್ನವರ ಸಾ॥ ಎಲ್ಲರೂ ಹಿರೇಕೋಡಿ	ಇದರಲ್ಲಿಯ ಆರೋಪಿತರು ಫಿರ್ಯಾದಿಗೆ 6 ಲಕ್ಷ ರೂ ನೀಡಿದರೆ ನಿನಗೆ ಪಂಚಾಯತಿಯಲ್ಲಿ ಕೆಲಸ ಕೊಡಿಸುತ್ತೇನೆ ಅಂತಾ ಹೇಳಿ ಫಿರ್ಯಾದಿ ಕಡೆಯಿಂದಾ ಹಂತ ಹಂತವಾಗಿ 470000/- ರೂಗಳನ್ನು ಪಡೆದುಕೊಂಡು ಫಿರ್ಯಾದಿಗೆ ಪಂಚಾಯತಿಯಲ್ಲಿ ಆರ್‌ಓ ಪ್ಲ್ಯಾಂಟ್ ಆಪರೇಟರ್ ನೋಡಿಕೊಳ್ಳುವ ಕೆಲಸ ಕೊಡಿಸಿದ್ದು ಅನಂತರ ತಾಲೂಕಾ ಪಂಚಾಯತಿ ಅಧಿಕಾರಿಗಳು ಪರಿವೀಕ್ಷಣೆಗೆ ಬಂದಾಗ ಅವ್ಯವಹಾರದ ತನಿಖೆ ನಡೆಸಿ ಫಿರ್ಯಾದಿಯನ್ನು ಕೆಲಸದಿಂದ ತಗೆದು ಹಾಕಿದ್ದು ಆದರೆ ಆರೋಪಿತರು ಫಿರ್ಯಾದಿಗೆ ಕೆಲಸ ಕೊಡಿಸದೆ ಹಣವನ್ನು ಮರಳಿ ಕೊಡದೆ ಅಪರಾಧಿಕ	ಸದರಿ ಪ್ರಕರಣವು ವಿಚಾರಣೆಯಲ್ಲಿ ಇರುತ್ತದೆ.	ಸಿಸಿ ನಂ. 04/2021 ದಿನಾಂಕ 28/12/2021 ರಂದು ಎಚ್‌ಬಿಸಿ

					ನಂಬಿಕೆ ದ್ರೋಹವೆಸಗಿ ಮೋಸ ಮಾಡಿದ್ದಲ್ಲದೆ ಅವಾಚ್ಯವಾಗಿ ಬೈದು ಜೀವದ ಧಮಕಿ ಹಾಕಿದ ಅಪರಾಧ.		
2	ಕಿತ್ತೂರ	66/2020 ಕಲಂ: 406 420 ಐಪಿಸಿ 22/05/2020 ರಂದು 1900 ಗಂಟೆಗೆ	ಬಸವಣ್ಣೆಪ್ಪ ವೀರಭದ್ರಪ್ಪ ಹತ್ತಿ ಸಾ: ಹುಣಶೀಕಟ್ಟಿ ತಾ: ಕಿತ್ತೂರ	1) ಇಕ್ಬಾಲಸಿಂಗ್ ಬಾದಲ್ ತಂದೆ ಗುರುದ್ಯಾಲ ಸಿಂಗ್ ಸಾ: ಸರಸಾ ತಾ:ಜಿ: ಪಟಾನಕೋಟ ರಾಜ್ಯ: ಪಂಜಾಬ 2) ರವಿ ಶೇಖಪ್ಪ ತೋಟಗಿ ವಯಾ: 28 ವರ್ಷ ಸಾ: ದೇವರಶೀಗಿಹಳ್ಳಿ ಸಾ: ಇಬ್ಬರೂ ಹಾಲಿ: ಮಾಂಟರೇಲಾ ಕೆನಡಾ	ಇದರಲ್ಲಿ ನಮೂದಿಸಿದ ಆರೋಪಿತರು ಕೆನಡಾ ದೇಶದಲ್ಲಿ ಇದ್ದು ಸದರಿಯವರು ತಮಗೆ ಕೆನಡಾ ದೇಶದ ಜನರ ಪರಿಚಯ ಇರುತ್ತದೆ ನೀನು ಕೆನಡಾ ದೇಶಕ್ಕೆ ಬಾ ಇಲ್ಲಿ ಡ್ರೈವರ್ ಕೆಲಸ ಕೊಡಿಸಿ, ತಿಂಗಳಿಗೆ 04 ಲಕ್ಷ ರೂಪಾಯಿ ಪಗಾರ ಕೊಡಿಸುತ್ತೇವೆ ಅದಕ್ಕೆ ಪಾಸಪೋರ್ಟ, ವಿಸಾ, ವಿಸಾ ಸ್ಟಾಂಪಿಂಗ್ ಮಾಡಿಸುವ ಸಲುವಾಗಿ 10 ಲಕ್ಷ ರೂಪಾಯಿ ನಮಗೆ ಕೊಡಬೇಕು ಅಂತಾ ಹೇಳಿ ಫಿರ್ಯಾದಿಗೆ ನಂಬಿಸಿ ಫಿರ್ಯಾದಿಯ ಕಡೆಯಿಂದ ಒಟ್ಟು 10,22,000/- ರೂಪಾಯಿ ಹಣ ಪಡೆದು ಕೆನಡಾದಲ್ಲಿ ಕೆಲಸವನ್ನು ಕೊಡಿಸದೇ ಹಣವನ್ನು ಮರಳಿ ಕೊಡದೆ ಫಿರ್ಯಾದಿಗೆ ನಂಬಿಸಿ ಮೋಸ ಮಾಡಿದ ಅಪರಾಧ.	-	ಸಿ ಸಿ ನಂ 167/2020 ನ್ಯಾಯಾಲಯದ ವಿಚಾರಣೆ
2021							
1	ಸವದತ್ತಿ ಪೊಲೀಸ್ ಠಾಣೆ	216/2021. ಕಲಂ: 420 323 504 506 ಸಹಕಲಂ 149 ಐಪಿಸಿ. ದಿನಾಂಕ: 31/07/2021 ರಂದು 2030 ಗಂಟೆಗೆ	ಶ್ರೀ ಈರಯ್ಯ ಪತ್ರಯ್ಯ ಪಾಟೀಲ. ಸಾ: ಸವದತ್ತಿ.	1)ವಾಗೇಶ ಜಿ. ಎಮ್. ಸಾ: ಇಸ್ರೋ ಲೇ ಔಟ ಬೆಂಗಳೂರ. 2) ಜಿ. ಎಮ್ ಗುರುಪಾದಸ್ವಾಮಿ. ಸಾ: ಹಡಗಲಿ. 3)ಸೀಮಾ ಕೋಂ ವಾಗೇಶ ಜಿ. ಎಮ್. ಸಾ: ಇಸ್ರೋ ಲೇ ಔಟ	ಇದರಲ್ಲಿ ನಮೂದ ಮಾಡಿದ ಆರೋಪಿ ನಂಬರ: 01 ಇವನು ಫಿರ್ಯಾದಿದಾರನ ಸಂಬಂಧೀಕನಿದ್ದು ಸದರಿ ಆರೋಪಿತನು 2019 ನೇ ಸಾಲಿನಲ್ಲಿ ಕೆ.ಪಿ.ಎಸ್.ಸಿ ಯಲ್ಲಿ ನನಗೆ ಕೆ..ಟಿ ದೀಕ್ಷಾ ಅಂಬುವ ಅಧಿಕಾರಿಗಳ ಪರಿಚಯ ಇದ್ದು ಅವರಿಗೆ 60 ಲಕ್ಷ ಹಣವನ್ನು	-	ತನಿಖೆ

				ಬೆಂಗಳೂರ. 4)ಉಮೇಶ ಜಿ. ಎಮ್. ಸಾಃ ಚಾಮರಾಜಪೇಟೆ ಬೆಂಗಳೂರ. ಗಿರೀಶ ಜಿ ಎಮ್ ಸಾಃ ದಾವಣಗೇರೆ.	ಕೊಟ್ಟರೆ ಅವರು ನಿನ್ನ ಮಗನಾದ ಪ್ರಸಾದ ಈರಯ್ಯ ಪಾಟೀಲ ಇವನಿಗೆ ಕೆ.ಪಿ.ಎಸ್.ಸಿ ಯಲ್ಲಿ ನೌಕರಿ ಕೊಡುತ್ತಾರೆ ಅಂತಾ ಹೇಳಿ ಫಿರ್ಯಾದಿದಾರರ ಮಗನಿಗೆ ನೌಕರಿ ಕೊಡಿಸುವುದಾಗಿ ನಂಬಿಸಿ ಫಿರ್ಯಾದಿದಾರರ ಕಡೆಯಿಂದ ಒಟ್ಟು 60 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಇಲ್ಲಿಯವರೆಗೆ ಯಾವುದೆ ನೌಕರಿ ಕೊಡಿಸದೆ ಫಿರ್ಯಾದಿದಾರರಿಗೆ ಮೋಸ ಮಾಡಿದ್ದ ಅಲ್ಲದೆ ಕೊಟ್ಟ ಹಣವನ್ನು ಮರಳಿ ಕೇಳಿದ್ದಕ್ಕೆ ಆರೋಪಿತರೆಲ್ಲರೂ ಕೂಡಿಕೊಂಡು ಇನೋವಾ ಕಾರಗಾಡಿ ನಂಬರಃ ಕೆಎ-51 ಎಮ್‌ಇ-4567 ನೇದ್ದರಲ್ಲಿಂದ ಫಿರ್ಯಾದಿದಾರರ ಮನೆಗೆ ಬಂದು ಫಿರ್ಯಾದಿದಾರರಿಗೆ ಮತ್ತು ಅವರ ಮನೆಯ ಜನರಿಗೆ ಹೊಡಿಬಡಿ ಮಾಡಿ ಅವಾಚ್ಯ ಶಬ್ದಗಳಿಂದ ಬೈದು 60 ಲಕ್ಷ ರೂಪಾಯಿ ಹಣ ಕೇಳಿದರೆ ನಿಮ್ಮನ್ನೆಲ್ಲ ಜೀವಂತ ಬಿಡುವುದಿಲ್ಲ ಅಂತಾ ಅಂದು ಜೀವದ ಧಮಕಿ ಹಾಕಿದ ಅಪರಾಧ.		

<u>ಗದಗ ಜಿಲ್ಲೆ</u>

ಅ. ನಂ.	ಪೊಲೀಸ್ ಠಾಣೆ ಹೆಸರು	ಮೊಕದ್ದಮೆ ಸಂಖ್ಯೆ ವ ಕಲಂ	ಫಿರ್ಯಾದಿದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
01	ಮುಂಡರಗಿ ಪೊಲೀಸ್ ಠಾಣೆ	ಎಂ.ಎ.ಜಿ ಗುನ್ನಾ ನಂ: 172/2020 ಕಲಂ: 420 ಐಪಿಸಿ	ಹನಮಂತಪ್ಪ ತಂದೆ ಮಹಾದೇವಪ್ಪ ಹೂಗಾರ ವಯಾ: 64 ವರ್ಷ ಸಾ: ಬೆಂಗಳೂರು	1] ಶಿದ್ದಪ್ಪ ತಂದೆ ರಾಮಪ್ಪ ಹೂಗಾರ 2] ಮಡಿವಾಳಪ್ಪ ತೂಕೂರ ಸಾ: ವಿದ್ಯಾನಗರ ಹುಬ್ಬಳ್ಳಿ	ಇದರಲ್ಲಿ ನಮೂದ ಮಾಡಿದ ಆರೋಪಿ ಒಂದನೇದವನು ಪಿರ್ಯಾದಿಯ ಅಣ್ಣನಾದ ಶಿದ್ದಪ್ಪ ಹೆಂಡತಿಯ ತಮ್ಮನಾಗಬೇಕು ಸದರಿ ಆರೋಪಿ 01 ನೇದವನು ಬೆಂಗಳೂರಿನ ಮಾರುತಿ ಪ್ರೌಢಶಾಲೆಯಲ್ಲಿ ಎಸ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದಾನೆ. ನಮೂದ ಮಾಡಿದ ಆರೋಪಿ 02 ನೇದವನು ಆರೋಪಿ 01 ನೇದವನಿಗೆ ಸಹಾಯಕನಾಗಿದ್ದು ಅದೆ. ನಮೂದ ಮಾಡಿದ ಪಿರ್ಯಾದಿಯ ಮಗಳಾದ ಪೂರ್ಣಿಮಾ ಸನ್-2014 ರಲ್ಲಿ ಬಿ.ಎ. ಡಿಗ್ರಿ ಮಾಡಿಕೊಂಡಿದ್ದಳು ಆಗ ಪಿರ್ಯಾದಿಯು ತನ್ನ ಮಗಳ ನೌಕರಿಯ ಬಗ್ಗೆ ವಿಚಾರಿಸುತ್ತಿದ್ದಾಗ ಪಿರ್ಯಾದಿಗೆ ಹೇಗೋ ವಿಷಯ ಗೊತ್ತಾಗಿ ಪಿರ್ಯಾದಿಗೆ ಬೇಟಿಯಾಗಿ ತನಗೆ ಬೆಂಗಳೂರಿನಲ್ಲಿ ಅಲ್ಲ ಸ್ವಲ್ಪ ದೊಡ್ಡ ಅಧಿಕಾರಿಗಳು ಪರಿಚಯ ಇರುತ್ತದೆ. 7-8	ಇದರಲ್ಲ ಬಿ ಸಿವಿಲ್ ಸ್ವರೂಪದ್ದು ಅಂತಾ ಅಂತಿ ವರದಿ ಸಲ್ಲಿಸಿದೆ.	ಮಾನ್ಯ ನ್ಯಾಯಾಲಯದಿಂದ ಸಮರಿ ಬರುವುದು ಬಾಕಿ ಅದೆ.

					ಲಕ್ಷ ರೂಗಳನ್ನು ಕೊಟ್ಟರೆ ಪಿರ್ಯಾದಿಯ ಮಗಳಿಗೆ ನೌಕರಿ ಕೊಡಿಸುತ್ತೇನೆ ಅಂತಾ ಹೇಳಿ. ಪಿರ್ಯಾದಿ ಕಡೆಯಿಂದ ದಿ: 13.06.2012 ರಿಂದ ದಿ: 20.04.2014 ರ ನಡುವಿನ ಅವಧಿಯಲ್ಲಿ ಇಟ್ಟು 07 ಲಕ್ಷ ರೂಗಳನ್ನು ಬ್ಯಾಂಕ ಮೂಲಕ ಮತ್ತು ಪಿರ್ಯಾದಿಯ ಸಮಕ್ಷಮ ಇಸಿದುಕೊಂಡು ಪಿರ್ಯಾದಿಯ ಮಗಳಿಗೆ ನೌಕರಿ ಕೊಡಿಸದೇ ಪಿರ್ಯಾದಿಯ ಹಣವನ್ನು ಮರಳಿ ಕೊಡದೇ ಪಿರ್ಯಾದಿಗೆ ಮೋಸ ಮಾಡಿದ್ದು ಅದೆ. ಅಂತಾ ವಗ್ಯೆರೆ ಪಿರ್ಯಾದಿಯಲ್ಲಿ ನಮೂದ ಇರುತ್ತದೆ.			

)

02	ಗಜೇಂದ್ರಗಡ	150/2021 ಕಲಂ: 417. 420. 468 ಐಪಿಸಿ. ದಿನಾಂಕ: 25/08/2021	ಕಳಕಪ್ಪ ತಂದೆ ಈಶಪ್ಪ ಅಂಗಡಿ ಸಾ: ಜಿಗೇರಿ	ಈರಪ್ಪ @ ವಿರೇಶ ತಂದೆ ಹನಮಪ್ಪ ಕಲ್ಲುಡಿ ವಯಾ-32 ವರ್ಷ ಜಾತಿ-ಹಿಂದೂ ವಾಲ್ಮೀಖಿ ಉದ್ಯೋಗ-ಖಾಸಗಿ ನೌಕರ ಸಾ:ಹಿರೇನಂದಿಹಾಳ ತಾ:ಕುಷ್ಟಗಿ ಜಿ:ಕೊಪ್ಪಳ.	ಆರೋಪಿತನು ಮೊಸ ಮಾಡುವ ಉದ್ದೇಶದಿಂದ ಪಿರ್ಯಾದಿದಾರರಿಗೆ ಕೆ.ಎಸ್.ಆರ್.ಟಿ.ಸಿ ಇಲಾಖೆಯ ಅಸಿಸ್ಟೆಂಟ್ ಟ್ರಾಫಿಕ್ ಇನ್ಸ್ಪೆಕ್ಟರ್ ಹುದ್ದೆಯನ್ನು ಕೊಡಿಸುವಾಗಿ ಹೇಳಿ 02.00.000/- ರೂ.ಗಳ ರೋಕ್ ಹಣವನ್ನು ಹಾಗೂ 2020 ನೇ ಸಾಲಿನಲ್ಲಿ 06.00.000/-ರೂ.ಗಳ ರೋಕ್ ಹಣವನ್ನು ತೆಗೆದುಕೊಂಡು ಹೋಗಿದ್ದು ಆರೋಪಿತನು ಇನ್ನೂ ಹಲವಾರು ಜನರಿಂದ ಸರ್ಕಾರಿ ನೌಕರಿ ಕೊಡಿಸುವುದಾಗಿ ಹೇಳಿ ಹಣವನ್ನು ತೆಗೆದುಕೊಂಡಿರುತ್ತಾನೆ. ಸರ್ಕಾರಿ ನೌಕರಿಯನ್ನು ಕೊಡುಸುತ್ತೇನೆ ಅಂತಾ ಸುಳ್ಳನ್ನು ಹೇಳಿ ಮೋಸ ಮಾಡುವ ಉದ್ದೇಶದಿಂದ ಹಣ ಪಡೆದುಕೊಂಡು. ಸರ್ಕಾರಿ ನೌಕರಿ ಬಂದಿದೆ ಅಂತಾ ಸುಳ್ಳು ದಾಖಲೆ ಸೃಷ್ಟಿ ಮಾಡಿ. ನಮ್ಮ ಹಣವನ್ನು ಮರಳಿ ಕೊಡದೇ ನಮಗೆ ಮೊಸ ಮಾಡಿದ ಅಪರಾಧ	ಇಲ್ಲಾ	ಸದರ ಪ್ರಕರಣ ತನಿಖೆಯಲ್ಲಿ ಇರುತ್ತದೆ.

ವಿಜಯಪುರ ಜಿಲ್ಲೆ.

ಕ್ರ. ಸಂ	1
ಪೊಲೀಸ್ ಠಾಣೆಯ ಹೆಸರು	ಜಲನಗರ
ಗು.ನಂ ಮತ್ತು ಕಲಂ	06/2021 ಕಲಂ 406. 420. 504. 506. ಐಪಿಸಿ
ಫಿರ್ಯಾದಿದಾರರ ಹೆಸರು ಮತ್ತು ವಿಳಾಸ	ಶ್ರೀಮತಿ ಬಸಮ್ಮಾ ಗಂಡ ಲಾಯಪ್ಪ ಹೊನ್ನಮನಿ ವಯಸ್ಸು: 48 ವರ್ಷ ಸಾ: ವಿಜಯಪುರ ಬಬಲೇಶ್ವರ ನಾಕಾ ಹತ್ತಿರ ಹಾಲಿ ಶಿವಶಕ್ತಿನಗರ
ಆರೋಪಿತರ ಹೆಸರು ಮತ್ತು ವಿಳಾಸ	ಲಕ್ಷ್ಮೀ ಗಂಡ ಬಾಬಾಸಾಹೇಬ ಚವ್ಹಾಣ ಸಾ॥ ಕವಲಗಿ ತಾ॥ಜಿ॥ ವಿಜಯಪುರ ಬಾಬಾಸಾಹೇಬ ಚವ್ಹಾಣ ಸಾ॥ ಕವಲಗಿ ತಾ॥ಜಿ॥ ವಿಜಯಪುರಯಲ್ಲಮ್ಮ ಗಂಡ ನಾಗಪ್ಪ ಹಿಟ್ನಳ್ಳಿ ಸಾ॥ ರಾಮನಗರ ವಿಜಯಪುರ
ಪ್ರಕರಣಗದ ಸಾರಾಂಶ (ಕೃತ್ಯ ನಡೆದ ವಿವರ ವಂಚನೆ ವಿವರ ನಮೂದಿಸುದು	ಸನ್ 2018ನೇ ಸಾಲಿನಲ್ಲಿ ವಿಜಯಪುರ ಜಿಲ್ಲಾ ನ್ಯಾಯಾಲಯದಲ್ಲಿ ಸಿಪಾಯಿ ಹುದ್ದೆಗೆ ಅರ್ಜಿ ಕರೆದಿದ್ದರು. ಆಗ ನನ್ನ ಮಗಳು ವೈಶಾಲಿ ಇವಳು ಸಿಪಾಯಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದಳು. ಸದರಿ ಲಕ್ಷ್ಮೀ ಇವಳು ನಮ್ಮ ಮನೆಗೆ ಬಂದು ನಿಮ್ಮ ಮಗಳು ವೈಶಾಲಿ ಇವಳಿಗೆ ಕೋರ್ಟನಲ್ಲಿ ಸಿಪಾಯಿ ನೌಕರಿ ಮಾಡಿಸುತ್ತೇನೆ. ನೀವು 05 ಲಕ್ಷ ರೂಪಾಯಿಗಳನ್ನು ಕೊಡಬೇಕು ಅಂತಾ ಹೇಳುತ್ತಿದ್ದಳು. ಅದಕ್ಕೆ ತಾನು ನಮ್ಮ ಮನೆಯಲ್ಲಿ ವಿಚಾರ ಮಾಡುತ್ತೇನೆ ಅಂತಾ ಹೇಳಿದ್ದೇನು. ಆದರೆ ಲಕ್ಷ್ಮೀ ಇವಳು ಪದೇ ಪದೇ ನಮ್ಮ ಮನೆಗೆ ಬಂದು ನಾನು ನಿಮ್ಮ ಮಗಳಿಗೆ ನೌಕರಿ ಮಾಡಿಸುತ್ತೇನೆ ನನಗೆ 05 ಲಕ್ಷ ಹಣ ಕೈಗಡ ಕೊಡ್ರಿ ಅಂತಾ ಹೇಳುತ್ತಿದ್ದಳು. ಮುಂದೆ ಸ್ವಲ್ಪ ದಿವಸ ಬಿಟ್ಟು ನಾನು ಮತ್ತು ತನ್ನ ಮಗಳು ವೈಶಾಲಿ ಕೂಡಿಕೊಂಡು ಲಕ್ಷ್ಮೀ ಇವಳ ಮನೆಗೆ ಹೋಗಿ ಅವಳ ಗಂಡ ಬಾಬಾಸಾಹೇಬ ಈತನಿಗೆ ನಿಮ್ಮ ಹೆಂಡತಿ ತನ್ನ ಮಗಳು ವೈಶಾಲಿ ಇವಳಿಗೆ ಕೋರ್ಟನಲ್ಲಿ ಸಿಪಾಯಿ ನೌಕರಿ ಮಾಡಿಸುತ್ತೇನೆ ಅಂತಾ ಹೇಳಿ 05 ಲಕ್ಷ ರೂಪಾಯಿ ಹಣ ಕೇಳುತ್ತಿದ್ದಾಳೆ ಅಂತಾ ಹೇಳಿದೇವು. ಅದಕ್ಕೆ ಅವರು ತನ್ನ ಹೆಂಡತಿಗೆ ರಾಜಕೀಯ ವ್ಯಕ್ತಿಗಳು ಮತ್ತು ಕೋರ್ಟನಲ್ಲಿ ಪರಿಚಯ ಇರುತ್ತಾರೆ. ನಿಮ್ಮ ಮಗಳಿಗೆ ನೌಕರಿ ಮಾಡಿಸುತ್ತಾಳೆ 5 ಲಕ್ಷ ರೂಪಾಯಿ ಹಣ ಕೊಡ್ರಿ ಅಂತಾ ಹೇಳಿದರು. ನಂತರ ನಾನು ಲಕ್ಷ್ಮೀ ಚವ್ಹಾಣ ಇವಳಿಗೆ ಯಲ್ಲಮ್ಮಾ ಗಂಡ ನಾಗಪ್ಪ ಹಿಟ್ನಳ್ಳಿ ಮತ್ತು ನಮಗೆ ಪರಿಚಯದವರಾದ ಇಂದುಮತಿ ಗಂಡ ನಾಗನಾಥ ಕಂಬಾರ ಇವರ ಸಮಕ್ಷದಲ್ಲಿ ದಿನಾಂಕ: 26/07/2019 ರಂದು ಮುಂಜ್ಯಾನೆ 11-00 ಗಂಟೆಯ ಸುಮಾರಿಗೆ ಶಿವಶಕ್ತಿ ನಗರದಲ್ಲಿರುವ ನಮ್ಮ ಮನೆಯಲ್ಲಿ 5.000.00/- ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಈ ಬಗ್ಗೆ ಲಕ್ಷ್ಮೀ ಇವಳು ನನಗೆ 2.50.000/- ರೂಪಾಯಿಗಳ 02 ಕೈಗಡ ಪತ್ರವನ್ನು ಮಾಡಿಕೊಟ್ಟಿರುತ್ತಾಳೆ. ನನ್ನ ಮಗಳಿಗೆ ಇಲ್ಲಿಯವರೆಗೆ ನೌಕರಿ ಸಿಕ್ಕಿರುವುದಿಲ್ಲಾ. ತಾವು ಲಕ್ಷ್ಮೀ ಚವ್ಹಾಣ ಇವಳಿಗೆ ಕೊಟ್ಟಿರುವ 05 ಲಕ್ಷ ಹಣವನ್ನು ಮರಳಿ ಕೊಡುವಂತೆ ಕೇಳಿದಾಗ ಇಂದು ಕೊಡುತ್ತೇವೆ ನಾಳೆ ಕೊಡುತ್ತೇವೆ ಅಂತಾ ಹೇಳುತ್ತಾ ಬಂದಿದ್ದಳು. ದಿನಾಂಕ: 07/02/2020 ರಂದು ಮದ್ಯಾಹ್ನ 1-00 ಗಂಟೆಯ ಸುಮಾರಿಗೆ ನಾನು ಮತ್ತು ನನ್ನ ಮಗಳು ವೈಶಾಲಿ ಕೂಡಿಕೊಂಡು ಯಲ್ಲಮ್ಮಾ ಹಿಟ್ನಳ್ಳಿ ಇವಳ ಮನೆಗೆ ಹೋಗಿ ನಾವು ಲಕ್ಷ್ಮೀ ಇವಳಿಗೆ ಕೊಟ್ಟಿರುವ 05 ಲಕ್ಷ ರೂಪಾಯಿ ಹಣವನ್ನು ಮರಳಿ ನಮಗೆ ಕೊಡು ಅಂತಾ ಅವಳಿಗೆ ಹೇಳು ಅಂತಾ ಹೇಳಿದಾಗ ಅವಳು ಏ ರಂಡಿ ನಾ ಯ್ಯಾಕೆ ಅವಳಿಗೆ ಹೇಳಲಿ ನೀ ಕೊಟ್ಟಿದ್ದಿ ನೀ ಇಸಕೋ ಬೋಸಡಿ ಇನ್ನೋಮ್ಮೆ ನನ್ನ ತಂಟೆಗೆ ಬಂದರೆ ನಿನ್ನ ಹೊಟ್ಟೆಗೆ ಕತ್ತರಿ ಹಾಕಿ ಖಲಾಸ ಮಾಡಿ ಬಿಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದಳು. ಇವಳು ಮಾತನಾಡಿರುವುದನ್ನು ನನ್ನ ಮಗಳು ತನ್ನ ಮೊಬೈಲದಲ್ಲಿ ರೆಕಾರ್ಡಿಂಗ ಮಾಡಿಕೊಂಡಿರುತ್ತಾಳೆ. ನಂತರ ನಾವು ಲಕ್ಷ್ಮೀ ಚವ್ಹಾಣ ಇವಳ ಮನೆಗೆ ಹಣ ಕೇಳಲು ಹೋದಾಗ ನಿಮ್ಮ 5 ಲಕ್ಷ ಹಣ

	ದಿನಾಂಕ: 01/01/2021 ರ ಒಳಗಾಗಿ ಮರಳಿ ಕೊಡುತ್ತೇನೆ ಅಂತಾ ದಿನಾಂಕ: 03/10/2020 ರಂದು ಲಕ್ಷ್ಮೀ ಚವ್ಹಾಣ ಇವಳು ಕೈಗಡ ಬಾಂಡ ಪತ್ರ ಮಾಡಿಕೊಟ್ಟಿರುತ್ತಾಳೆ. ಈ ಬಾಂಡ ಪತ್ರಕ್ಕೆ ಸಾಕ್ಷಿದಾರರು ಅಂತಾ 1] ಅಲ್ತಾಫ ತಂದೆ ಗುಡುಸಾಬ ಸಯ್ಯದ ಸಾ॥ ವಿಜಯಪುರ ಕನ್ನಾನ ನಗರ 2] ರಜಾಕಸಾಬ ತಂದೆ ಭಾಷಾಸಾಬ ಕಾಖಂಡಕಿ ಸಾ॥ ವಿಜಯಪುರ ಸಂಜಯ ಗಾಂಧಿ ನಗರ ಇವರು ಸಹಿ ಮಾಡಿರುತ್ತಾರೆ. ಆದರೆ ಲಕ್ಷ್ಮೀ ಚವ್ಹಾಣ ಇವಳು ಇಲ್ಲಿಯವರೆಗೆ ನಮ್ಮ 5 ಲಕ್ಷ ಹಣ ಮರಳಿ ಕೊಟ್ಟಿರುವುದಿಲ್ಲಾ. ಆದ್ದರಿಂದ ಲಕ್ಷ್ಮೀ ಗಂಡ ಬಾಬಾಸಾಹೇಬ ಚವ್ಹಾಣ ಮತ್ತು ಅವಳ ಗಂಡ ಬಾಬಾಸಾಹೇಬ ಚವ್ಹಾಣ ಹಾಗೂ ಯಲ್ಲಮ್ಮ ಗಂಡ ನಾಗಪ್ಪ ಹಿಟ್ನಳ್ಳಿ ಕೂಡಿಕೊಂಡು ತನ್ನ ಮಗಳು ವೈಶಾಲಿ ಇವಳಿಗೆ ವಿಜಯಪುರ ಜಿಲ್ಲಾ ನ್ಯಾಯಾಲಯದಲ್ಲಿ ನೌಕರಿ ಮಾಡಿಸುತ್ತೇನೆ ಅಂತಾ ಹೇಳಿ ನಮಗೆ ನಂಬಿಸಿ ಮೋಸ ಮಾಡಿ ನಮ್ಮ ಕಡೆಯಿಂದ 05 ಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡಿರುತ್ತಾರೆ. ಕಾರಣ 1] ಲಕ್ಷ್ಮೀ ಗಂಡ ಬಾಬಾಸಾಹೇಬ ಚವ್ಹಾಣ 2] ಬಾಬಾಸಾಹೇಬ ಚವ್ಹಾಣ ಸಾ॥ ಇಬ್ಬರೂ ಕವಲಗಿ ತಾ॥ ವಿಜಯಪುರ 3] ಯಲ್ಲಮ್ಮ ಗಂಡ ನಾಗಪ್ಪ ಹಿಟ್ನಳ್ಳಿ ಸಾ॥ ರಾಮನಗರ ವಿಜಯಪುರ ಇವರ ಮೇಲೆ ಕಾನೂನು ಕ್ರಮ ಕೈಕೊಳ್ಳಬೇಕು ಅಂತಾ
ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಇಲ್ಲಾ
ಪ್ರಕರಣದ ಪ್ರಸ್ತುತ ಹಂತ	ಸದರ ಪ್ರಕರಣವು ಸದ್ಯ ತನಿಖಾ ಹಂತದಲ್ಲಿರುತ್ತದೆ.

<u>ಧಾರವಾಡ ಜಿಲ್ಲೆ</u>

ಕ್ರಮ ಸಂಖ್ಯೆ	ಪೊಲೀಸ್ ಠಾಣೆಯ ಹೆಸರು	ಮೊ.ಸಂಖ್ಯೆ ದಿನಾಂಕ	ಫಿರ್ಯಾದಿಯ ಹೆಸರು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ ವಿವರ ನೀಡುವುದು	ಪ್ರಕರಣದ ಹಂತ
01	ನವಲಗುಂದ , ಪೊಲೀಸ್ ಠಾಣೆ	ಗುನ್ನಾ ನಂ: 31/2020 ಕಲಂ 420.464.46 8.ಐ.ಪಿ.ಸಿ. <u>ದಿನಾಂಕ</u> 01-02-2020 ರಂದು 12-30 ಗಂಟೆಗೆ	ರವಿ ತಂದೆ ಶಿವಪ್ಪ ಬಾಡಗಿ ವಯಾ 30 ವರ್ಷ ಜ್ಯಾತಿ ಹಿಂದೂ ಕುರಬರ ಉದ್ಯೋಗ ಶೇತ್ಕಿ ಕೆಲಸ ಸಾ॥ ನವಲಗುಂದ	ಅರ್ಜುನ ತಂದೆ ಗದಿಗೆಪ್ಪ ಗುಡ್ಡದ ಸಾ। ಕಲಹಾಳ ತಾ॥ ರಾಮದುರ್ಗ ಹಾಲಿ ಹುಬ್ಬಳ್ಳಿ	ನಮೂದ ದಿನಾಂಕ ವೇಳೆ ವ ಸ್ಥಳದಲ್ಲಿ ನಮೂದ ಆರೋಪಿತನು ಫಿರ್ಯಾದಿ ಹಾಗೂ ನೊಂದವರಿಗೆ ಮೋಸ ವಂಚನೆ ಮಾಡುವ ಉದ್ದೇಶದಿಂದ ಸರಕಾರಿ ನೌಕರಿ ಕೊಡಿಸುವುದಾಗಿ ಹೇಳಿ ಅವರಿಂದ ಒಟ್ಟು 27,00000/- ಲಕ್ಷ ರೂ ಹಣವನ್ನು ಪಡೆದುಕೊಂಡು ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು ರವರ ಖೊಟ್ಟಿ ಸೇರ್ಪಡೆಯ ಅಧಿಸೂಚನೆಯನ್ನು ಸೃಷ್ಟಿ ಮಾಡಿ ಫಿರ್ಯಾದಿ ಹಾಗೂ ನೊಂದವರಿಗೆ ನೀಡಿ ಮೋಸ ವಂಚನೆ ಮಾಡಿದ ಅಪರಾಧ.	ಸದರಿ ಪ್ರಕರಣದಲ್ಲಿ ವಂಚನೆಗೊಳಗಾದವರಿಗೆ ಇನ್ನೂ ಹಣ ಹಿಂದಿರುಗಿಸಿರುವುದಿಲ್ಲಾ	ದೋಷಾರೋಪಣಾ ಪತ್ರವು ಪರಿಶೀಲನೆಯಲ್ಲಿ--ರುತ್ತದೆ.

ಬಾಗಲಕೋಟೆ ಜಿಲ್ಲೆ

ಕ್ರ ಸಂ	ವರ್ಷ	ಪೊಲೀಸ್ ಠಾಣೆಯ ಹೆಸರು	ಮೊಕದ್ದಮೆ ಸಂಖ್ಯೆ, ಕಲಂ ಮತ್ತು ವರದಿ ದಿನಾಂಕ	ಫಿರ್ಯಾದಿದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವದು)	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ? ವಿವರ ನೀಡುವದು	ಪ್ರಕರಣದ ಪ್ರಸ್ತುತ ಹಂತ
1	2018	ಬಾಗಲಕೋಟ ಶಹರ	74/2018 ಕಲಂ: 406,420 ರೆ/ವ 34 ಐಪಿಸಿ ದಿನಾಂಕ:- 03.04.2018	ವಿರೇಶ ತಂದೆ ಶಿವಲಿಂಗಪ್ಪ ವಿಜಾಪೂರ ಸಾ: ಬಾಗಲಕೋಟ ವಿನಾಯಕ ನಗರ.	ಬಾಷಾ ಮೈನುದ್ದಿನ್ ಮಕಾನದಾರ ಸಾ ಬಾಗಲಕೋಟ	ನಮೂದು ಮಾಡಿದ ಆರೋಪಿತನು ಫಿರ್ಯಾದಿ ಹಾಗೂ ಸಾಕ್ಷಿದಾರ ಜನರೊಂದಿಗೆ ಎಸ್.ಬಿ.ಐ ಬಾಗಲಕೋಟ ಶಾಖೆಯಲ್ಲಿ ರೀಕವರಿ ಏಜೆಂಟ ನೌಕರಿ ಕೊಡಿಸುವುದಾಗಿ ನಂಬಿಸಿ ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿ ಮತ್ತು ಸಾಕ್ಷಿದಾರ ಜನರಿಂದ ಒಟ್ಟು 8,03,000=00 ರೂಪಾಯಿ ಇಸಿದುಕೊಂಡು ನೌಕರಿ ಕೊಡಿಸದೇ ಹಣವನ್ನು ಮರಳಿ ಕೊಡದೆ ಮೋಸ ವಂಚನೆ ಮಾಡಿದ ಅಪರಾಧಿಕ ನಂಬಿಗೆ ದ್ರೋಹ ಎಸಗಿದ ಅಪರಾಧ.	-	ಸಿ.ಸಿ ನಂಬರ 2353/2021 ಮುದ್ದತ ದಿನಾಂಕ:- 28.12.2021
2	2018	ಬಾಗಲಕೋಟ ಶಹರ	147/2018 ಕಲಂ: 406,420, 465,468,511 ಐಪಿಸಿ ವರದಿ ದಿನಾಂಕ 27/08/2018	ಶ್ರೀ ಎಸ್. ಎ. ಮುಕರಿ ಪಿಎಸ್.ಐ (ಕಾ.ಸು) ಬಾಗಲಕೋಟ ಶಹರ ಪೊಲೀಸ ಠಾಣೆ	1) ಬಸವರಾಜ ಭೀಮಪ್ಪ ಹೂಗಾರ ಸಾ: ಲಕ್ಷ್ಮೀ ನಗರ ಬಾಗಲಕೋಟೆ 2) ಶಿವಕುಮಾರ ಮೇತ್ರಿ ಸಾ: ಚಂದನಹಳ್ಳಿ ತಾ: ಹುಮನಾಬಾದ ಜಿ: ಬೀದರ 3) ಮಹ್ಮಸಾಬ ಅಲ್ಲಾಸಾಬ ಬಾಗವಾನ ಸಾ: ಕುಟಕನಕೇರಿ ತಾ: ಬದಾಮಿ	ಇದರಲ್ಲಿ ಆರೋಪಿತರಾದ 1) ಬಸವರಾಜ ತಂದೆ ಭೀಮಪ್ಪ ಹೂಗಾರ ಹಾಗೂ 2) ಶಿವಕುಮಾರ ಮೇತ್ರಿ, ನೇದವರು ಕೂಡಿ ಸರಕಾರದಿಂದ ಯಾವುದೇ ನೇಮಕಾತಿ ಆದೇಶ ಇಲ್ಲದಿದ್ದರೂ ಸಹ ಸದರಿಯವರು ಜನರ ಕಡೆಯಿಂದ ಹಣ ಇಸಿದುಕೊಂಡು ಡಿ ದರ್ಜೆಯ ದಿನಗೂಲಿ ನೌಕರರಲ್ಲದವರಿಗೆ ಡಿ ದರ್ಜೆಯ ಖಾಯಂ ಸರಕಾರಿ ನೌಕರಿಯನ್ನು ಕೊಡಿಸುವದಾಗಿ ನಂಬಿಸಿ, ವಂಚನೆ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಜನರಿಗೆ ಮತ್ತು ಸರಕಾರಕ್ಕೆ ಮೋಸ ಹಾಗೂ ಅಪರಾಧಿಕ ನಂಬಿಕೆ ದ್ರೋಹ ಮಾಡಲು ಪ್ರಯತ್ನಿಸುತ್ತಿದ್ದಾಗ	-	ಸದರ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.
						ಆರೋಪಿ ನಂ 01 ನೇದ್ದವನು ಸಿಕ್ಕಿದ್ದು ಆರೋಪಿ ನಂ 02 ನೇದ್ದವನು ಓಡಿ ಹೋದ ಬಗ್ಗೆ ದಾಖಲಾಗಿದ್ದು ಇರುತ್ತದೆ.		

3	2018	ಬಾಗಲಕೋಟ ಶಹರ	180/2018 ಕಲಂ: 417.420. 465.468.471 ಐಪಿಸಿ ದಿನಾಂಕ:- 24.11.2018	ಕೇಶವಮೂರ್ತಿ ತಂದೆ ಗೋಪಣ್ಣ ನಾಯಕ ಸಾ: ಬಾಗಲಕೋಟ ರೇಲ್ವೇ ಸ್ಟೇಷನ್ ಹತ್ತಿರ.	1) ಶೇಖರ ಹನಮಂತಪ್ಪ ಸಾಲಿಮನಿ ಸಾ; ನವನಗರ	ಇದರಲ್ಲಿಯ ಪಿರ್ಯಾದಿದಾರರು ಶ್ರೀ ರೇಣುಕಾದೇವಿ ಎಸ್.ಸಿ/ಎಸ್.ಟಿ ಶಿಕ್ಷಣ ಸಂಸ್ಥೆ ಹೊಳೆಆಲೂರದ ಅಧ್ಯಕ್ಷರು ಇದ್ದು ದಿನಾಂಕ:- 18.07.2012 ರಂದು ಪಿರ್ಯಾದಿದಾರರು ಸದರ ಸಂಸ್ಥೆಯ ಮಾಲಿಕತ್ವವನ್ನು ಖರೀದಿ ವಚನ ಪತ್ರದ ಪ್ರಕಾರ 22.20.251=00 ರೂಗಳಿಗೆ ಮಾರಾಟ ಮಾಡಿದ್ದು ಸದರ ಹಣವನ್ನು 1 ವರ್ಷದ ಒಳಗಾಗಿ ಆರೋಪಿತನು ಪಿರ್ಯಾದಿಗೆ ಕೊಡುವಂತೆ ಕರಾರು ಪತ್ರದಲ್ಲಿ ನಮೂದಿಸಿದ್ದು ಮತ್ತು ಶಿಕ್ಷಕ ಮತ್ತು ಶಿಕ್ಷಕೇತರ ಎರಡು ಹುದ್ದೆಗಳನ್ನು ಪಿರ್ಯಾದಿದಾರರು ಹೇಳಿದವರಿಗೆ ಸಂಸ್ಥೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕು ಅಂತಾ ನಮೂದಿಸಿದ್ದು ಆದರೆ ಆರೋಪಿತರು ಸದರ ಹಣವನ್ನು ಇಲ್ಲಿಯವರೆಗೆ ಪಿರ್ಯಾದಿದಾರರಿಗೆ ಕೊಡದೇ ಮತ್ತು ಪಿರ್ಯಾದಿದಾರು ಹೇಳಿದ ಎರಡು ಹುದ್ದೆಗಳನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಮೋಸ ಮಾಡಿದ್ದು ಅಲ್ಲದೇ ಪಿರ್ಯಾದಿಗೆ ಮೊಸ ಮಾಡುವ ಉದ್ದೇಶದಿಂದ ಸದರ ಸಂಸ್ಥೆಯ ಸದಸ್ಯತ್ವ ಮಂಡಳಿಯನ್ನು ತಾನೇ ಬದಲಾಯಿಸಿ ಸಂಸ್ಥೆಗೆ ಸಂಬಂಧಪಟ್ಟ ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ಪಿರ್ಯಾದಿದಾರರ ಖೊಟ್ಟಿ ಸಹಿ ಮಾಡಿ ಸರ್ಕಾರದಿಂದ ಸದರ ಸಂಸ್ಥೆಗೆ ಬರಬೇಕಾದ ಅನುದಾನದ ಹಣವನ್ನು ತಾನೇ ತೆಗೆದುಕೊಂಡು ಮೋಸ ವಂಚನೆ ಮಾಡಿದ ಅಪರಾಧ.	-	ಹದ್ದಿ ಆಧಾರದ ಮೇಲೆ ರೋಣ ಪೊಲೀಸ ಠಾಣೆಗೆ ವರ್ಗಾವಣೆಯಾಗಿದ್ದು ಇರುತ್ತದೆ.
4	2018	ಬದಾಮಿ	200/2018 ಕಲಂ: 420 465 ಐಪಿಸಿ ವರದಿ ದಿನಾಂಕ 08/09/2018	ಶ್ರೀ ಆಡಿವೆಪ್ಪ ತಂದೆ ಕಕ್ಕಣ್ಣ ಪಾವ್ಪೋಜಿ ಸಾ: ನೀರಲಕೇರಿ ತಾ:ಬಾದಾಮಿ	ಅರ್ಜುನ ತಂದೆ ಗದಿಗೆಪ್ಪ ಗುಡ್ಡದ ಸಾ: ಕಲಹಾಳ ತಾ:ರಾಮದುರ್ಗ	ನಮೂದ ಮಾಡಿದ ಆರೋಪಿತನು ದಿನಾಂಕ: 31/07/2017 ರಂದು ಪಿರ್ಯಾಧಿಗೆ ನಾನು ಸಿಎಂ ಸಿದ್ದರಾಮಯ್ಯ ಇವರ ಪಿಎ ಇದ್ದೇನೆ ನಿನಗೆ ಸಿಡಿಪಿಓ ನೌಕರಿ ಕೊಡಿಸುತ್ತೇನೆಂದು ಸುಳ್ಳು ಹೇಳಿ ನಂಬಿಸಿ ಪಿರ್ಯಾಧಿಯಿಂದ ಚೆಕ್ಕ ಮುಖಾಂತರ 9,99,985/-ರೂ ಹಣ ಪಡೆದು ನೌಕರಿ ಕೊಡಿಸದೇ ಪರ್ತ ಹಣ ಕೊಡದೇ	-	ಸಿಸಿ ನಂ. 13/2020 ದಿನಾಂಕ; 30/12/2021

						ಮೋಸ ಮಾಡಿದ ಬಗ್ಗೆ ನಮೂದ ಅದೆ.		
5	2018	ನವನಗರ ಠಾಣೆ ಬಾಗಲಕೋಟ	ಗುನ್ನೆ ನಂ: 238/2018 ಕಲಂ-420 ಐಪಿಸಿ ದಿನಾಂಕ: 13.11.2018	ಸಂತೋಷ ತಂದೆ ಭೀಮರಾಯ ಮುಳಸಾವಳಗಿ ವಯಾ-33 ವರ್ಷ ಸಾ: ಬಾಗಲಕೋಟ ವಿದ್ಯಾಗಿರಿ	1) ಪರಶ್ಯರಾಮ ಕೃಷ್ಣಾ ಶಿಂದೆ ಸಾ:ಕಾಗವಾಡ ತಾ:ಅಥನಿ	ಇದರಲ್ಲಿ ನಮೂದ ಮಾಡಿದ ಆರೋಪಿತನಾದ ಪರಶುರಾಮ ತಂದೆ ಕೃಷ್ಣಾ ಶಿಂದೆ ಸಾ:ಕಾಗವಾಡ ಇತನು ತಮ್ಮ ಶ್ರೀ ಸಾಯಿ ಎಜುಕೇಶನ್ & ರೂರಲ್ ಡವಲಪ್‌ಮೆಂಟ್ ಸೊಸೈಟಿಯಲ್ಲಿ ಪಿರ್ಯಾದಿಗೆ ಕ್ಲರ್ಕ ಕೆಲಸ ಕೊಡಿಸುವುದಾಗಿ ನಂಬಿಸಿ ಆವರಿಂದ 2.10.000=0 ರೂಪಾಯಿ ಹಣ ಪಡೆದು ಪಿರ್ಯಾದಿಗೆ ಕೆಲಸ ಕೊಡದೇ ಮರಳಿ ಹಣ ನೀಡದೇ ಮೊಸ ಮಾಡಿದ ಅಪರಾಧ.	--	ದಿನಾಂಕ 02-03-2020 ರಂದು ಮಾನ್ಯ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿ ಸಲ್ಲಿಸಿದ್ದು ಇರುತ್ತದೆ.
6	2018	ಜಮಖಂಡಿ ಶಹರ	30/2018 ಕಲಂ 420 466 468 471 ಐಪಿಸಿ ವರದಿ ದಿನಾಂಕ 21/02/2018	ರಾಘವೇಂದ್ರ ತಂದೆ ಮಹಾಆದೇವ ಅಂಬಲಿ ಸಾ: ಹುನ್ನೂರ	ವಿಕಾಶ ತಂದೆ ಈಶ್ವರಯ್ಯ ಹಿರೇಮಠ ಸಾ: ಕಣಬರಗಿ ತಾ: ಬೆಳಗಾವಿ	ನಮೂದಿಸಿದ ಆರೋಪಿತನು ಫೀರ್ಯಾದಿ ಮತ್ತು ಆವನ 14-15 ಜನರ ಗೆಳೆಯರಿಗೆ ಆರ್ಮಿ ನೌಕರಿ ಮಾಡಿಸುವುದಾಗಿ ನಂಬಿಸಿ ಪ್ರತಿಯೊಬ್ಬರಿಗೆ 4 ಲಕ್ಷ ರೂಗಳಂತೆ ಮಾತಾಡಿ ಆವರಿಂದ ಮುಂಗಡವಾಗಿ 10 ಸಾವಿರ ರೂಗಳನ್ನು ಪಡೆದುಕೊಂಡು ಮತ್ತು ಇನ್ನು ಹಲವಾರು ಜನರಿಗೆ ಖೊಟ್ಟಿ ಆರ್ಡರ್ ಕಾಫೀ ತೋರಿಸಿ ಮೋಸ ಮಾಡಿದ ಆಪರಾದ	-	ಸಿಸಿ ನಂ.32/18 ಅಬೇಟ್ ದಿ:8/11/2019
7	2018	ಜಮಖಂಡಿ ಶಹರ	119/2018 ಕಲಂ 420 504 506(2) ರೆ/ವು 34 ಐಪಿಸಿ ವರದಿ ದಿನಾಂಕ 10/08/2018	ಸದಾನಂದ ರಾಜಗಗೊಂಡ ಬಿರಾದಾರ ಸಾ: ಜಮಖಂಡಿ ಸಿದ್ರಾಮೇಶ್ವರ ಕಾಲನಿ ಜಮಖಂಡಿ	1)ಸದಾನಂದ ಕೆ ಕೆಂಚಪ್ಪಗೋಳ 2)ರವಿ ಕೆಂಚಪ್ಪಗೋಳ ಸಾ: ಇಬ್ಬರೂ ಪಡೆಸುರ ತಾಃ ನವಲಗುಂದ	ನಮೂದಿಸಿದ ಆರೋಪಿ 1 ನೇದವನು ನೌಕರಿ ಹಿಡಿಯುವ ಪ್ರಯತ್ನದಲ್ಲಿದ್ದ ಫಿರ್ಯಾದಿದಾರನಿಗೆ ಸಂಬಂದಿಕ ಮದುವೆಗೆ ಬಂದಾಗ ಆವನಿಗೆ ಬೆಟ್ಟಿಯಾಗಿ ತನಗೆ ಸಾಕಷ್ಟು ಪ್ರಭಾವಿ ವ್ಯಕ್ತಿಗಳ ಪರಿಚಯ ಇದ್ದು ನಿನಗೆ ಅಬಕಾರಿ ಉಪ ನಿರೀಕ್ಷಕ ಹುದ್ದೆಗೆ ನೇಮಕ ಮಾಡಿಸುತ್ತೇನೆ ಅಂತಾ ನಂಬಿಸಿ ಸುಳ್ಳು ಭೆವಸೆ ನೀಡಿ ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿಯನ್ನು ಜಮಖಂಡಿಯಲ್ಲಿ ಫೇಬ್ರುವರಿ 2017 ರಲ್ಲಿ 5 ಲಕ್ಷ ರೂಗಳನ್ನು ನಂತರ ಫೋನ ಮಾಡಿ ನೌಕರಿಯ ಲಿಸ್ಟ ಪ್ರಕಟವಾಗುವದಿದೆ ಅಂತಾ	-	ಪಿಸಿ ನಂಬರ: 11/2018 ಬಿ ಫಾಲ್ಸ 11.02.2019 ರಂದು ಆಗಿರುತ್ತದೆ
						ಹೇಳಿ ಆರೋಪಿನಂಬರ 2 ನೇದವನ ಬ್ಯಾಂಕ ಖಾತೆಗೆ 4 ಲಕ್ಷ ರೂಗಳನ್ನು ಹಾಕಿಸಿಕೊಂಡಿದ್ದಲ್ಲದೇ ನಂತರ ಸಪ್ಟಂಬರ್ 2017		

						ರಲ್ಲಿ ಉಳಿದಹಣ ಕೊಟ್ಟರೆ ನಿನಗೆ 15 ದಿವಸದಲ್ಲಿ ನೌಕರ ನೇಮಾತಿ ಆದೇಶ ಕೊಡಿಸುವುದಾಗಿ ಹೇಳಿ 4.50.000/-ರೂಗಳನ್ನು ತೆಗೆದುಕೊಂಡು ಹೋಗಿ ಇವರಿಬ್ಬರೂ ಕೂಡಿ ಓಗೆ ಒಟ್ಟು 13.50.000 ರೂಗಳನ್ನು ಫಿರ್ಯಾದಿಯಿಂದ ಪಡೆದುಕೊಂಡು ಮೋಸ ಮಾಡಿದ್ದಲ್ಲದೇ ಇದನ್ನು ಕೇಳಿದ ಅವನಿಗೆ ಫೋನ ಮುಖಾಮತರ ಹಲ್ಕಟ್ ಬೈದು ಜೀವದ ಧಮಕಿ ಹಾಕಿದ ಅಪರಾಧ		
8	2019	ಬಾಗಲಕೋಟ ಶಹರ ಠಾಣೆ	41/2019 ಕಲಂ: 420 ಐಪಿಸಿ ದಿನಾಂಕ:- 27.05.2019	ಸಂಜು ತಂದೆ ಭೀಮರಾವ್ ಶಕ್ತಿ ಸಾ: ಬಾಗಲಕೋಟ ಜಯನಗರ.	1) ದಿಲೀಪ ಅಡಿವೇಪ್ಪ ಗಸ್ತಿ ಸಾ: ಮುಧೋಳ	ನಮೂದು ಮಾಡಿದ ಆರೋಪಿತನು ಪಿರ್ಯಾದಿ ಹಾಗೂ ಸಾಕ್ಷಿದಾರನಿಗೆ ರೇಲ್ವೆ ಇಲಾಖೆಯಲ್ಲಿ "ಡಿ" ದರ್ಜೆ ನೌಕರಿ ಕೊಡಿಸುವುದಾಗಿ ನಂಬಿಸಿ ಮೋಸ ಮಾಡುವ ಉದ್ದೇಶದಿಂದ ಪಿರ್ಯಾದಿ ಹಾಗೂ ಸಾಕ್ಷಿದಾರನ ಕಡೆಯಿಂದ ರೋಖ ಹಣ ಮತ್ತು ತನ್ನ ಹೆಂಡತಿಯ ಹೆಸರಿನಲ್ಲಿದ ಬ್ಯಾಂಕ ಖಾತೆಗೆ ಒಟ್ಟು 11.01.000/- ರೂಪಾಯಿಗಳನ್ನು ಜಮಾ ಮಾಡಿಸಿಕೊಂಡು ನೌಕರಿ ಕೊಡಿಸದೇ ಮತ್ತು ಮರಳಿ ಹಣ ಕೊಡದೇ ಮೋಸ ಮಾಡಿದ ಅಪರಾಧ.	-	ಸದರ ಪ್ರಕರಣದಲ್ಲಿ ಆರೋಪಿತನು ಪತ್ತೆ ಆಗದರಿಂದ ತುರ್ತಕ್ಕೆ 'ಸಿ' ನಾಪತ್ತೆ ಅಂತಾ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ.
9	2019	ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ ಬಾಗಲಕೋಟ	12/2019 ಕಲಂ 406 420 506 ರೆ.ವು 34 ಐಪಿಸಿ ವರದಿ ದಿನಾಂಕ 09/05/2019	ಯಮನಪ್ಪ ತಂದೆ ಬಸಪ್ಪ ದೂಪದಾಳ ವಯಾ 59 ವರ್ಷ ಸಾ॥ ಆಸಂಗಿ ತಾ॥ ಜಮಖಂಡಿ ಜಿಲ್ಲೆ ಬಾಗಲಕೋಟೆ	1)ಅಣ್ಣಾಸಾಹೇಬ ತಂದೆ ಚೋಳಪ್ಪ ಕುರಣಿ ಸಾ॥ ಸಿದ್ದಾಪೂರ ತಾ॥ ರಾಯಭಾಗ 2) ರವಿಕುಮಾರ ಬಸವರಾಜ ಅಸೂಟಿ ಸಾ॥ ನಾರಾಯಣಪೂರ 2 ಮೇನ್ ರೋಡ ಧಾರವಾಡ 3) ಇನಾಯತ ತಂದೆ	ನಮೂದು ಮಾಡಿದ ಆರೋಪಿ ನಂಬರ 1 ರಿಂದ 6 ನೇದ್ದವು ಕೂಡಿಕೊಂಡು ಏಕೋದ್ದೇಶದಿಂದ ಇದರಲ್ಲಿಯ ಫಿರ್ಯಾದಿಯ ಮಕ್ಕಳಿಗೆ ಪಿ.ಎಸ್.ಐ ಮತ್ತು ಸಬ್ ರಜಿಸ್ಟರ ಸರಕಾರಿ ಹುದ್ದೆ ಕೊಡಿಸುವುದಾಗಿ ಫಿರ್ಯಾದಿಗೆ ಸುಳ್ಳು ಹೇಳಿ ನಂಬಿಸಿ ರಬ್ ರಜಿಸ್ಟರ ಹುದ್ದೆಗೆ 60.00.000/- ರೂಪಾಯಿ ಹಾಗೂ ಪಿ.ಎಸ್.ಐ ಹುದ್ದೆಗೆ 50.00.000/- ರೂ ಕೊಡಬೇಕಂದು ಫಿರ್ಯಾದಿಜೊತೆಗೆ ಒಪ್ಪಂದ ಮಾಡಿಕೊಂಡು ಫಿರ್ಯಾದಿ ಹಾಗೂ ಸಾಕ್ಷಿದಾರರಿಂದ 51.50.000/- ರೂಪಾಯಿಗಳನ್ನು ಮುಂಗಡವಾಗಿ ಪಡೆದುಕೊಂಡು ಸರಕಾರಿ	-	ಸಿಸಿ ನಂಬರ 77/2020

					ಜಲ್ಲಿತಸಾಹೇಬ ಮಕನದಾರ ಸಾ॥ಎ.ಪಿ.ಎಮ್.ಸಿ ಯಾರ್ಡ ಮೃತ್ಯುಂಜಯ ನಗರ ಧಾರವಾಡ 4) ದುರುದುಂಡೆಶ್ವರ ರಾಚಪ್ಪ ಉಳವಿ ಸಾ॥ಲಿಂಗನಮಕ್ಕಿ ತಾ॥ಖಾನಾಪೂರ ಜಿಲ್ಲೆ ಬೆಳಗಾವಿ 5) ಸಂಗಪ್ಪ ರಾಚಪ್ಪ ಉಳವಿ ಸಾ॥ ಲಿಂಗನಮಕ್ಕಿ ತಾ॥ ಖಾನಾಪೂರ ಜಿಲ್ಲೆ॥ ಬೆಳಗಾವಿ 6) ತಿಪ್ಪೆಸ್ವಾಮಿ ಭುತನ್ನ, ಸಾ॥42 ಮೇನ್ ಕ್ರಾಸ್ ವಿನಾಯಕನಗರ ಲಿಂಗದಾರಹಳ್ಳಿ ಬೆಂಗಳೂರು.	ನೌಕರಿ ಕೊಡಿಸದೇ ಮೋಸ ಮಾಡಿ ಕೆಲಸ ಆಗಿರುವುದಿಲ್ಲ ಅಂತಾ ನೆಪ ಹೇಳಿ ಮುಂಗಡವಾಗಿ ಪಡೆದುಕೊಂಡ ಹಣದಲ್ಲಿ ಫಿರ್ಯಾದಿಗೆ 21,00,000/- ರೂಪಾಯಿ ವಾಪಾಸ ಕೊಟ್ಟು ಉಳಿದ 30.50.000/- ರೂಪಾಯಿ ಹಣವನ್ನು ವಾಪಸ ಕೊಡದೇ ಮತ್ತು ಫಿರ್ಯಾದಿ ಮಗನ ಶೈಕ್ಷಣಿಕ ದಾಖಲಾತಿಗಳನ್ನು ಕೊಡದೇ ವಂಚನೆ ಮಾಡಿದ್ದು. ಅಲ್ಲದೇ ಉಳಿದ ಹಣ ಹಾಗೂ ಶೈಕ್ಷಣಿಕ ದಾಖಲಾತಿಗಳನ್ನು ವಾಪಸ್ ಕೊಡುವಂತೆ ಕೇಳಲು ಹೋದ ಫಿರ್ಯಾದಿ ಹಾಗೂ ಆತನ ಮನೆಯ ಜನರಿಗೆ ಜೀವ ಬೆದರಿಕೆ ಹಾಕಿದ ಅಪರಾಧ.		
10	2019	ತೇರದಾಳ	75/19 ಕಲಂ 120(ಎ), 120(ಬಿ) 197, 198, 403, 409, 417, 418, 420, 426, 427, 465, 467, 468, 471, 472, 474,	ಶಾನೂರ ಮೂಕಪ್ಪ ಗಾಡಿವಡ್ಡರ ವಯಾ 30 ವರ್ಷ ಸಾ॥ ಹನಗಂಡಿ	1] ಬಸವರಾಜ ಭೀಮಪ್ಪ ಗಾಯಕವಾಡ ವಯಾ 45 ವರ್ಷ 2] ಜ್ಯೋತಿ ಗಂಡ ಬಸವರಾಜ ಗಾಯಕವಾಡ ವಯಾ 38 ವರ್ಷ ಸಾ॥ ಇಬ್ಬರೂ ಲಕ್ಷ್ಮೀ ನಗರ ಬನಹಟ್ಟಿ	ಫಿರ್ಯಾದಿದಾರನು ಆರೋಪಿತರ ಶಾರದಾ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವಾಗ ನಿನಗೆ ಪದವಿಧರ ಸರ್ಟಿಫಿಕೇಟಗಳನ್ನು ಕೊಡಿಸುತ್ತೇವೆ ಅಂತಾ ಮನವೊಲಿಸಿ ಅವನಿಂದ ಹಣಪಡೆದು ನ್ಯೂ ಡೆಲ್ಲಿಯ ಡೀಮ್ಡ ಯೂನಿವರ್ಸಿಟಿಯಿಂದ ನಕಲಿ ಪದವಿ ಸರ್ಟಿಫೀಕೇಟಗಳನ್ನು ಕೊಡಿಸಿ ಈ ಸರ್ಟಿಫೀಕೇಟಗಳ ಸಹಾಯದಿಂದ ಪಿಎಸ್ಐ ಮಾಡಿಸುತ್ತೇನೆ, ಅಬಕಾರಿ ಪಿಎಸ್ಐ ಮಾಡಿಸುತ್ತೇನೆ ಇಂಡಿಯನ್ ಏರ್.ಲೈನ್ಸದಲ್ಲಿ	-	ಸದರಿ ಪ್ರಕರಣದಲ್ಲಿಯ ಫಿರ್ಯಾದಿಯು ನಮ್ಮ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು ಇರುತ್ತದೆ ಅಂತಾ ಆರೋಪಿತರು ಮಾನ್ಯ ಉಚ್ಚ ನ್ಯಾಯಾಲಯದಿಂದ ಕ್ರಿಮಿನಲ್ ಪೆಟಿಶನ್ ನಂ- 100369/2020

			506, ರೆ/ವ 34 ಐಪಿಸಿ ದಿನಾಂಕ 01.10.2019			ಸುಪರವೈಜರ ಹುದ್ದೆ ಕೊಡಿಸುತ್ತೇನೆ ಅಂತಾ ನಂಬಿಸಿ ಕೊಟ್ಟೆ ದಾಖಲೆಗಳನ್ನು ಸೃಷ್ಟಿಸಿ ಫಿರ್ಯಾದಿ ಕಡೆಯಿಂದ 24,50,000/- ರೂ.ಗಳನ್ನು ಪಡೆದುಕೊಂಡು ಮೋಸ ಮಾಡಿದ ಅಪರಾಧ		ದಿನಾಂಕ: 31.08.2 20 ನೇದ್ದರಲ್ಲಿಯ ತನಿಖೆ ನಡೆಸದಂತೆ ತಡೆಯಾಜ್ಞೆ ಮಾಡಿದ್ದು ಇರುತ್ತದೆ. ಮಾನ್ಯ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತೆರವುಗೊಳಿಸುವಂತೆ ಕೊನೆಯದಾಗಿ ದಿನಾಂಕ: 21.04.2021 ರಂದು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಢಕ್ಕೆ ವಿನಂತಿಸಿಕೊಂಡಿದ್ದು ಅದೆ.
11	2020	ನವನಗರ ಠಾಣೆ ಬಾಗಲಕೋಟ	32/2020 ಕಲಂ-420, 323, 504, 506 ಐಪಿಸಿ ವರದಿ ದಿನಾಂಕ 11/03/2020	ಶ್ರೀಮತಿ ಸುಖದೇವಿ ಗಂಡ ಅಶೋಕ ಚೆಲ್ಲಾ ವಯಾ-40 ವರ್ಷ ಜಾತಿ:ಹಿಂದೂ ಲಿಂಗಾಯಿತ	1) 1) ರಾಘವೇಂದ್ರ ನಾಗೂರ ಸಾ: ಬಾಗಲಕೋಟ	ಇದರಲ್ಲಿ ನಮೂದಿಸಿದ ಆರೋಪಿತನಾದ ರಾಘವೆಂದ್ರ ನಾಗೂರ ಸಾ:ಬಾಗಲಕೋಟ ಇತನು ಇದರಲ್ಲಿ ಫಿರ್ಯಾದಿದಾರಳ ಗಂಡನಾದ ಅಶೋಕ ತಂದೆ ಶಂಕರೆಪ್ಪ ಚೆಲ್ಲಾ ಇತನಿಗೆ ನಿನ್ನ ಮಗನಿಗೆ ಡಿಸಿಸಿ ಬ್ಯಾಂಕನಲ್ಲಿ ನೌಕರಿ ಕೊಡಿಸುವುದಾಗಿ ನಂಬಿಸಿ ಹೇಳಿ ಫಿರ್ಯಾದಿ ಗಂಡನಿಂದ 4,00,000/- ರೂ ಪಡೆದಿದ್ದು ಅಲ್ಲದೆ ಫಿರ್ಯಾದಿ ಗಂಡ ಅಶೋಕ ಚೆಲ್ಲಾ ಇವನ ಪರಿಚಯದವರಿಗೆ ನೌಕರಿ ಕೊಡಿಸುವುದಾಗಿ ಹೇಳಿ ಹೀಗೆ ಒಟ್ಟು 24,50,000/- ರೂಗಳನ್ನು ತಗೆದುಕೊಂಡು ನೌಕರಿಯನ್ನು ಕೊಡಿಸದೇ ಇದ್ದರಿಂದ ಫಿರ್ಯಾದಿ ಗಂಡನು ಹಣ ಮರಳಿ ನೀಡಲು ಕೇಳಿದ್ದಕ್ಕೆ ಫಿರ್ಯಾದಿ ಗಂಡನಿಗೆ ಕೈಯಿಂದ ಹೊಡಿಬಡಿ ಮಾಡಿ, ಹಲ್ಕಟ್ ಬೈದು ಜೀವದ ಜೆದರಿಕೆ ಹಾಕಿದ್ದು ಅಲ್ಲದೆ ಮರಳಿ ಹಣವನ್ನು ನೀಡದೇ ಮೋಸ ಮಾಡಿದ ಅಪರಾಧ.	-	ಸಿಸಿ ನಂ 2304/2021 ದಿನಾಂಕ 24-12-2021

12	2021	ಬಿಜಿಕೆ ಶಹರ	48/2021 ಕಲಂ: 420, 504, 506 ಐಪಿಸಿ ದಿನಾಂಕ:- 23.08.2021	ತೌಸಿಫ್ ತಂದೆ ಫಕ್ಕೀರಸಾಬ ಬಾಗವಾನ ವಯಾ: 25 ವರ್ಷ, ಜಾತಿ: ಮುಸ್ಲಿಂ, ಉದ್ಯೋಗ: ಖಾಸಗಿ ನೌಕರಿ ಸಾ॥ ಗುಳೇದಗುಡ್ಡ ಹಾಲಿ ವಸ್ತಿ ಸೆಕ್ಟರ ನಂ 38 ಪ್ಲಾಟ ನಂ 175ಸಿ ನವನಗರ ಬಾಗಲಕೋಟ	ಎ1) ಪ್ರಕಾಶ ಚನ್ನದಾಸರ ಸಾ: ಮುಧೋಳ ಎ2) ಸಂತೋಷ ಬಡಿಗೇರ ಸಾ: ಒಡಕಲ್ ಜಿ: ಬೆಳಗಾವಿ	ಇದರಲ್ಲಿ ನಮೂದ ಮಾಡಿದ ಆರೋಪಿತರಾದ ಪ್ರಕಾಶ ಚನ್ನದಾಸರ ಈತನು ತನ್ನ ವ್ಯಾಟ್ಸಆಪ್ ಗ್ರೂಪ್‌ದಲ್ಲಿ ಕೆ.ಇ.ಬಿ ನೌಕರಿ ಮತ್ತು ಇತರೇ ಇಲಾಖೆಯಲ್ಲಿ ನೌಕರಿ ಕೊಡಿಸುತ್ತೇನೆ ಅಂತಾ ಜಾಹೀರಾತು ನೀಡಿ ಫಿರ್ಯಾದಿದಾರರಿಂದ ಒಟ್ಟು 66.000/- ರೂಗಳನ್ನು ಹಾಗೂ ಸಾಕ್ಷಿದಾರ ಆರ್.ಡಿ ಬಾಬು ಇವರಿಂದ 1.84.200/- ರೂಗಳನ್ನು ಕೆನರಾ ಬ್ಯಾಂಕ ಹಾಗೂ ಫಿರ್ಯಾದಿಯ ಮೋಬೈಲ್ ನಂಬರ 8867952862 ಹಾಗೂ ಸಾಕ್ಷಿದಾರ ಮೋಬೈಲ ನಂಬರ 9069535500 ನೇದ್ದವುಗಳಿಂದ ಫೋನ್ ಪೇ ಮುಖಾಂತರ ಹಣವನ್ನು ಪಡೆದು ಫಿರ್ಯಾದಿಗೆ ನೌಕರಿಯನ್ನು ಕೊಡಿಸದೇ ಮೋಸ ಮಾಡಿದ್ದು ಅಲ್ಲದೇ ಅದನ್ನು ಕೇಳಲು ಹೋದ ಫಿರ್ಯಾದಿ ಹಾಗೂ ಸಾಕ್ಷಿದಾರ ದುರ್ಗೇಶ ಮಾದರ ಇವರು ಆರೋಪಿ ಪ್ರಕಾಶ ಚನ್ನದಾಸರ ಈತನಿಗೆ ಕೇಳಲು ಹೋದಾಗ ಅವಾಚ್ಯವಾಗಿ ಬೈದಾಡಿ, ನಿಮಗೆ ಖಲಾಸ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ ಅಪರಾಧ.	-	ತನಿಖೆಯಲ್ಲಿರುತ್ತದೆ.
13	2021	ಅಮೀನಗಡ	ಗುನ್ನಾ ನಂಬರ: 74/2021 ಕಲಂ: 420 ಐಪಿಸಿ. ವರದಿ ದಿನಾಂಕ: 04/07/2021	ಮಹೇಶ ತಂದೆ ಮೀನಾಕ್ಷಪ್ಪ ನರಸನ್ನವರ ಸಾ: ವಡಗೇರಿ	ಸಂತೋಷ @ ಸಂತೋಷಕುಮಾರ ತಂದೆ ಸಿದ್ದಪ್ಪ ಬಡಿಗೇರ ವಯಾ: 34 ವರ್ಷ, ಸಾ: ಇಟ್ನಾಳ, ತಾ: ರಾಯಭಾಗ	ನಮೂದು ಮಾಡಿದ ಆರೋಪಿತನು ಫಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ 2,50,000=00 ರೂ ಹಣ ಕೊಟ್ಟರೇ ಹೆಸ್ಕಾಂನಲ್ಲಿ ಗ್ಯಾಂಗ್ ಮ್ಯಾನ್ ಅಥವಾ ಪವರ್‌ಮ್ಯಾನ್ ಅಸಿಸ್ಟಂಟ್ ನೌಕರಿ ಕೊಡಿಸುವುದಾಗಿ ಫಿರ್ಯಾದಿಗೆ ನಂಬಿಸಿ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ತನ್ನ ಖಾತೆ ನಂ: 110110110034296 ನೇದ್ದಕ್ಕೆ ದಿನಾಂಕ: 06/01/2021 ರಂದು ಕವಿಜಿಬಿ.ಫಿರ್ಯಾದಿ ಖಾತೆ ನಂ:	-	ತನಿಖೆಯಲ್ಲಿದೆ

						89098627639 ಇದರಿಂದ 2,50,000=00 ರೂ ಹಣವನ್ನು ಜಮಾ ಮಾಡಿಸಿಕೊಂಡು ಇದುವರೆಗೂ ಪಿರ್ಯಾದಿಗೆ ಯಾವುದೇ ನೌಕರಿ ಕೊಡಿಸದೇ ಹಣವನ್ನುವಾಪಸ್ ಕೊಡದೇ ಮೋಸ ಮಾಡಿದ ಅಪರಾಧ.		
14	2021	ಮುಧೋಳ	41/21 ಕಲಂ 418, 419, 420 ಐಪಿಸಿ ವರದಿ ದಿನಾಂಕ 09/03/2021	ಸಂಗಪ್ಪ ಬಾಲಪ್ಪಾ ಗವರೋಜಿ ಸಾ॥ ಮುಧೋಳ	ಸಂಜೀವ ರಾಜಶೇಖರ ಬಿರಾದಾರ ಸಾ॥ ಲೋಣಿ ತಾ॥ ಇಂಡಿ	ಇದರಲ್ಲಿ ಪಿರ್ಯಾದಿಯು ಮುಧೋಳ ರಹವಾಸಿ ಇದ್ದು ಆರೋಪಿಯು ಮುಧೋಳ ಎಚ್‌ಡಿಎಫ್‌ಸಿ ಬ್ಯಾಂಕ ಶಾಖೆ ಮುಧೋಳ ಇವರಲ್ಲಿ ಲೋನ ಆಫೀಸರ್ ಅಂತಾ ಕೆಲಸ ಮಾಡುತ್ತಿದ್ದು ಪಿರ್ಯಾದಿದಾರನು ಸದರ ಬ್ಯಾಂಕಿನಲ್ಲಿ ಹಣಕಾಸಿನ ವ್ಯವಹಾರ ಮಾಡುತ್ತಿದ್ದುದರಿಂದ ಪಿರ್ಯಾದಿದಾರನಿಗೆ ಪರಿಚಯವಾಗಿದ್ದನು. ಪರಿಸ್ಥಿತಿ ಹೀಗಿರುವಾಗ ಸರ್ಕಾರದವರು ಆ ವೇಳೆಯಲ್ಲಿ ಸನ್ 2018-19 ನೇ ಸಾಲಿನಲ್ಲಿ ಕೆ.ಪಿ.ಎಸ್.ಸಿ ಯಿಂದ ಔಷದ ನಿಯಂತ್ರಣ ಇಲಾಖೆಯಲ್ಲಿ ಖಾಲಿ ಇರುವ ಔಷದ ಪರೀಕ್ಷಕರ ಹುದ್ದೆ ಭರ್ತಿ ಮಾಡುವ ಸಂಭಂದ ಅರ್ಜಿ ಕರೆದಿದ್ದರು ಆರೋಪಿತನು ತನಗೆ ರಾಜಕೀಯ ಜನರ ಪರಿಚಯವಿದೆ ಮತ್ತು ಇಲಾಖೆಯ ದೊಡ್ಡ ಜನರ ಪರಿಚಯವಿದೆ ಅಂತಾ ಪಿರ್ಯಾದಿಗೆ ಹೇಳಿ ನಿಮ್ಮಲ್ಲಿ ಯಾರಿಗಾದರು ನೌಕರಿ ಕೊಡಸುವದಾದರೆ ಹೇಳಿ ನಾನು ಕೊಡಸುತ್ತೆನೆ ಅಂತಾ ಪಿರ್ಯಾದಿಗೆ ನಂಬಿಸಿ ಪಿರ್ಯಾದಿಯ ಇಬ್ಬರು ಸಂಭಂದಿಕರಿಗೆ ನೌಕರಿ ಕೊಡಿಸುತ್ತೆನೆ ಅಂತಾ ಮೋಸ ಮಾಡುವ ಉದ್ದೇಶದಿಂಧ ಪ್ರತಿಯೊಬ್ಬರಿಗೆ ತಲಾ 33 ಲಕ್ಷದಂತೆ ಒಟ್ಟು 66 ಲಕ್ಷ ನಗದು ಹಣವನ್ನು ಪಡೆದುಕೊಂಡು ನೌಕರಿ ಕೊಡಿಸದೇ ಇದ್ದಾಗ ಪಿರ್ಯಾದಿಯು ಕೊಟ್ಟ ಹಣವನ್ನು ಮರಳಿ ಕೇಳಿದಾಗ ಹಣವನ್ನು ಸಹ ವಾಪಸ್ಸ ಕೊಡದೇ ಪಿರ್ಯಾದಿಗೆ ಮೋಸ ಮಾಡಿದ ಅಪರಾಧ	-	ತನಿಖೆಯಲ್ಲಿದೆ

ಬೀದರ ಜಿಲ್ಲೆ

ಕ್ರ ಸಂಖ್ಯೆ	ಪೊಲೀಸ ಠಾಣೆಯ ಹೆಸರು	ಮೊ ಸಂ ಕಲಂ ಮತ್ತು ದಿನಾಂಕ	ಫಿರ್ಯಾದಿದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ	ವಂಚನೆಗೊಳಗಾದವರಿಗೆ ಹಣ ಹಿಂದುರಿಗಿಸಲಾಗಿದೆಯೆ ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
01.	ಸಂತಪೂರ ಪೊಲೀಸ ಠಾಣೆ	108/2019 ಕಲಂ 417 420 ಐಪಿಸಿ	ಗುರುನಾಥ ತಂದೆ ರಾಮಶೆಟ್ಟಿ ಬಂಬೂಳಗೆ ವಯ 24 ವರ್ಷ ಜಾತಿ ಲಿಂಗಾಯತ ಸಾ: ಜೀರ್ಗಾ(ಬಿ) ತಾ: ಔರಾದ(ಬಿ)	1] ಮಂಜುಗೌಡ ಜಿ.ವಿ. ತಂದೆ ವೆಂಕಟೇಶ ವಯ 35 ವರ್ಷ ಜಾತಿ ಗೌಡ ಸಾ: ಗೆಜ್ಜಲಗೇರೆ ಕಾಲೂನಿ ತಾ: ಮದ್ದೂರ ಜಿ: ಮಂಡ್ಯ ಸದ್ಯ ಯು-17/3 ನಂ 36 2 ನೇ ಕ್ರಾಸ ಅಂಜನೇಯ ದೇವಸ್ಥಾನ ಶೇಷಾದ್ರಿ ಪುರಂ ಬೆಂಗಳೂರು [ಆರೋಪಿತನಿಗೆ ದಿನಾಂಕ 19-07-2021 ರಂದು ದಸ್ತಗಿರಿ ಮಾಡಿ ನ್ಯಾಯಂಗ ಬಂಧನದಲ್ಲಿರುತ್ತಾನೆ) ಅಬಿಟೇಡ ಆರೋಪಿ:- 2] ವಿಲಾಸ ತಂದೆ ಅಂಬದಾಸ ಪಾಟೀಲ್ ವಯ:55 ವರ್ಷ ಜಾತಿ ಮರಾಠಾ ಉದ್ಯೋಗ ಗುತ್ತೆದಾರ ಸಾ: ಲಾಧಾ [ಆರೋಪಿತನಿಗೆ ದಿನಾಂಕ 13-04-2020 ರಂದು ಠಾಣೆಗೆ ಹಾಜರಾಗಿದ್ದಾಗ ದಸ್ತಗಿರಿ ಮಾಡಿ ನಿರೀಕ್ಷಣೆ	ಆರೋಪಿತನಾದ ಮಂಜುಗೌಡ ಜಿವಿ ತಂದೆ ವೆಂಕಟೇಸ ಸಾ: ಮದ್ದೂರ ಮಂಡ್ಯ ಜಿಲ್ಲೆ ಈತನು ಫಿರ್ಯಾದಿ ಗುರುನಾಥ ತಂದೆ ರಾಮಶೆಟ್ಟಿ ಬಂಬೂಳಗೆ ಸಾ: ಜೀರ್ಗಾ(ಬಿ) ರವರಿಗೆ 2018 ನೇ ಸಾಲಿನಲ್ಲಿ ಕೆಪಿಎಸ್‌ಸಿ ಯಿಂದ ಕರೆದಿರುವ ಅಬಕಾರಿ ಸಬ್ ಇನ್ಸಪೇಕ್ಟರ ಹುದ್ದೆಗೆ ನೌಕರಿ ಹಚ್ಚುತೇನೆ ಎಂದು ನಂಬಿಸಿ ಫಿರ್ಯಾಯಿಂದ 2 ಲಕ್ಷ ರೂ. ಪಡೆದುಕೊಂಡು ಹೋಗಿ ಮೊಸ ಮಾಡಿರುತ್ತಾನೆ. ಹಾಗೂ ಆರೋಪಿ ನಂ 02 ಈತನು ಮಂಜುಗೌಡ ಈತನಿಗೆ ಕರೆದುಕೊಂಡು ಬರುವುದಾಗಿ ಹೇಳಿ 10,000/-ರೂ ಪಡೆದುಕೊಂಡು ಹೋಗಿರುತ್ತಾನೆ.	ಎ-2 ಆರೋಪಿತನು ಪಡೆದುಕೊಂಡು ಹೋದ ನಗದು ಹಣ 10,000/-ರೂ ಜಪ್ತಿ ಮಾಡಿಕೊಂಡಿದ್ದು ಫಿರ್ಯಾದಿದಾರರಿಗೆ ನ್ಯಾಯಾಲಯದಿಂದ ಪಡೆದುಕೊಳ್ಳಲು ಮಾಹಿತಿ ನೀಡಲಾಗಿದೆ	ನ್ಯಾಯಾಲಯದ ವಿಚಾರಣೆ ಯಲ್ಲಿರುತ್ತದೆ.
				ಜಾಮೀನು ಆದೇಶ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ			

				ನ್ಯಾಯಾಲಯ ಬೀದರ ನ್ಯಾಯಾಲಯದ ಕ್ರೀ ಮಿ ನಂ 112/2020 ದಿನಾಂಕ 17-03-2020 ನೇದರಂತೆ ಜಾಮೀನು ಮೇಲೆ ಬಿಡಲಾಗಿದೆ] ಆರೋಪಿತನು ದಿನಾಂಕ 29-2021 ರಂದು ಮೃತ ಪಟ್ಟಿರುತ್ತಾನೆ			
02.	ಬಸವ ಕಲ್ಯಾಣ ನಗರ ಪೊಲೀಸ್ ಠಾಣೆ	22/2020 ಕಲಂ-420 ಐಪಿಸಿ	ಶ್ರೀ ಪೊಲರಾಜ ತಂದೆ ಶಿರೋಮಣಿ ಕಂರಂಚಿಕರ ವ-32 ವರ್ಷ ಜಾ-ಕ್ರಿಶ್ಚಯನ್ ಉ-ವಿದ್ಯಾರ್ಥಿ ಸಾ-ತಾಜ ಕಾಲೋನಿ ಬಸವಕಲ್ಯಾಣ	ಎ1-ನಾರಾಯಣ ಸಾ-ರಾಂಪೂರ ತಾ-ಬಸವಕಲ್ಯಾಣ ಎ2-ವಿನೋದ ತಂದೆ ಮಾಣಿಕಪ್ಪಾ ಹೋಸ್ಸಳ್ಳಿ ಸಾ-ಗಡವಂತಿ ಎ3-ಮಾಣಿಕಪ್ಪಾ ಹೊಸಳ್ಳಿ	ಪಿರ್ಯಾದಿದಾರರು 2014 ನೇ ಸಾಲಿನ ಪಿಎಸ್ಐ ಹುದ್ದೆಗೆ ಅರ್ಜಿ ಸಲ್ಲಿಸಿ ದೈಹಿಕ ಪರೀಕ್ಷೆಯಲ್ಲಿ ಪಾಸಾಗಿದ್ದು ಆರೋಪಿತರು ಪಿರ್ಯಾದಿಗೆ ಪಿಎಸ್ಐ ನೌಕರಿ ಕೋಡಿಸುದಾಗಿ ಹೇಳಿ ಆರೋಪಿತರ ಪೈಕಿ ಎ2-ಇತನಿಗೆ ಅಕೌಂಟಗೆ ಪಿರ್ಯಾದಾರರು ದಿನಾಂಕ-19/01/2015 ರಂದು 18 ಲಕ್ಷ ರೂಪಾಯಿ ಹಣ ಹಾಕಿರುತ್ತಾರೆ ನಂತರ ದಿನಾಂಕ-21/01/2018 ರಂದು ಎ1-& ಎ3 ರವರ ಕೈಯಲ್ಲಿ ನಗದು 2 ಲಕ್ಷ ರೂಪಾಯಿ ನೀಡಿರುತ್ತಾರೆ.ನಂತರ ಪಿರ್ಯಾದಿದಾರರಿಗೆ ಯಾವುದೇ ಸರ್ಕಾರಿ ನೌಕರಿ ಕೊಡಿಸಿರುವುದಿಲ್ಲ ಹಣವು ಸಹ ಮರಳಿ ನೀಡಿರುವುದಿಲ್ಲ.	ಇಲ್ಲಾ	ನ್ಯಾಯಾಲಯದ ವಿಚಾರಣೆ ಯಲ್ಲಿರುತ್ತದೆ.

ಬಳ್ಳಾರಿ ಜಿಲ್ಲೆ

ಕ್ರ. ಸಂ.	ಪೊಲೀಸ್ ಠಾಣೆ	ಗುನ್ನೆ ನಂ. ಮತ್ತು ಕಲಂ. ಹಾಗೂ ದಿನಾಂಕ	ಫಿರ್ಯಾದಿದಾರರ ಹೆಸರು ಮತ್ತು ವಿಳಾಸ	ಆರೋಪಿತರ ಹೆಸರು ಮತ್ತು ವಿಳಾಸ	ಪ್ರಕರಣದ ಸಾರಾಂಶ (ಕೃತ್ಯ ನಡೆದ ವಿವರ ಹಾಗೂ ವಂಚನೆ ವಿವರ ನಮೂದಿಸುವುದು)	ವಂಚನೆಗೊಳಗಾದವರಿಗೆ ಹಣ ಹಿಂದಿರುಗಿಸಲಾಗಿದೆಯೇ? ವಿವರ ನೀಡುವುದು	ಪ್ರಕರಣದ ಪ್ರಸ್ತುತ ಹಂತ
1.	ಬ್ರೂಸ್‌ಪೇಟೆ	252/2018 ಕಲಂ 420 ಐಪಿಸಿ ದಿಃ 18/08/2018 ಸಂಜೆ 04.30 ಗಂಟೆಗೆ	ಶ್ರೀ. ಸೋಮಪ್ಪ ತಂದೆ ದುರ್ಗಪ್ಪ, ವಯಸ್ಸು 52 ವರ್ಷ, ವ್ಯವಸಾಯ, ಕುರುಬರ ಜನಾಂಗ, ವಾಸಃ ಆಂಜನೇಯ ದೇವಸ್ಥಾನದ ಹತ್ತಿರ, ಬಸ್ ನಿಲ್ದಾಣದ ಹತ್ತಿರ, ಹನುಮನಹಳ್ಳಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.	ರಾಜಶೇಖರ್	ಫಿರ್ಯಾದಿದಾರರ ಮಗಳಿಗೆ ಆಪಾದಿತನು ವಿಲೇಜ್ ಅಕೌಂಟೆಂಟ್ ಸರ್ಕಾರಿ ನೌಕರಿ ಕೊಡಿಸುತ್ತೇನೆಂದು ಫಿರ್ಯಾದಿಗೆ ನಂಬಿಸಿ, ಸದರಿ ಸರ್ಕಾರಿ ಕೆಲಸಕ್ಕೆ ರೂ. 1,30,000/-ಗಳು ಹಣ ಖರ್ಚಾಗುತ್ತದೆಂದು ಫಿರ್ಯಾದಿಗೆ ತಿಳಿಸಿದ್ದು, ಆಪಾದಿತನು ತಿಳಿಸಿದಂತೆ ಫಿರ್ಯಾದಿಯು ತನ್ನ ಮಗಳೊಂದಿಗೆ ದಿನಾಂಕ: 18-08-2018 ರಂದು ಬೆಳಗ್ಗೆ:8-00 ಗಂಟೆಗೆ ಬಳ್ಳಾರಿ ನಗರದ ಹೆಡ್ ಪೋಸ್ಟ್ ಆಫೀಸ್ ಹತ್ತಿರ ರೂ. 1,30,000/-ಗಳನ್ನು ಕೊಟ್ಟಿದ್ದು, ಹಣ ಪಡೆದ ನಂತರ ಆಪಾದಿತನು ಫಿರ್ಯಾದಿಗೆ ಸ್ಟ್ಯಾಂಪ್	ಆರೋಪಿ ಪತ್ತೆಯಾಗಿರುವುದಿಲ್ಲ. ಹಾಗಾಗಿ ಹಣವನ್ನು ಹಿಂದಿರುಗಿಸಲಾಗಿರುವುದಿಲ್ಲ.	ಸಿ. ವರದಿಯನ್ನು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದೆ.
					ಪೇಪರ್ ತರುತ್ತೇನೆಂದು ಹೇಳಿ ಹೋಗಿ ನಂತರ ತನ್ನ ಪೋನ್ ನಂ: 9741624148, 80887150248 ಗಳನ್ನು ಸ್ವಿಚ್ ಮಾಡಿರುತ್ತಾನೆ. ಆಪಾದಿತನು		

					ಫಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸರ್ಕಾರಿ ನೌಕರಿ ಕೊಡಿಸುತ್ತೇನೆಂದು ಹೇಳಿ ರೂ. 1,30,000/- ಹಣ ಪಡೆದು ಮೋಸ ಮಾಡಿರುತ್ತಾನೆ ಅಂತಾ ಇತ್ಯಾದಿಯಾಗಿ ಇದ್ದ ದೂರಿನ ಮೇರೆಗೆ.		
೭.	ಕೌಲ್‌ಬಜಾರ	239/18 ಕಲಂ 120 ಬಿ. 201,406,420,465,471,468, ಆಧಾರ 34 ಐಪಿಸಿ ದಿನಾಂಕ 29/06/18 ರಂದು ಮದ್ಯಾಹ್ನ 2-00 ಗಂಟೆಗೆ	1] ವಸಂತ್ ಕುಮಾರ್ ಬಳ್ಳಾರಿ. 2] ಯಮುನಪ್ಪ 3] ಶ್ರೀಮತಿ ಭಗೀರಥಮ್ಮ 4]ವಿಜಯದುರ್ಗ ಎಲ್ಲರ ವಾಸ: ಬಳ್ಳಾರಿ	ಎನ್. ಈಶ್ವರಯ್ಯ ತಂದೆ ನಾಗಪ್ಪ ವ:73 ವರ್ಷ ವಾಸ: ಮನೆ.ನಂ 73, ವಾರ್ಡ ನಂ 29, ರಾಮಾಂಜನೇಯ ನಗರ ಬಳ್ಳಾರಿ.	ಫಿರ್ಯಾಧಿದಾರರ ಮಗನ ಸ್ನೇಹಿತನಾದ ಆರೋಪಿ-1 ರವರು ತಾನು ವಿಜಯ್ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದು, ತನಗೆ ವಿಜಯ್ ಬ್ಯಾಂಕ್‌ನ ಕೇಂದ್ರ ಕಛೇರಿಯ ಎಂ.ಡಿ ಹಾಗು ಜನರಲ್ ಮ್ಯಾನೇಜರ್ ರವರು ಬಹಳ ಪರಿಚಯವಿದ್ದು, ವಿಜಯ್ ಬ್ಯಾಂಕ್ ನಲ್ಲಿ ಕೆಲಸ ಕೊಡಿಸುತ್ತೇನೆಂದು ನಂಬಿಸಿದ್ದು, ಆರೋಪಿ-1 ರಿಂದ 4 ರವರು ಒಳಸಂಚು ಮಾಡಿ ಫಿರ್ಯಾಧಿ ಮಕ್ಕಳಾದ ತ್ರಿವೇಣಿ, ಉಮ ಮಹೇಶ್ವರ, ಫಿರ್ಯಾಧಿ ಸೊಸೆ ಸಂಧ್ಯಾ, ಫಿರ್ಯಾಧಿ ಸಂಭಂದಿಯಾದ ಚರಣ್ ಹಾಗು ಫಿರ್ಯಾದಿ ಮಗನ ಸ್ನೇಹಿತ ಲೋಕೇಶ್	ಪ್ರಕರಣಕ್ಕೆ ಮತ್ತು ಬ್ಯಾಂಕ್ ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆಯುವುದು ಬಾಕಿ ಇದೆ.	ಸದರಿ ಪ್ರಕರಣಗಳಲ್ಲಿ ಬ್ಯಾಂಕ್‌ನಿಂದ ದಾಖಲಾತಿಗಳನ್ನು ಪಡೆಯಲು ಪ್ರಕರಣ ಹಾಲಿ ತನಿಖೆಯಲ್ಲಿದೆ

					ಕುಮಾರ್ ರವರಿಗೆ ವಿಜಯ್ ಬ್ಯಾಂಕ್ ನಲ್ಲಿ ಕೆಲಸ ಕೊಡಿಸುತ್ತೇವೆಂದು ತಲಾ 3 ಲಕ್ಷ ರೂ ಹಣದಂತೆ ಒಟ್ಟು 15 ಲಕ್ಷ ರೂಗಳನ್ನು ನಗದು. ಚೆಕ್. ಆನ್ ಲೈನ್. ಹಾಗು ಕ್ರೆಡಿಟ್ ಕಾರ್ಡ್ ಮೂಲಕ ಪಡೆದುಕೊಂಡು, ನಕಲಿ ಆದೇಶ ಪ್ರತಿಯನ್ನು ಕಳುಹಿಸಿ, ಸದರಿಯವರಿಗೆ ನಂಬಿಸಿ ಮೋಸ ಮಾಡಿದ್ದು, ಕಾರಣ ಆರೋಪಿ-1 ರಿಂದ 4 ರವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆಯ ಕೈಗೊಂಡಿದೆ.		
3.	ಕುಡುತಿನಿ	103/2019 ಕಲಂ: 103/2019 120(ಬಿ),143,147,148323,324,354,504,506(2),420,427,ರೆವಿ 149 ಐ.ಪಿ.ಸಿ.	ಶ್ರೀ ಕೆ ವೆಂಕಟಸುಬ್ಬರೆಡ್ಡಿ ತಂದೆ ಬೈಯಪ್ಪ ರೆಡ್ಡಿ ವರ್ಷ ರೆಡ್ಡಿ ಜನಾಂಗ ವ್ಯವಸಾಯ ವಾಸ ಹಳೆದರೋಜಿ ಗ್ರಾಮ ಸಂಡೂರು ತಾಲೂಕು	1)ಎನ್.ಮಂಜುನಾಥ 2)ಎನ್. ಈರಣ್ಣ 3ರಾಮಾಂಜಿನಿ 4ಎನ್.ಶಂಕ್ರಪ್ಪ 5ಮಾರೇಶ 6ಹೊನ್ನೂರಪ್ಪ 7ಯೋಗೇಶ್ .	ಸುಮಾರು 2 ವರ್ಷಗಳ ಹಿಂದೆ ಪಿರ್ಯಾದಿಯಾದ ವೆಂಕಟಸುಬ್ಬಾರೆಡ್ಡಿ ರವರು ಎನ್. ಮಂಜುನಾಥ,ವಾಸೀಂ,ರಂಗಸ್ವಾಮಿ,ಇಮ್ರಾನ್ ರವರು ಕೂಡಿಕೊಂಡು ನಿರುದ್ಯೋಗಿಗಳಿಗೆ ರೈಲ್ವೆ	ಇಲ್ಲಾ	ಪಿ.ಟಿ
			ಬಳ್ಳಾರಿ ಜಿಲಿ	8ರಂಗಸ್ವಾಮಿ .9ವಾಸೀಂ . 10ಇಮ್ರಾನ್ 11ದೀಪಕ್ ವಾಲ್	ಇಲಾಖೆಯಲ್ಲಿ ನೌಕರಿ ಕೊಡಿಸುವುದಾಗಿ ಸುಮಾರು 65 ಜನರಿಂದ ತಲಾ 6ಲಕ್ಷ ರೂ.ಗಳನ್ನು ಪಡೆದು ಕೊಂಡು (ಒಟ್ಟು 3.90		

					ಕೋಟ್) ಪಡೆದು ಕೊಂಡು ದೆಹಲಿಯಲ್ಲಿರುವಾ ದೀಪಕ್ ಪಾಲ್ ರವರಿಗೆ ಕೊಟ್ಟಿದ್ದು ಅವರ ನೌಕರಿ ಕೊಡಿಸದೇ ಮತ್ತು ಹಣವನ್ನು ಹಿಂದಿರುಗಿಸದೇ ಮೋಸಮಾಡಿರುತ್ತಾರೆ. ಸದ್ರಿ ಹಣವನ್ನು ಎನ್. ಮಂಜುನಾಥನು ನೌಕರಿ ಇಲ್ಲದಾದರೇ ಹಣ ಹಿಂದಿರುಗಿಸುವುದಾಗಿ ಪಿರ್ಯಾದಿಗೆ ಹೇಳಿದ್ದು ಇರುತ್ತದೆ. ಅವರು ಸುಮಾರು ಸಲ ಎನ್. ಮಂಜುನಾಥನನ್ನು ಹಣವನ್ನು ಕೇಳಿದರೆ ಕೊಡುವುದಾಗಿ ತಿಳಿಸುತ್ತಾ ಬಂದಿರುತ್ತಾರೆ. ನಂತರ ದಿನಾಂಕ; 27/08/2019 ರಂದು ರಾತ್ರಿ 9;00 ಗಂಟೆಗೆ ಪಿರ್ಯಾದಿ ತನ್ನ ಹೆಂಡತಿಯಾದ ವೆಂಕಟಲಕ್ಷ್ಮೀ ರವರನ್ನು ತನ್ನ ಕಾರಿನ ನಂ ಕೆಎ/17/ಪಿ/5727 ನೇದ್ದರಲ್ಲಿ. ಉಳಿದವರು ಕೈ ಕಾಲುಗಳಿಂದ ಒಡೆದಿರುತ್ತಾರೆ_ ತಮ್ಮ ಜೀವ ಉಳಿದರೆ ಸಾಕು ಮ್ಮತ್ತಾ ದಿಕ್ಕಾಪಾಲಾಗಿ ಓಡಿರುತ್ತಾರೆ.ಪಿರ್ಯಾದಿ		

					ಮತ್ತು ವೆಂಕಟಲಕ್ಷ್ಮಿ ಗಾಯಗಳು ಆಗಿರುತ್ತವೆ. ಸದ್ರಿ ಪ್ರಸ್ತುತ ಬಳ್ಳಾರಿ ವೆಂಕಟರಾಮನೇನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ.		

2020

	ಸಿರುಗುಪ್ಪ	36/2020 ಕಲಂ 420-406-506 ರೆ/ವಿ 34 ಐ.ಪಿ.ಸಿ. 01-03-2020	ಶ್ರೀ.ಎಸ್.ಎನ್.ಹೋನ ಹ್ನುರುಪ್ಪ ತಂದೆ ಚಿದಾನಂದಪ್ಪ 34ವರ್ಷ,ವಾಲ್ಮೀಕಿ ಜನಾಂಗ. ವಾಸ: ಕೃಷ್ಣನಗರ ಸಿರುಗುಪ್ಪ	01) ಲಕ್ಷ್ಮಣನಾಯ್ಕ ವಾಸ:ಹರಪನಹಳ್ಳಿ ತಾಲೂಕಿನ ಬೆಂಡಿಗಿರಿ ತಾಂಡಾದ 02)ವನಜಾಕ್ಷಿ 03)ಮಿಥುನ	ಈ ದಿನ ದಿನಾಂಕ: 01-03-2020 ರಂದು ರಾತ್ರಿ 8-00 ಗಂಟೆಗೆ ಫಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ. ನಾನು ಎಂ.ಎ. ವಿದ್ಯಾಭ್ಯಾಸವನ್ನು ಮಾಡಿ 2016 ಡಿಸೆಂಬರ್ ತಿಂಗಳಲ್ಲಿ ಕೆ.ಪಿ.ಎಸ್.ಸಿ.ಯ ನೇಮಕಾತಿ ಅಧಿಸೂಚನೆಯ ಮೇರೆಗೆ ಸಬ್-ರಿಜಿಸ್ಟ್ರಾರ್ (ಉಪ-ನೊಂದಣಿ ಅಧಿಕಾರಿ) ಹುದ್ದೆಗೆ ಪರೀಕ್ಷೆಯನ್ನು ಬರೆಯಲು ಶೇಷಾದ್ರಿಪುರಂ ಬೆಂಗಳೂರಿಗೆ ಹೋದಾಗ ನನಗೆ ಹರಪನಹಳ್ಳಿ ತಾಲೂಕಿನ ಬೆಂಡಿಗಿರಿ ತಾಂಡಾದ ಲಕ್ಷ್ಮಣನಾಯ್ಕ ಈತನ ಪರಿಚಯವಾಗಿರುತ್ತದೆ. ನಂತರ 2017 ನೇ ಜನವರಿಯಲ್ಲಿ ಲಕ್ಷ್ಮಣನಾಯ್ಕನು ನನಗೆ ಫೋನ್ ಮಾಡಿ ಕೆ.ಪಿ.ಎಸ್.ಸಿ. ಇಲಾಖೆಯಲ್ಲಿ ನನಗೆ ಒಬ್ಬರ ಪರಿಚಯ ಇರುತ್ತದೆ ನಿನಗೆ ಉಪ-ನೊಂದಣಿ ಅಧಿಕಾರಿ ಹುದ್ದೆ ಕೊಡಿಸುತ್ತೇನೆಂದು ಹೇಳಿ ಮಾತಾಡಿ ರೂ. 5 ಲಕ್ಷರೂಪಾಯಿಗಳನ್ನು ಮತ್ತು ನನ್ನ 10ನೇ ತರಗತಿ ಅಂಕಪಟ್ಟಿ, ಪದವಿ ಅಂಕಪಟ್ಟಿ ಮೂಲ ಪ್ರತಿಗಳನ್ನು ತರಲು ಹೇಳಿದನು. ನಂತರ ಲಕ್ಷ್ಮಣ ನಾಯ್ಕ ಈತನು ಹೇಳಿದಂತೆ ಜನವರಿ ತಿಂಗಳಲ್ಲಿ ನಾನು ಹಣ ಮತ್ತು ನನ್ನ ಅಂಕ ಪಟ್ಟಿಯ ಮೂಲ ದಾಖಲಾತಿಗಳನ್ನು ಕೊಡಲು ನನ್ನ ಸ್ನೇಹಿತನಾದ ಚಾಂದ್ಬಾಷ ಇವರೊಂದಿಗೆ ಬೆಂಗಳೂರಿನ ಇಂದ್ರಪ್ರಸ್ತ ಹೋಟೆಲ್ ಗೆ ಹೋದಾಗ ಲಕ್ಷ್ಮಣ ನಾಯ್ಕ ಇವರು ಬಂದು ನನಗೆ ಕೆ.ಪಿ.ಎಸ್.ಸಿ. ಇಲಾಖೆಯ ಸದಸ್ಯ	-	ಆರೋಪಿತರನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡಲು ಹಾಲಿ ಪಿ.ಐ. ಸಿ.ಇ.ಎನ್. ಠಾಣೆ ರವರಲ್ಲಿ ತನಿಖೆಯಲ್ಲಿರುತ್ತದೆ.

					ವನಜಾಕ್ಷಿ ಮತ್ತು ಮಿಥುನ್ ಪ್ರಿನ್ಸಿಪಲ್ ಸೆಕ್ರೆಟರಿ ಎಂದು ಹೇಳಿ ಇವರೊಂದಿಗೆ ದಿ.02-12-2017 ರಂದು ಪೋನಿನಲ್ಲಿ ಪರಿಚಯ ಮಾಡಿ ಮಾತಾಡಿಸಿರುತ್ತಾನೆ. ನಂತರ ನಾನು ನನ್ನ ಅಂಕಪಟ್ಟಿಗಳ ದಾಖಲಾತಿಗಳನ್ನು ಕೊಟ್ಟು ಅವರು ತಿಳಿಸಿದಂತೆ ಲಕ್ಷ್ಮಣ ನಾಯ್ಕ ಇವರ ಖಾತೆ ನಂ. 26141010011587/20286935700/64026 818782 ಖಾತೆಗಳಿಗೆ ರೂ.27.50.000/- ಹಣವನ್ನು ಸಿರುಗುಪ್ಪದ ನನ್ನ ಎಕ್ಸಿಸ್ ಬ್ಯಾಂಕ್ ಖಾತೆ ಮುಖಾಂತರ ಹಾಕಿರು ತ್ತೇನೆ. ನಂತರ ನನಗೆ ವನಜಾಕ್ಷಿ ಎಂಬುವರು ಫೋನ್ ಮಾಡಿ ನಾನು ಕೆ.ಪಿ.ಎಸ್.ಸಿ. ಸದಸ್ಯಳಾಗಿರುತ್ತೇನೆ ನಿನ್ನ ಮತ್ತು ಇತರೆ 4 ಜನರ ಕೆಲಸ ಎರಡು ಹಿಂದೆ ಮುಗಿದಿದೆ ಉಳಿದ ಹಣವನ್ನು ಮಿಥುನ್ ಎಂಬುವವರ ಖಾತೆಗೆ ಹಾಕಲು ತಿಳಿಸಿದ್ದರಿಂದ ನಾನು ಮಿಥುನ್ ಇವರ ಕೆನರಾ ಬ್ಯಾಂಕ್ ಖಾತೆ ನಂ.2638101007141 ಮತ್ತು ಎಸ್.ಬಿ.ಐ. ಖಾತೆ ನಂ.20345810980 ಖಾತೆಗಳಿಗೆ ರೂ. 14,68,000/-ಗಳನ್ನು ನಾನು ನನ್ನ ಎಕ್ಸಿಸ್ ಬ್ಯಾಂಕ್ ಖಾತೆಯಿಂದ ಹಾಕಿರುತ್ತೇನೆ. ನಂತರ ನನ್ನ ಯುಕೋ ಬ್ಯಾಂಕ್ ಖಾತೆ ಯಿಂದ ಮಿಥುನ್ ಈತನ ಕೆನರಾ ಬ್ಯಾಂಕ್ ಖಾತೆ ನಂ.2639101007141 ನೇದ್ದಕ್ಕೆ ರೂ.2.10.000/-ಗಳನ್ನು ಹಾಕಿರುತ್ತೇನೆ. ನಂತರ ವನಜಾಕ್ಷಿ ನನಗೆ ಫೋನ್ ಮಾಡಿ ನೀನು 14 ನೇ ಸ್ಥಾನದಲ್ಲಿ ಇದ್ದೀಯಾ ಉಳಿದ ಹಣ ತರಲು ತಿಳಿಸಿದ್ದರಿಂದ ನಾನು ನನ್ನ ಸ್ನೇಹಿತನಾದ ಚಾಂದ್ ಬಾಷನೊಂದಿಗೆ ದಿ. 05-12-2017 ರಂದು ಬೆಂಗಳೂರಿಗೆ ಹೋಗಿ ವನಜಾಕ್ಷಿ ಮತ್ತು ಮಿಥುನ್ ಇವರಿಗೆ ನಗದು ರೂ.4.60.000/-ರೂಗಳನ್ನು ವನಜಾಕ್ಷಿ ಇವರ ಮನೆಯಲ್ಲಿರುವ ನೋಟು ಎಣಿಸುವ ಯಂತ್ರದಲ್ಲಿ ಎಣಿಸಿಕೊಂಡಿರುತ್ತಾರೆ. ನಂತರ ವನಜಾಕ್ಷಿ ಇವರು ನನಗೆ ಫೋನ್ ಮಾಡಿ ಕೆ.ಪಿ.ಎಸ್.ಸಿ. ಯಲ್ಲಿ ಓಎಂಆರ್ ನಲ್ಲಿ ಕೆಲಸ		

					ಮಾಡುವ ಇವರಿಗೆ ಹಣ ಕೊಡಬೇಕೆಂದು ಕೇಳಿದಾಗ ನನಗೆ ಅನುಮಾನ ಬಂದು ನಾನು ಬೆಂಗಳೂರಿಗೆ ಹೋಗಿ ನನ್ನ ಹಣವನ್ನು ವಾಪಾಸು ಕೊಡಲು ಕೇಳಿದಾಗ ವನಜಾಕ್ಷಿ ಮತ್ತು ಮಿಥುನ್ ಹಾಗೂ ಲಕ್ಷ್ಮಣನಾಯ್ಕ ಮೂರು ಜನರು ಸೇರಿ ಇನ್ನೊಮ್ಮೆ ಹಣ ಕೇಳಲು ಬಂದರೆ ನಿನ್ನ ಪ್ರಾಣ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದರಿಂದ ನಾನು ಮತ್ತು ನನ್ನ ಸ್ನೇಹಿತ ಇಬ್ಬರು ದಿ.28-03-2019 ರಂದು ಬೆಂಗಳೂರಿನ ಕೆ.ಆರ್. ಮಾರ್ಕರ್?ಟ್ ನಲ್ಲಿರುವ ಸಿಸಿಬಿ ಪೊಲೀಸ್ ಠಾಣೆಗೆ ಹೋಗಿ ವನಜಾಕ್ಷಿ ಮತ್ತು ಮಿಥುನ್ ಜಗಧೀಶ ಇವರ ಮೇಲೆ ದೂರು ನೀಡಿದ್ದು ಇವರಿಬ್ಬರು ಪ್ರತಿ ತಿಂಗಳಿಗೆ 2 ರಿಂದ 3 ಲಕ್ಷ ರೂಪಾಯಿ ಕೊಟ್ಟು ತೀರಿಸುವುದಾಗಿ ಹೇಳಿ ವನಜಾಕ್ಷಿ ಇವರು ತಮ್ಮ ಸ್ವಂತ ಅಕ್ಷರದಲ್ಲಿ ಬರೆದು ಕೊಟ್ಟಿರುತ್ತಾರೆ. ವನಜಾಕ್ಷಿ ಇವರು ತಾನು ಕೆ.ಪಿ.ಎಸ್.ಸಿ.ಇಲಾಖೆಯಲ್ಲಿ ಸದಸ್ಯೆ ಎಂದು. ಮಿಥುನ್ ಜಗದೀಶ ಈತನು ಕೆಪಿಎಸ್.ಸಿ.ಯಲ್ಲಿ ಪ್ರಿನ್ಸಿಪಲ್ ಸೆಕ್ರೆಟರಿ ಎಂದು ಹೇಳಿ ಲಕ್ಷ್ಮಣ ನಾಯ್ಕ ಈತನು ಪರಿಚಯಿಸಿ ನನಗೆ ಕೆಲಸ ಕೊಡಿಸುವುದಾಗಿ ಮೂರು ಜನರು ವಂಚಿಸಿ ನಂಬಿಕೆ ದ್ರೋಹ ಮಾಡಿ ನನ್ನಿಂದ ಒಟ್ಟು ರೂ.48.88.000/-ರೂಪಾಯಿಗಳನ್ನು ಪಡೆದು ಮೋಸ ಮಾಡಿದ ಮೇಲ್ಕಂಡ ಮೂರು ಜನರ ಮೇಲೆ ಕಾನೂನು ಕ್ರಮ ಜರುಗಿಸಲು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿದೆ.		
5.	ಕುಡುತಿನಿ	115/2021 ಕಲಂ: 406, 420. 468 ಐಪಿಸಿ	ಹೆಚ್.ಮಂಜುನಾಥ ತಂದೆ ಈರಣ್ಣ, ವ:30 ವರ್ಷ, ವಾಲ್ಮಿಕಿ ಜನಾಂಗ, ವ್ಯವಸಾಯ, ವಾಸ: ಮಾದಿನಹಳ್ಳಿ ಗ್ರಾಮ. ಕಂಪ್ಲಿ ತಾ. ಮೊ.ನಂ.8722819	ದೀಪಕ್ ಪಾಲ್ ತಂದೆ ರಾಜ್ ಪಾಲ್, ವ:35 ವರ್ಷ, ವಾಸ: ಸಿ-01, ಸ್ಟ್ರೀಟ್-09, ಖಾಜೀರಿ ಖಾಸ್, ನಾರ್ತ್ ಈಸ್ಟ್ ದೆಹಲಿ.	ಈ ದಿನ ದಿ.22.07.2021 ರಂದು ಪ್ರತ್ಯಾಧಿದಾರರಾದ ಮಂಜುನಾಥ ಇವರು ಕುಡುತಿನಿ ಪೊಲೀಸ್ ಠಾಣೆಯಲ್ಲಿ ಹಾಜರಾಗಿ ನೀಡಿದ ದೂರು ಏನೆಂದರೆ ಕಂಪ್ಲಿಯ ವಾಸಿಗಳಾದ ಇಮ್ರಾನ್ ಮತ್ತು ಮಾಬುಸಾಬ್ ಎಂಬುವವರ ಮುಖಾಂತರ 2017ನೇ ಸಾಲಿನಲ್ಲಿ ದೆಹಲಿಯ ವಾಸಿಯಾದ ದೀಪಕ್ ಪಾಲ್ ತಂದೆ ರಾಜ್ ಪಾಲ್ ಎಂಬ ವ್ಯಕ್ತಿ ಪರಿಚಯ ಆಗಿದ್ದು.	ಇಲ್ಲಾ	ಸಾಕ್ಷ್ಯಾಧಾರ ಗಳನ್ನು ಸಂಗ್ರಹಿಸಲು ಹಾಗೂ ಆರೋಪಿತರನ್ನು

